


# ಶ್ರೀದೇವಿ ಮಹಾತ್ಮೆ





ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಪಂಚದಶಾಕ್ಷರೀ ಸ್ತೋತ್ರ ಮಹಿಮೆ

**ಗೌರೀಪುತ್ರ ನಮಸ್ತೇಸ್ತು ಶಂಕರ ಪ್ರಿಯ ಪುತ್ರಕ । ನಮಸ್ತೇ ದೇವದೇವೇಶ ನಮಸ್ತೇ ಗಣನಾಯಕ ॥**

**ಶ್ರೀವಿದ್ಯಾಂ ಜಗತಾಂ ಧಾತ್ರೀಂ ಸರ್ಗಸ್ಥಿತಿಲಯೇಶ್ವರೀಂ । ನಮಾಮಿ ಲಲಿತಾಂ ನಿತ್ಯಾಂ ಮಹಾತ್ರಿಪುರಸುಂದರೀಂ ॥**

ಶ್ರೀಲಲಿತಾ ಪಂಚದಶಾಕ್ಷರೀ ಮಂತ್ರವು, ಶ್ರೀ ಹಯಗ್ರೀವರ ಅವತಾರವನ್ನು ಎತ್ತಿದ್ದ ಶ್ರೀ ಮಹಾವಿಷ್ಣುವು ಅಗಸ್ತ್ಯ ಮಹರ್ಷಿಗಳಿಗೆ ಉಪದೇಶ ಮಾಡಿದ, ಪರಂಪರಾನುಗತವಾಗಿ ಬಂದ ದಿವ್ಯ ಮಂತ್ರವಾಗಿದೆ.

**ಕ, ಏ, ಈ, ಲ, ಹ್ರೀಂ ;**

**ಹ, ಸ, ಕ, ಹ, ಲ, ಹ್ರೀಂ ;**

**ಸ, ಕ, ಲ, ಹ್ರೀಂ ;**

ಎಂಬುದು ಶ್ರೀಲಲಿತಾ ಪಂಚದಶಾಕ್ಷರೀ ಮಂತ್ರವು.

ಇಲ್ಲಿ ಮೂರು "ಕ" ವರ್ಣಗಳು, ಎರಡು "ಹ" ಕಾರಗಳು, ಶಿವನ ವರ್ಣನೆಯ ಭಾಗಗಳೆಂದು ಹೇಳಲ್ಪಟ್ಟಿವೆ. ಉಳಿದವುಗಳೆಲ್ಲವೂ ಶಕ್ತಿ ವರ್ಣಗಳು. ಹ್ರೀಂ ಕಾರವು ಉಭಯಾತ್ಮಕವಾಗಿದೆ.

ಹದಿನೈದು ಅಕ್ಷರಗಳ ಈ ಶ್ರೀಲಲಿತಾ ಮಂತ್ರವು ಮೂರು ಕೂಟಗಳಾಗಿ ವಿಭಾಜಿಸಲ್ಪಟ್ಟಿದೆ. ಅವು ಕ್ರಮವಾಗಿ ವಾಗ್ಭವ ಕೂಟ, ಕಾಮರಾಜ ಕೂಟ ಮತ್ತು ಶಕ್ತಿ ಕೂಟಗಳು. ಈ ಮೂರು ಕೂಟಗಳ ಅಥವಾ ಪಾದಗಳ ತತ್ವಗಳು, ಸೃಷ್ಟಿ, ಸ್ಥಿತಿ ಮತ್ತು ಲಯಗಳ ತತ್ವಗಳಾಗಿವೆ.

ಶ್ರೀಮಾತೆಗೆ ಅತ್ಯಂತ ಪ್ರೀತಿಪಾತ್ರವೂ, ಶ್ರೀವಿದ್ಯಾ ಮಂತ್ರಸ್ವರೂಪವೂ ಆದ ಪಂಚದಶಾಕ್ಷರೀ ಮಂತ್ರವನ್ನು ಮೂರು ಕೂಟಗಳಾಗಿ ವಿಭಾಜಿಸಿ, ವಶಿನ್ಯಾದಿ ವಾಗ್ದೇವತೆಗಳು, ಆ ಮೂರು ಕೂಟಗಳನ್ನು, ದೇವಿಯ ಮಂತ್ರ ಶರೀರವಾಗಿ ಅಭಿವರ್ಣಿಸಿದ್ದಾರೆ.

**" ಶ್ರೀಮದ್ವಾಗ್ಭವಕೂಟೈಕಸ್ವರೂಪಮುಖಪಂಕಜಾ "**

ಕ, ಏ, ಈ, ಲ, ಹ್ರೀಂ ಈ ಐದು ಅಕ್ಷರಗಳೂ, ಜಗನ್ಮಾತೆಯ ಮುಖಪಂಕಜ, ವಾಕ್ಕು, ಜ್ಞಾನಗಳು. ವಾಕ್ಕಿಗೆ ಜನ್ಮಸ್ಥಾನವಾದ ದೇವಿಯ ಮುಖಬಿಂಬವೇ ವಾಗ್ಭವ ಕೂಟ. ಸೌಂದರ್ಯ ಲಹರಿ ಎನ್ನುವ ಮುಖಪಂಕಜ ದರ್ಶನ ಮಾಡಿ ಪುಳಕಿತರಾದರೆ, ವಾಗ್ಭವ ಕೂಟವೆಂದರೆ ಸಾಕು, ಕವಿತ್ವ ತಾನೇ ತಾನಾಗಿ ಹೊರಹೊಮ್ಮುತ್ತದೆ.

**" ಕಂಠಾಧಃಕಟಿಪರ್ಯಂತಮಧ್ಯಕೂಟಸ್ವರೂಪಿಣೀ "**

ಕಂಠದಿಂದ ಕಟಿ ಪ್ರದೇಶದವರೆಗೂ ಶ್ರೀಮಾತೆಯು ಪಂಚದಶಾಕ್ಷರೀ ಮಂತ್ರದ ಮದ್ಯಕೂಟ ಸ್ವರೂಪಿಣಿಯು. ಪಂಚದಶಾಕ್ಷರೀ ಮಂತ್ರದ **"ಹ, ಸ, ಕ, ಹ, ಲ, ಹ್ರೀಂ",** ಈ ಆರು ಅಕ್ಷರಗಳೂ, ಶ್ರೀಮಾತೆಯ ಕಾಮರಾಜ ಕೂಟ.

ಸರ್ವ ಆಲೋಚನೆಗಳು, ನಾದ, ಜ್ಞಾನಗಳೆಲ್ಲದಕ್ಕೂ ಈ ಕೂಟವು ಸ್ಥಾನವಾಗಿದೆ.

**" ಶಕ್ತಿಕೂಟೈಕತಾಪನ್ನಕಟ್ಯಧೋಭಾಗಧಾರಿಣೀ "**

ಶ್ರೀಮಾತೆಯನ್ನು ಸ್ತುತಿಸುತ್ತಾ ವಾಗ್ದೇವತೆಗಳು, ಕಟಿಯಿಂದ ಕೆಳಗಿನ ಭಾಗವನ್ನು ಶಕ್ತಿಕೂಟವಾಗಿ ವರ್ಣಿಸಿದ್ದಾರೆ.

**"ಸ, ಕ, ಲ, ಹ್ರೀಂ"** ಎನ್ನುವ ನಾಲ್ಕು ಅಕ್ಷರಗಳ ಮಂತ್ರ ಸ್ವರೂಪ ಜಗನ್ಮಾತೆಯ ಮಂತ್ರ ಶರೀರ ಹಾಗೂ ಮಂತ್ರರೂಪಗಳ ವಿವರಣೆಯಾಗಿದೆ.

"ಅತ್ಯಂತ ಗೋಪ್ಯವಾದ ಶ್ರೀದೇವಿಯ ಮೂರು ಕೂಟಗಳ ರೂಪವನ್ನು ಆಪಾದಮಸ್ತಕವಾಗಿ ತಿಳಿಯಲು ಪ್ರಯತ್ನಿಸಿ, ಪಂಚದಶಾಕ್ಷರೀ ಮಂತ್ರದ ಜಪದೊಂದಿಗೆ, ಜಗನ್ಮಾತೆಯ ರೂಪವನ್ನು ಅವಗಾಹನೆ ಮಾಡಿಕೊಳ್ಳುತ್ತಾ, ಈ ನಾಮಗಳನ್ನು ಮನನಮಾಡಿಕೊಂಡರೆ ಸಾಕು, ಆ ಜಗನ್ಮಾತೆಯು ಮಂತ್ರಸ್ವರೂಪಿಣಿಯಾಗಿ ನಮ್ಮ ಮುಂದೆ ಸಾಕ್ಷಾತ್ಕರಿಸುತ್ತಾಳೆ" ಎಂದಿದ್ದಾರೆ ವಶಿನ್ಯಾದಿ ವಾಗ್ದೇವತೆಗಳು. ನಮ್ಮಂತಹ ಸಾಧಾರಣ ಭಕ್ತರೂ ಅದನ್ನು ಸಾಧಿಸಬಹುದೆಂದಿದ್ದಾರೆ, ವಶಿನ್ಯಾದಿ ವಾಗ್ದೇವತೆಗಳು.

**" ಶ್ರೀಮದ್ವಾಗ್ಭವಕೂಟೈಕಸ್ವರೂಪಮುಖಪಂಕಜಾ।**

**ಕಂಠಾಧಃಕಟಿಪರ್ಯಂತಮಧ್ಯಕೂಟಸ್ವರೂಪಿಣೀ।**

**ಶಕ್ತಿಕೂಟೈಕತಾಪನ್ನಕಟ್ಯಧೋಭಾಗಧಾರಿಣೀ। "**

ಈ ನಾಮತ್ರಯವು, ಶ್ರೀಲಲಿತಾ ಮಂತ್ರವಾದ, ಪಂಚದಶಾಕ್ಷರೀ ಮಂತ್ರದ ಮೂರು ವಿಭಾಗಗಳನ್ನೂ ಪ್ರತಿಪಾದಿಸುತ್ತದೆ. ಈ ಮೂರು ಭಾಗಗಳೂ ಸೃಷ್ಟಿ, ವ್ಯಾಪಾರ, ಲಯದ ತತ್ವಗಳಿಗೆ ಅನುಸಾರವಾಗಿದೆಯೆಂದು, ಶ್ರೀಲಲಿತಾ ಪಂಚದಶಾಕ್ಷರೀ ಮಂತ್ರ ರಹಸ್ಯದಲ್ಲಿ ತಿಳಿಸಿರುವುದು. ಸೃಷ್ಟಿಯೆಲ್ಲಾ ವಾಗ್ಭವ ಕೂಟವೆನಿಸುವ ಕಳಾಸ್ವರೂಪದಿಂದ ಪ್ರಾರಂಭವಾಗುವುದು. ವ್ಯಾಪಾರವು ಮಧ್ಯದಲ್ಲಿರುವುದರಿಂದ ಮಧ್ಯಕೂಟವಾಗಿರುವುದು. ವ್ಯಾಪಾರ ಮತ್ತು ಸೃಷ್ಟಿಗಳು ಲಯವಾಗಿ ಸರ್ವವೂ ಶಕ್ತಿ ರೂಪದಲ್ಲಿ ಬಂದು ನಿಂತು, ಅನಂತರ ಪರಬ್ರಹ್ಮ ಸ್ವರೂಪ ವಾಗಬೇಕಾದುದರಿಂದ ಲಯವು ಶಕ್ತಿಕೂಟ ವಾಗಿರುವುದು. ಪಿಂಡಾಂಡವಾದ ನಮ್ಮ ದೇಹದ ಸೃಷ್ಟಿಯು, ವಾಗ್ಭವ ಕೂಟಕ್ಕೆ ಸೇರಿದುದು. ನಮ್ಮ ವ್ಯಾಪಾರವು ಕ್ರಿಯಾಶಕ್ತಿಗೆ ಪ್ರಧಾನ ಸ್ಥಳವಾದ, ಕಂಠದಿಂದ ಸೊಂಟದವರೆಗಿನ ಅಂಗಗಳಿಂದ ನಡೆಯುವುದು. ಆದುದರಿಂದ ಇದು ಮಧ್ಯಕೂಟಕ್ಕೆ ಸೇರಿದುದು. ಲಯ ಅಥವಾ ಮೋಕ್ಷವು ನಮ್ಮ ಸೊಂಟದ ಕೆಳಗೆ ಮೂಲಾಧಾರ ಚಕ್ರದಲ್ಲಿರುವ ಕುಂಡಲಿನೀ ಶಕ್ತಿಗೆ ಸಂಬಂಧ ಪಟ್ಟಿರುವುದರಿಂದ, ಮೂರನೆಯದು ಶಕ್ತಿಕೂಟ ವಾಗಿರುವುದು.

ಈಗ, **"ಮೂಲಮಂತ್ರಾತ್ಮಿಕಾಯೈ"**

**" ಮೂಲಕೂಟತ್ರಯ ಕಲೇವರಾಯೈ"**

**" ಹ್ರೀಂಕಾರ್ಯೈ"**

**" ಹ್ರೀಂಮತ್ಯೈ"** ಎಂಬ ನಾಮಗಳಲ್ಲಿ ವಶಿನ್ಯಾದಿ ವಾಗ್ದೇವತೆಗಳು, ಶ್ರೀಲಲಿತಾ ದೇವಿಯು,

**ಹ್ರೀಂ ಎಂಬ ಏಕಾಕ್ಷರ ಸ್ವರೂಪಿಣಿಯು, ಸಚ್ಚಿದಾನಂದ ಸ್ವರೂಪಳು, ಹ್ರೀಂ ಎಂಬ ತತ್ವವನ್ನು ಹೊಂದಿರುವವಳು,**

ಎಂದು ತಿಳಿಸುತ್ತಾ, , ಶ್ರೀಲಲಿತಾ ಪರಮೇಶ್ವರಿಯ ಮೂಲಮಂತ್ರವು ಹ್ರೀಂ ಎಂಬ ಬೀಜಾಕ್ಷರವೇ ಹೊರತು, ಮಂತ್ರದಲ್ಲಿನ ಇತರ ಅಕ್ಷರಗಳಲ್ಲ. ಆದರೆ ಈ ಮೂಲಮಂತ್ರವು ಮೇಲಿನ ನಾಮಗಳಲ್ಲಿ ತಿಳಿಸಿರುವ ಮೂರು ಕೂಟಗಳ ಸ್ವರೂಪವಾಗಿಯೂ ಇರುವುದು. ಹೀಗಿರುವ ತತ್ವ ಪ್ರತಿಪಾದನೆಯಿಂದಲೇ, ಪ್ರತೀ ಪಾದದ ಅಂತ್ಯದಲ್ಲಿ **ಹ್ರೀಂ** ಎಂಬ ಬೀಜಾಕ್ಷರವು ಇರುವುದಾಗಿದೆ. ಬೀಜಾಕ್ಷರದಿಂದೊಡಗೂಡಿದ ಮಂತ್ರದ ಮೂರು ವಿಭಾಗಗಳು, ಶ್ರೀದೇವಿಯ ವಿರಾಟ್ ಸ್ವರೂಪವಾದ ದೇಹವಾಗಿದೆ. ಅಂದರೇ, ಮೂರು ವಿಭಾಗಗಳೂ ಸೇರಿದ್ದು ವೃಕ್ಷ. ಮೂಲಮಂತ್ರವಾದ **ಹ್ರೀಂ** ಎನ್ನುವುದು ಬೀಜ.

**ಈಗ ಮೂಲಮಂತ್ರದಲ್ಲಿರುವ ಅಕ್ಷರ ಶಕ್ತಿಗಳ ವಿವರಣೆ ;**

ಶ್ರೀಲಲಿತಾ ಮಂತ್ರದಲ್ಲಿ, 12 ಅಕ್ಷರಗಳು, 3 ಹ್ರೀಂ ಕಾರಗಳು, ಇವೆ. ಮಂತ್ರವು ಅಕ್ಷರಗಳ ಸಂಯೋಗದಿಂದುಂಟಾಗುವ ಪದಗಳನ್ನು ಒಳಗೊಂಡಿಲ್ಲ. ಆದುದರಿಂದ, ಪದಗಳ ಅರ್ಥಗಳ ಮೂಲಕ ಮಂತ್ರದ ಮಹಿಮೆಯನ್ನು ಅರಿಯಲು ಸಾಧ್ಯವಿಲ್ಲ. ಮಂತ್ರದಲ್ಲಿರುವ ಪ್ರತ್ಯೇಕ ಪ್ರತ್ಯೇಕವಾದ ಅಕ್ಷರಗಳ ಶಕ್ತಿಯಿಂದಲೇ ಮಂತ್ರದ ಮಹಿಮೆಯನ್ನು ತಿಳಿಯಬೇಕಾಗಿದೆ.

ಶ್ರೀಲಲಿತಾ ಮಂತ್ರದಲ್ಲಿರುವ ಅಕ್ಷರ ಶಕ್ತಿಗಳ ವಿವರಣೆಗೆ, ಶ್ರೀ ಶಂಕರಭಗವತ್ಪಾದರು ಸೌಂದರ್ಯ ಲಹರಿಯಲ್ಲಿ ಹೇಳಿರುವುದೇನೆಂದರೆ,

**ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ**
**ಸ್ಮರೋ ಹಂಸಃ ಶಕ್ರಸ್ತದನು ಚ ಪರಾಮಾರಹರಯಃ ।**
**ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾ**
**ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥**

"ಎಲೈ ಜಗನ್ಮಾತೆಯೇ, ಕ, ಏ, ಈ, ಲ ಎಂಬ ನಾಲ್ಕು ವರ್ಣಗಳು, ಅನಂತರ ಹ, ಸ, ಕ, ಹ, ಲ ಎಂಬ ಐದು ವರ್ಣಗಳು, ತದನಂತರ ಸ,ಕ,ಲ ಎಂಬ ಮೂರು ವರ್ಣಗಳಿಗೆ, ಆಯಾ ವರ್ಣಸಮುದಾಯದ ಅಂತ್ಯದಲ್ಲಿ, ಹ್ರೀಂ ಎಂಬ ಅಕ್ಷರವನ್ನು ಸೇರಿಸಿದರೆ, ಹ್ರೀಂ ಕಾರ ಸ್ವರೂಪವಾದ ನಿನ್ನ ನಾಮದ ಅವಯುವಗಳಾಗುವುವು.

ಅಲ್ಲದೇ ಕ, ಏ, ಈ, ಲ ಎಂಬ ಪ್ರಥಮ ಪಾದದ ಅಕ್ಷರಗಳಿಗೆ, ಶಿವಃ, ಶಕ್ತಿಃ, ಕಾಮಃ, ಕ್ಷಿತಿಃ ಎಂಬ ವಿವರಣೆಯೂ, ಹ, ಸ, ಕ, ಹ, ಲ ಎಂಬ ದ್ವಿತೀಯ ಪಾದದ ಅಕ್ಷರಗಳಿಗೆ, ರವಿಃ, ಶೀತಕಿರಣಃ, ಸ್ಮರಃ, ಹಂಸಃ, ಶಕ್ರಃ ಎಂಬ ವಿವರಣೆಯೂ, ಸ,ಕ,ಲ ಎಂಬ ತೃತೀಯ ಪಾದದ ಅಕ್ಷರಗಳಿಗೆ, ಪರಾ, ಮಾರ, ಹರಿಃ ಎಂಬ ವಿವರಣೆಯೂ ಆಗುವುದು" ಎಂದು ಹೇಳಿರುತ್ತಾರೆ.

ಬೀಜರೂಪವಾದ ಪರಬ್ರಹ್ಮವೇ ವೃಕ್ಷಸ್ವರೂಪವಾದ ವಿರಾಟ್ ಎನಿಸಿದ ಪ್ರಪಂಚರೂಪವಾಗಿ, ಅನಂತರ ಪ್ರಪಂಚವು ಲಯವಾಗಿ, ಪುನಃ ಬೀಜರೂಪವಾದ ಪರಬ್ರಹ್ಮವೇ ನಿಲ್ಲುವ, ಸೃಷ್ಟಿ, ಸ್ಥಿತಿ ಮತ್ತು ಲಯಗಳ ರಹಸ್ಯಾರ್ಥಗಳನ್ನು ಶ್ರೀಲಲಿತಾ ಪಂಚದಶಾಕ್ಷರೀ ಮಂತ್ರವು ಪ್ರತಿಪಾದಿಸುತ್ತದೆ. ಈ ಮಂತ್ರದ ಪ್ರತೀ ಪಾದದ ಅಂತ್ಯದಲ್ಲಿರುವ **"ಹ್ರೀಂ"** ಎನ್ನುವುದೇ**,** ಮುಖ್ಯವಾದ ಬೀಜಸ್ವರೂಪವಾಗಿ, ಸಾಕ್ಷಾತ್ ಪರಬ್ರಹ್ಮವನ್ನೇ ಪ್ರತಿಪಾದಿಸುವುದು. ಹ್ರೀಂಕಾರ ಸ್ವರೂಪವೇ ಸಚ್ಚಿದಾನಂದ ಸ್ವರೂಪಳಾದ ಶ್ರೀಲಲಿತಾ ದೇವಿಯು.

1. ಶ್ರೀ ಶಂಕರಭಗವತ್ಪಾದರು ಕ ಅಕ್ಷರದ ವಿವರಣೆಯಾಗಿ ಶಿವಃ ಎಂದು ಹೇಳಿರುವರು.
   ಕ ಕಾರವು, ಹಿರಣ್ಯಗರ್ಭವನ್ನೂ, ಜಲವನ್ನೂ, ಶಿರಸ್ಸನ್ನೂ ಮತ್ತು ಸುಖ ಮುಂತಾದುವುಗಳನ್ನು ಪ್ರತಿಪಾದಿಸುತ್ತದೆ. ಹಿರಣ್ಯಗರ್ಭದಲ್ಲಿರತಕ್ಕಂತ ಜಗತ್ಕಾರಕ ಮತ್ತು ಧಾರಕ ಶಕ್ತಿಯೇ ಮೊದಲಾದ ಗುಣಗಳು, ವ್ಯಂಜನಗಳಲ್ಲಿ ಪ್ರಥಮಾಕ್ಷರವಾದ ಕಕಾರಕ್ಕೆ ಇರುತ್ತವೆ ಎಂದು ಹೇಳಿರುತ್ತಾರೆ.
   **"ಓಂ ಕಂಕಾರ ಸರ್ವವಿಷಹರ ಕಲ್ಯಾಣದ ಸಪ್ತದಶೇಕ್ಷೇ ಪ್ರತಿತಿಷ್ಟ। "**
   ಸರ್ವವಿಪತ್ತನ್ನೂ ಸಂಹರಿಸಿ ಕಲ್ಯಾಣ ಗುಣಗಳನ್ನು ಕೊಡತಕ್ಕ ಶಿವ ವರ್ಣ ಕಕಾರ.

**ಕಕಾರರೂಪಾ ಕಲ್ಯಾಣೀ ಕಲ್ಯಾಣಗುಣಶಾಲಿನೀ ಕಲ್ಯಾಣಶೈಲನಿಲಯಾ ಕಮನೀಯಾ ಕಲಾವತೀ**
**ಕಮಲಾಕ್ಷೀ ಕಲ್ಮಷಘ್ನೀ ಕರುಣಾಮೃತ ಸಾಗರಾ ಕದಂಬಕಾನನಾವಾಸಾ ಕದಂಬ ಕುಸುಮಪ್ರಿಯಾ**
ಕಂದರ್ಪವಿದ್ಯಾ ಕಂದರ್ಪ ಜನಕಾಪಾಂಗ ವೀಕ್ಷಣಾ ಕರ್ಪೂರವೀಟೀಸೌರಭ್ಯ ಕಲ್ಲೋಲಿತಕಕುಪ್ತಟಾ

ಕಲಿದೋಷಹರಾ ಕಂಜಲೋಚನಾ ಕಮ್ರವಿಗ್ರಹಾ ಕರ್ಮಾದಿಸಾಕ್ಷಿಣೀ ಕಾರಯಿತ್ರೀ ಕರ್ಮಫಲಪ್ರದಾ॥

**ಕಲ್ಲೋಲೋಲ್ಲಸಿತಾಮೃತಾಬ್ಧಿಲಹರೀಮಧ್ಯೇ ವಿರಾಜನ್ಮಣಿ-**
**-ದ್ವೀಪೇ ಕಲ್ಪಕವಾಟಿಕಾಪರಿವೃತೇ ಕಾದಂಬವಾಟ್ಯುಜ್ಜ್ವಲೇ ।**
**ರತ್ನಸ್ತಂಭಸಹಸ್ರನಿರ್ಮಿತಸಭಾಮಧ್ಯೇ ವಿಮಾನೋತ್ತಮೇ**
**ಚಿಂತಾರತ್ನವಿನಿರ್ಮಿತಂ ಜನನಿ ತೇ ಸಿಂಹಾಸನಂ ಭಾವಯೇ॥**

ಕಲ್ಯಾಣವೃಷ್ಟಿಭಿರಿವಾಮೃತಪೂರಿತಾಭಿರ್ಲಕ್ಷ್ಮೀಸ್ವಯಂವರಣಮಂಗಳದೀಪಿಕಾಭಿಃ |
ಸೇವಾಭಿರಂಬ ತವ ಪಾದಸರೋಜಮೂಲೇ ನಾಕಾರಿ ಕಿಂ ಮನಸಿ ಭಾಗ್ಯವತಾಂ ಜನಾನಾಮ್||

ಕಲ್ಯಾಣಾಯುತ ಪೂರ್ಣಚಂದ್ರವದನಾಂ ಪ್ರಾಣೇಶ್ವರಾ ನಂದಿನೀಂ
ಪೂರ್ಣಾಂ ಪೂರ್ಣತರಾಂ ಪರೇಶಮಹಿಷೀಂ ಪೂರ್ಣಾಮೃತಾಸ್ವಾದಿನೀಂ ।
ಸಂಪೂರ್ಣಾಂ ಪರಮೋತ್ತಮಾಮೃತಕಲಾಂ ವಿದ್ಯಾವತೀಂ ಭಾರತೀಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಕಲ್ಯಾಣೀಂ ಕಮಲೇಕ್ಷಣಾಂ ಕಮಲಿನೀಂ ಕಾತ್ಯಾಯಿನೀಂ ಕಾಮಿನೀಂ
ಕಲ್ಯಾಣ ಪ್ರತಿದಾಯಿನೀಂ ಸಕರುಣಾಂ ಜ್ಞಾನಪ್ರಕಾಶಪ್ರದಾಂ ।
ಕರ್ಪೂರಸ್ಥಿರಬಿಂದು ಕುಂದ ಕುಸುಮ ಪ್ರದ್ಯೋತಿನೀಂ ದ್ಯೋತಿನೀಂ
ಕಲ್ಯಾಣಾಯ ಕಲಾವತೀಂ ಸವಿಮಲಾಂ ವಂದೇ ಸದಾ ಸುಂದರೀಂ ॥

2. ಶ್ರೀ ಶಂಕರಭಗವತ್ಪಾದರು ಮಂತ್ರದ ಎರಡನೆಯ ಅಕ್ಷರವಾದ ಏ ಅಕ್ಷರದ ತತ್ವವಾಗಿ ಶಕ್ತಿಃ ಎಂದು ಹೇಳಿರುವರು.

**" ಓಂ ಏಂಕಾರ ಸರ್ವವಶ್ಯಕರ ಶುದ್ಧಸತ್ವ ಏಕಾವಶೇಕ್ಷೇ ಪ್ರತಿತಿಷ್ಟ।"**

ಸರ್ವವನ್ನೂ ಅಧೀನದಲ್ಲಿಟ್ಟುಕೊಳ್ಳುವ ಶಕ್ತಿ ಮತ್ತು ಪವಿತ್ರವಾದ ಶುದ್ಧ ಸತ್ವಗುಣವಾಗಿರುವ ಶಕ್ತಿ ವರ್ಣ ಏಕಾರ.

ಏಕಾರರೂಪಾ ಚೈಕಾಕ್ಷರ್ಯೇಕಾನೇಕಾಕ್ಷರಾಕೃತಿಃ ಏತತ್ತದಿತ್ಯನಿರ್ದೇಶ್ಯಾ ಚೈಕಾನಂದ ಚಿದಾಕೃತಿಃ
ಏವಮಿತ್ಯಾಗಮಾಬೋಧ್ಯಾ ಚೈಕಭಕ್ತಿ ಮದರ್ಚಿತಾ ಏಕಾಗ್ರಚಿತ್ತ ನಿರ್ಧ್ಯಾತಾ ಚೈಷಣಾ ರಹಿತಾದ್ದೃತಾ
ಏಲಾಸುಗಂಧಿಚಿಕುರಾ ಚೈನಃ ಕೂಟ ವಿನಾಶಿನೀ ಏಕಭೋಗಾ ಚೈಕರಸಾ ಚೈಕೈಶ್ವರ್ಯ ಪ್ರದಾಯಿನೀ
ಏಕಾತಪತ್ರ ಸಾಮ್ರಾಜ್ಯ ಪ್ರದಾ ಚೈಕಾನ್ತಪೂಜಿತಾ ಏಧಮಾನಪ್ರಭಾ ಚೈಜದನೇಕಜಗದೀಶ್ವರೀ
ಏಕವೀರಾದಿ ಸಂಸೇವ್ಯಾ ಚೈಕಪ್ರಾಭವ ಶಾಲಿನೀ||

**ಏಣಾಂಕಾನಲಭಾನುಮಂಡಲಲಸಚ್ಛ್ರೀಚಕ್ರಮಧ್ಯೇ ಸ್ಥಿತಾಂ**
**ಬಾಲಾರ್ಕದ್ಯುತಿಭಾಸುರಾಂ ಕರತಲೈಃ ಪಾಶಾಂಕುಶೌ ಬಿಭ್ರತೀಮ್ ।**
**ಚಾಪಂ ಬಾಣಮಪಿ ಪ್ರಸನ್ನವದನಾಂ ಕೌಸುಂಭವಸ್ತ್ರಾನ್ವಿತಾಂ**
**ತಾಂ ತ್ವಾಂ ಚಂದ್ರಕಳಾವತಂಸಮಕುಟಾಂ ಚಾರುಸ್ಮಿತಾಂ ಭಾವಯೇ ॥**

**ಏತಾವದೇವ ಜನನಿ ಸ್ಪೃಹಣೀಯಮಾಸ್ತೇ ತ್ವದ್ವಂದನೇಷು ಸಲಿಲಸ್ಥಗಿತೇ ಚ ನೇತ್ರೇ |**
**ಸಾನ್ನಿಧ್ಯಮುದ್ಯದರುಣಾಯುತಸೋದರಸ್ಯ ತ್ವದ್ವಿಗ್ರಹಸ್ಯ ಪರಯಾ ಸುಧಯಾಪ್ಲುತಸ್ಯ ||**

ಏಕಾರಾದಿ ಸಮಸ್ತವರ್ಣ ವಿವಿಧಾಕಾರೈಕ ಚಿದ್ರೂಪಿಣೀಂ
ಚೈತನ್ಯಾತ್ಮಕ ಚಕ್ರರಾಜನಿಲಯಾಂ ಚಂದ್ರಾಂತಸಂಚಾರಿಣೀಂ ।

ಭಾವಾಭಾವವಿಭಾವಿನೀಂ ಭವಪರಾಂ ಸದ್ಭಕ್ತಿಚಿಂತಾಮಣಿಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಏನಸ್ತ್ವಮ್ ತವ ಹಾರಿಣೀಂ ಅಘಹರಾಂ ಏಕಾಮನೇಕಾತ್ಮಿಕಾಂ
ಏಣಾಪ್ರಾಪಿತಲೋಲಲೋಚನಕರಾಂ ಶುಭ್ರಾಂ ಸುಶುಭ್ರಾಂಬರಾಂ ।
ಏಕಾತ್ಮಪ್ರತಿಚಿತ್ರಿತಾಂ ಸುಖಕರೀಂ ಆನಂದಸಂದಾಯಿನೀಂ
ಏಕಾರಾಕ್ಷರರೂಪಿಣೀಂ ಅನುಪಮಾಂ ವಂದೇ ಸದಾ ಸುಂದರೀಂ ॥

3. ಶ್ರೀಲಲಿತಾಮಂತ್ರದ ಮೂರನೇ ಅಕ್ಷರ "ಈ". ಇದರ ವಿವರಣೆ ಮಾಡುತ್ತಾ, ಶ್ರೀಶಂಕರಭಗವತ್ಪಾದರು ಹೇಳಿರುವ ಕಾಮಃ ಎಂಬುದರ ತತ್ವವೇನೆಂದರೆ, ಸಚ್ಚಿದಾನಂದತ್ವದ ಆನಂದದಲ್ಲಿರುವ ಮನ್ಮಥ ಬೀಜವೇ ವ್ಯಕ್ತ ಸ್ಥಿತಿಯನ್ನು ಪಡೆದು ಕಾಮಃ ಎಂದು ಕರೆಯಲ್ಪಟ್ಟು, ಮುಂದಿನ ಕಾರ್ಯಕ್ಕೋಸ್ಕರ ಏಶ್ವರನ ಜೊತೆಯಲ್ಲಿ ಇರುವುದು.

ಸೃಷ್ಟಿ ಸ್ಥಿತಿಗೆ ಕಾರಣಭೂತವಾದ ವಿಷ್ಣುಚೈತನ್ಯವು ಪ್ರತಿಪಾದಿಸುವ ಮನ್ಮಥ ಬೀಜ ಶಕ್ತಿವರ್ಣ ಈ ಕಾರ.

**ಈಕಾರರೂಪಾ ಚ ಈಶಿತ್ರೀಚ ಈಪ್ಸಿತಾರ್ಥ ಪ್ರದಾಯಿನೀ ಈದೃಗಿತ್ಯ ವಿನಿರ್ದೇಶ್ಯಾ ಚೇಶ್ವರತ್ವ ವಿಧಾಯಿನೀ**
**ಈಶಾನಾದಿ ಬ್ರಹ್ಮಮಯೀ ಚೇಶಿತ್ವಾದ್ಯಷ್ಟ ಸಿದ್ಧಿದಾ ಈಕ್ಷಿತ್ರೀಕ್ಷಣ ಸೃಷ್ಟಾಂಡ ಕೋಟಿರೀಶ್ವರ ವಲ್ಲಭಾ**
**ಈಡಿತಾ ಚೇಶ್ವರಾರ್ಧಾಂಗ ಶರೀರೇಶಾಧಿ ದೇವತಾ ಈಶ್ವರ ಪ್ರೇರಣಕರೀ ಚೇಶತಾಣ್ಡವ ಸಾಕ್ಷಿಣೀ**
**ಈಶ್ವರೋತ್ಸಂಗ ನಿಲಯಾ ಚೇತಿಬಾಧಾ ವಿನಾಶಿನೀ ಈಹಾವಿರಾಹಿತಾ ಚೇಶ ಶಕ್ತಿ ರೀಷತ್ಸ್ಮಿತಾನನಾ||**
ಈಶಾನಾದಿಪದಂ ಶಿವೈಕಫಲದಂ ರತ್ನಾಸನಂ ತೇ ಶುಭಂ
ಪಾದ್ಯಂ ಕುಂಕುಮಚಂದನಾದಿಭರಿತೈರರ್ಘ್ಯಂ ಸರತ್ನಾಕ್ಷತೈಃ ।
ಶುದ್ಧೈರಾಚಮನೀಯಕಂ ತವ ಜಲೈರ್ಭಕ್ತ್ಯಾ ಮಯಾ ಕಲ್ಪಿತಂ
ಕಾರುಣ್ಯಾಮೃತವಾರಿಧೇ ತದಖಿಲಂ ಸಂತುಷ್ಟಯೇ ಕಲ್ಪತಾಮ್ ॥

ಈಶತ್ವನಾಮಕಲುಷಾಃ ಕತಿ ವಾ ನ ಸಂತಿ ಬ್ರಹ್ಮಾದಯಃ ಪ್ರತಿಭವಂ ಪ್ರಲಯಾಭಿಭೂತಾಃ |
ಏಕಃ ಸ ಏವ ಜನನಿ ಸ್ಥಿರಸಿದ್ಧಿರಾಸ್ತೇ ಯಃ ಪಾದಯೋಸ್ತವ ಸಕೃತ್ಪ್ರಣತಿಂ ಕರೋತಿ ||

ಈಹಾಧಿಕ್ವರಯೋಗಿಬೃಂದವಿನುತಾಂ ಸ್ವಾನಂದಭೂತಾಂ ಪರಾಂ
ಪಶ್ಯಂತೀಂ ತನುಮಧ್ಯಮಾಂ ವಿಲಸಿನೀಂ ಶ್ರೀವೈಖರೀ ರೂಪಿಣೀಂ ।
ಆತ್ಮಾನಾತ್ಮವಿಚಾರಿಣೀಂ ವಿವರಗಾಂ ವಿದ್ಯಾಂ ತ್ರಿಬೀಜಾತ್ಮಿಕಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಈಶಾನಾಂಗ ನಿವಾರಿತಾರ್ಧಸತನೂಂ ಈಂಕಾರರೂಪಾತ್ಮಿಕಾಂ
ಈಕ್ಷತ್ಪ್ರೋದಿತವಲ್ಲರೀಂ ಅನುಭವ ಪ್ರಾಕಾಶಿನೀಂ ನಿರ್ಮಲಾಂ ।
ಈಷತ್ ಹಾಸ ಸುನಾಸ ಚಾರುಸುಮುಖೀಂ ಶ್ವೇತಾರ ವಿಂದಸ್ತನೀಂ
ಈಶಾನೀಂ ಪರಮಾಂ ಪರಾತ್ಪರತರಾಂ ವಂದೇ ಸದಾ ಸುಂದರೀಂ ॥

4. ನಾಲ್ಕನೆಯ ಅಕ್ಷರವಾದ "ಲ" ಅಕ್ಷರಕ್ಕೆ ಶ್ರೀಶಂಕರಭಗವತ್ಪಾದರು ಬರೆದಿರುವ ಕ್ಷಿತಿಃ ಎಂಬುದರ ತತ್ವವೇನೆಂದರೆ, ಭೂ ತತ್ವ ಅಥವಾ ಪೃಥ್ವೀ ವಾಚಕವಾದ ಜಗತ್ತೇ ಆಗಿರುವುದು. ಸರ್ವ ಪ್ರಕೃತಿ ಭೂತಗಳೂ ಸೃಷ್ಟಿ ಸಂಕಲ್ಪವನ್ನು

ಅನುಸರಿಸಿ, ಸ್ಥೂಲವಾದ ಜಗದ್ರೂಪವನ್ನು ಹೊಂದುವ ತತ್ವವನ್ನು ಪ್ರತಿಪಾದಿಸುವ ಪೃಥ್ವೀ ವಾಚಕವಾದ ಬೀಜ ಶಕ್ತಿವರ್ಣ ಲ ಕಾರ.

**ಲಕಾರರೂಪಾ ಲಲಿತಾ ಲಕ್ಷ್ಮೀ ವಾಣೀ ನಿಷೇವಿತಾ ಲಾಕಿನೀ ಲಲನಾರೂಪಾ ಲಸದ್ದಾಡಿಮ ಪಾಟಲಾ**
**ಲಲಂತಿಕಾಲಸತ್ಫಾಲಾ ಲಲಾಟ ನಯನಾರ್ಚಿತಾ ಲಕ್ಷಣೋಜ್ಜ್ವಲ ದಿವ್ಯಾಂಗೀ ಲಕ್ಷಕೋಟ್ಯಂಡ ನಾಯಿಕಾ**
**ಲಕ್ಷ್ಯಾರ್ಥಾ ಲಕ್ಷಣಾಗಮ್ಯಾ ಲಬ್ಧಕಾಮಾ ಲತಾತನುಃ ಲಲಾಮರಾಜದಲಿಕಾ ಲಂಬಿಮುಕ್ತಾಲತಾಞ್ಚಿತಾ**
**ಲಂಬೋದರ ಪ್ರಸೂರ್ಲಭ್ಯಾ ಲಜ್ಜಾಢ್ಯಾ ಲಯವರ್ಜಿತಾ ||**
**ಲಕ್ಷ್ಮೀ ಯೋಗಿಜನಸ್ಯ ರಕ್ಷಿತಜಗಜ್ಜಾಲೇ ವಿಶಾಲೇಕ್ಷಣೇ**
**ಪ್ರಾಲೇಯಾಂಬುಪಟೀರಕುಂಕುಮಲಸತ್ಕರ್ಪೂರಮಿಶ್ರೋದಕೈಃ ।**
**ಗೋಕ್ಷೀರೈರಪಿ ನಾರಿಕೇಲಸಲಿಲೈಃ ಶುದ್ಧೋದಕೈರ್ಮಂತ್ರಿತೈಃ**
**ಸ್ನಾನಂ ದೇವಿ ಧಿಯಾ ಮಯೈತದಖಿಲಂ ಸಂತುಷ್ಟಯೇ ಕಲ್ಪತಾಮ್ ॥**

**ಲಬ್ಧ್ವಾ ಸಕೃತ್ತ್ರಿಪುರಸುಂದರಿ ತಾವಕೀನಂ ಕಾರುಣ್ಯಕಂದಲಿತಕಾಂತಿಭರಂ ಕಟಾಕ್ಷಮ್ |**
**ಕಂದರ್ಪಕೋಟಿಸುಭಗಾಸ್ತ್ವಯಿ ಭಕ್ತಿಭಾಜಃ ಸಂಮೋಹಯಂತಿ ತರುಣೀರ್ಭುವನತ್ರಯೇಽಪಿ ||**

**ಲಕ್ಷ್ಯಾ ಲಕ್ಷ್ಯನಿರೀಕ್ಷಣಾಂ ನಿರುಪಮಾಂ ರುದ್ರಾಕ್ಷಮಾಲಾಧರಾಂ**
**ತ್ರ್ಯಕ್ಷಾರ್ಧಾಕೃತಿ ದಕ್ಷವಂಶಕಲಿಕಾಂ ದೀರ್ಘಾಕ್ಷಿ ದೀರ್ಘಸ್ವರಾಂ ।**
**ಭದ್ರಾಂ ಭದ್ರವರಪ್ರದಾಂ ಭಗವತೀಂ ಭದ್ರೇಶ್ವರೀಂ ಮುದ್ರಿಣೀಂ**
**ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥**
**ಲಕ್ಷ್ಮೀಹಾಸಾತಿಭಕ್ತಿನಮ್ರಶಿರಸಾಂ ಪುಷ್ಟಿಂ ಸುಪುಣ್ಯಂ ಜನಾಃ**
**ಪೂಜಾಧ್ಯಾನಪರಾಯಣಾಂ ತ್ರಿನಯನಾಂ ಲಕ್ಷ್ಮೀಸ್ವರೂಪಾಂ ಪರಾಂ ।**
**ಲಾವಣ್ಯಾಂಬುಲಸತ್ಕರೇ ವರದರಾಂ ಶುಭ್ರಾಂ ಸುಪುಷ್ಪಾಂಬರಾಂ**
**ಲಕ್ಷ್ಮೀಲಕ್ಷಣಸಂಯುತಾಂ ಸುಲಲಿತಾಂ ವಂದೇ ಸದಾ ಸುಂದರೀಂ ॥**

5. ಪ್ರಥಮ ಕೂಟವು ಪರಬ್ರಹ್ಮದಿಂದ ಜಗತ್ತಿನ ಸೃಷ್ಟಿಯ ಉದಯದ ವಿಚಾರ ಮತ್ತು ಚರಾಚರಸ್ವರೂಪವಾದ ಜಗತ್ತಿನ ಸೃಷ್ಟಿಯ ಪೂರ್ಣವಾಗುವಿಕೆಯ ರಹಸ್ಯಾರ್ಥಗಳ ತತ್ವವಾಗಿದೆ. ಸೃಷ್ಟಿಯ ಪೂರ್ವದಲ್ಲಿ ಪರಬ್ರಹ್ಮವು ಮಾತ್ರ ಇತ್ತೆಂಬ ಪರಬ್ರಹ್ಮಸ್ವರೂಪವನ್ನು ಪ್ರತಿಪಾದಿಸುವ ಉಭಯಾತ್ಮಕ "ಹ್ರೀಂ" ಕಾರ.

**ಹ್ರೀಂಕಾರ ರೂಪಾ ಹ್ರೀಂಕಾರ ನಿಲಯಾ ಹ್ರೀಂಪದಪ್ರಿಯಾ ಹ್ರೀಂಕಾರ ಬೀಜಾ ಹ್ರೀಂಕಾರ ಮಂತ್ರಾ ಹ್ರೀಂಕಾರ ಲಕ್ಷಣಾ**
**ಹ್ರೀಂಕಾರ ಜಪ ಸುಪ್ರೀತಾ ಹ್ರೀಮ್ಮತೀ ಹ್ರೀಂವಿಭೂಷಣಾ ಹ್ರೀಂಶೀಲಾ ಹ್ರೀಮ್ಪದಾರಾಧ್ಯಾ ಹ್ರೀಂಗರ್ಭಾ ಹ್ರೀಮ್ಪದಾಭಿಧಾ**
**ಹ್ರೀಂಕಾರ ವಾಚ್ಯಾ ಹ್ರೀಂಕಾರ ಪೂಜ್ಯಾ ಹ್ರೀಂಕಾರ ಪೀಠಿಕಾ ಹ್ರೀಂಕಾರ ವೇದ್ಯಾ ಹ್ರೀಂಕಾರ ಚಿನ್ತ್ಯಾ ಹ್ರೀಂ ಹ್ರೀಂಶರೀರಿಣೀ॥**
**ಹ್ರೀಂಕಾರಾಂಕಿತಮಂತ್ರಲಕ್ಷಿತತನೋ ಹೇಮಾಚಲಾತ್ಸಂಚಿತೈಃ**
**ರತ್ನೈರುಜ್ಜ್ವಲಮುತ್ತರೀಯಸಹಿತಂ ಕೌಸುಂಭವರ್ಣಾಂಶುಕಮ್ ।**
**ಮುಕ್ತಾಸಂತತಿಯಜ್ಞಸೂತ್ರಮಮಲಂ ಸೌವರ್ಣತಂತೂದ್ಭವಂ**
**ದತ್ತಂ ದೇವಿ ಧಿಯಾ ಮಯೈತದಖಿಲಂ ಸಂತುಷ್ಟಯೇ ಕಲ್ಪತಾಮ್॥**

ಹ್ರೀಂಕಾರಮೇವ ತವ ನಾಮ ಗೃಣಂತಿ ವೇದಾ ಮಾತಸ್ತ್ರಿಕೋಣನಿಲಯೇ ತ್ರಿಪುರೇ ತ್ರಿನೇತ್ರೇ |
ತ್ವತ್ಸಂಸ್ಮೃತೌ ಯಮಭಟಾಭಿಭವಂ ವಿಹಾಯ ದೀವ್ಯಂತಿ ನಂದನವನೇ ಸಹ ಲೋಕಪಾಲೈಃ||

ಹ್ರೀಂಬೀಜಾಗತ ನಾದಬಿಂದುಭರಿತಾಂ ಓಂಕಾರ ನಾದಾತ್ಮಿಕಾಂ
ಬ್ರಹ್ಮಾನಂದ ಘನೋದರೀಂ ಗುಣವತೀಂ ಜ್ಞಾನೇಶ್ವರೀಂ ಜ್ಞಾನದಾಂ ।
ಇಚ್ಛಾಜ್ಞಾಕೃತಿನೀಂ ಮಹೀಂ ಗತವತೀಂ ಗಂಧರ್ವಸಂಸೇವಿತಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಹ್ರೀಂಕಾರೀಂ ಸಿತಖಂಡ ಚಂದನಯುತಾಂ ಧೀರೂಪಿಣೀಂ ಧೀಪ್ರದಾಂ
ಹ್ರೀಂರೂಪಾಂ ಧವಳೋಪಚಾರರಚನಾಂ ಶ್ವೇತಾಕ್ಷಸೂತ್ರಾವಳಿಂ ।
ಮುಕ್ತಾಹಾರಸುಶೋಭಿತಾಂ ವಿದಧತೀಂ ವಾಮೇಕರೇ ಪುಸ್ತಕಂ
ವಿದ್ಯುತ್ಪುಂಜಸಮಾನ ಚಾರುರುಚಿರಾಂ ವಂದೇ ಸದಾ ಸುಂದರೀಂ ॥

6. ಎರಡನೆಯ ಕೂಟದ ಪ್ರಥಮಾಕ್ಷರವಾದ "ಹ" ಅಕ್ಷರಕ್ಕೆ ರವಿಃ ಎಂಬ ಶ್ರೀಶಂಕರಭಗವತ್ಪಾದರ ವಿವರಣೆಯು ಇರುವುದು. ಆದರಾಭಿಮಾನ ದೇವತೆಯಾಗಿ, ಪ್ರಾಣಿಗಳನ್ನು ರಕ್ಷಿಸತಕ್ಕ, ದೇವಶ್ರೇಷ್ಠನಾದ ಸೂರ್ಯ ಭಗವಂತನು, ಪ್ರಾಣಿಗಳನ್ನು ಕರ್ಮಾನುಸಾರ ನಿಯಮಿಸುತ್ತಾ, ಭೂಮ್ಯಾಕಾಶಗಳನ್ನು ಧರಿಸಿ, ಪ್ರಾಣಿಗಳನ್ನು ಜಾಗರೂಕವಾಗಿ, ಎಲ್ಲಾ ಕಡೆಯಲ್ಲೂ ಪ್ರಕಾಶ ಪಡಿಸುತ್ತಾನೆ. ಆದ್ದರಿಂದ ಜಗತ್ತಿನ ವ್ಯಾಪಾರಕ್ಕೆ, ಪರಬ್ರಹ್ಮವೇ ರವಿಯ ರೂಪವಾಗಿ ಬೆಳಗುತ್ತಿರುವುದರಿಂದಲೇ, ಜಗತ್ತಿನ ವ್ಯಾಪಾರದ ತತ್ವವಾದ ಮಂತ್ರದ, ದ್ವಿತೀಯ ಪಾದದ, ಪ್ರಥಮಾಕ್ಷರ ಸ್ಥಾನವು ರವಿಯ ಸ್ಥಾನವಾಗಿದೆ.

"ಹ್ರೀಂ" ಬೀಜಾಕ್ಷರದ, ಪರಬ್ರಹ್ಮದ ಸತ್ಸ್ವರೂಪ ಪ್ರತಿಪಾದಕವಾಗಿ, ಪ್ರಥಮಾಕ್ಷರವಾದ "ಹ" ಅಕ್ಷರವೇ ದ್ವಿತೀಯ ಪಾದದ, ಪ್ರಥಮಾಕ್ಷರ ಶಿವವರ್ಣ "ಹ" ಕಾರ.

ಹಕಾರರೂಪಾ ಹಲಧೃತ್ಪೂಜಿತಾ ಹರಿಣೇಕ್ಷಣಾ ಹರಪ್ರಿಯಾ ಹರಾರಾಧ್ಯಾ ಹರಿಬ್ರಹ್ಮೇನ್ದ್ರ ವನ್ದಿತಾ
ಹಯಾರೂಢಾ ಸೇವಿತಾಂಘ್ರಿರ್ಹಯಮೇಧ ಸಮರ್ಚ್ಚಿತಾ ಹರ್ಯಕ್ಷವಾಹನಾ ಹಂಸವಾಹನಾ ಹತದಾನವಾ
ಹತ್ಯಾದಿಪಾಪಶಮನೀ ಹರಿದಶ್ವಾದಿ ಸೇವಿತಾ ಹಸ್ತಿಕುಂಭೋತ್ತುಂಗ ಕುಚಾ ಹಸ್ತಿಕೃತ್ತಿ ಪ್ರಿಯಾಂಗನಾ
ಹರಿದ್ರಾಕುಙ್ಕುಮಾ ದಿಗ್ಧಾ ಹರ್ಯಶ್ವಾದ್ಯಮರಾರ್ಚ್ಚಿತಾ ಹರಿಕೇಶಸಖೀ ಹಾದಿವಿದ್ಯಾ ಹಲ್ಲಾಮದಾಲಸಾ||

ಹಂಸೈರಪ್ಯತಿಲೋಭನೀಯಗಮನೇ ಹಾರಾವಲೀಮುಜ್ಜ್ವಲಾಂ
ಹಿಂದೋಲದ್ಯುತಿಹೀರಪೂರಿತತರೇ ಹೇಮಾಂಗದೇ ಕಂಕಣೇ ।
ಮಂಜೀರೌ ಮಣಿಕುಂಡಲೇ ಮಕುಟಮಪ್ಯರ್ಧೇಂದುಚೂಡಾಮಣಿಂ
ನಾಸಾಮೌಕ್ತಿಕಮಂಗುಲೀಯಕಟಕೌ ಕಾಂಚೀಮಪಿ ಸ್ವೀಕುರು ॥

ಹಂತುಃ ಪುರಾಮಧಿಗಲಂ ಪರಿಪೀಯಮಾನಃ ಕ್ರೂರಃ ಕಥಂ ನ ಭವಿತಾ ಗರಲಸ್ಯ ವೇಗಃ |
ನಾಶ್ವಾಸನಾಯ ಯದಿ ಮಾತರಿದಂ ತವಾರ್ಧಂ ದೇಹಸ್ಯ ಶಶ್ವದಮೃತಾಪ್ಲುತಶೀತಲಸ್ಯ ||

ಹರ್ಷೋನ್ಮತ್ತ ಸುವರ್ಣಪಾತ್ರಭರಿತಾಂ ಪೀನೋನ್ನತಾಂ ಘೂರ್ಣಿತಾಂ
ಹುಂಕಾರಪ್ರಿಯಶಬ್ದಜಾಲನಿರತಾಂ ಸಾರಸ್ವತೋಲ್ಲಾಸಿನೀಂ ।
ಸಾರಾಸಾರವಿಚಾರ ಚಾರುಚತುರಾಂ ವರ್ಣಾಶ್ರಮಾಕಾರಿಣೀಂ

ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಹಾರಂ ಹಾರಮನೋಜಗತ್ತ್ರಯಮಿದಂ ನಿರ್ಮಾಸಿಹರ್ಷಾತ್ಮಿಕೇ
ಹೇ ದೇವಿ ! ತ್ರಿಪುರೇ ! ತ್ವಮೇವಶರಣಂ ಹೇ ವಾಪಿನೀ ಹೇಲಯಾ ।
ಹಾರಾದ್ಯಾಭರಣೋಜ್ವಲಾಂ ಧೃತಿಮತೀಂ ಹೇಲಾರಸೋಲ್ಲಾಸಿನೀಂ
ಹರ್ಷೋನ್ಮತ್ತಕಲೇಬರಾಂ ಸವಿಮಲಾಂ ವಂದೇ ಸದಾ ಸುಂದರೀಂ ॥

7. ಮಂತ್ರದ ದ್ವಿತೀಯ ಪಾದದ ಎರಡನೆಯ ಅಕ್ಷರವಾದ “ಸ” ಅಕ್ಷರಕ್ಕೆ ಶ್ರೀಶಂಕರಭಗವತ್ಪಾದರ ವಿವರಣೆ, ಶೀತಕಿರಣಃ. ಶೀತಕಿರಣಃ ಎಂದರೆ ಚಂದ್ರನು. ಪ್ರಪಂಚದ ಸ್ಥಿತಿಗೆ, ಸೂರ್ಯನ ತೇಜಸ್ವರೂಪವಾದ ಶಾಖವು ಹೇಗೆ ಅಗತ್ಯವೋ, ಹಾಗೆಯೇ, ಅಮೃತರೂಪವಾದ ಶೈತ್ಯವೂ ಅಗತ್ಯವಾದುದಾಗಿದೆ. ಪ್ರಪಂಚದ ಸ್ಥಿತಿಗೆ, ರವಿ ಮತ್ತು ಚಂದ್ರರು ಬಹುಮುಖ್ಯರಾಗಿರುವುದರಿಂದಲೇ, ಶ್ರೀಲಲಿತಾ ಮಂತ್ರದಲ್ಲಿ ರವಿಯ ಪಕ್ಕದಲ್ಲೇ ಚಂದ್ರನಿರುತ್ತಾನೆ. ಮಂತ್ರದ ದ್ವಿತೀಯ ಪಾದದ ದ್ವಿತೀಯಾಕ್ಷರವಾದ “ಸ” ಅಕ್ಷರದ ತತ್ವವೂ ಅಮೃತಸ್ವರೂಪವಾದ ಚಂದ್ರನ ತತ್ವಕ್ಕೆ ಅನ್ವಯವಾಗುವುದು.

**ಓಂ ಸಂಕಾರ ಸ್ವರಕಾರಣ ಸಾರ್ವವರ್ಣಿಕಾಷ್ಟ ಚತ್ವಾರಿಂಶೇಕ್ಷ ಪ್ರತಿತಿಷ್ಟ।**

ಎಲ್ಲಾ ಸ್ವರಗಳಿಗೂ ಕಾರಣಭೂತವಾದುದು, ಸತ್ಯವನ್ನೂ, ಅಮೃತವನ್ನೂ, ಚಂದ್ರನನ್ನೂ, ತಿಳಿಸುವ ಶಕ್ತಿವರ್ಣ “ಸ” ಕಾರ.

ಸಕಾರರೂಪಾ ಸರ್ವಜ್ಞಾ ಸರ್ವೇಶೀ ಸರ್ವಮಂಗಳಾ ಸರ್ವಕರ್ತ್ರೀ ಸರ್ವಭರ್ತ್ರೀ ಸರ್ವಹಂತ್ರೀ ಸನಾತನಾ
ಸರ್ವಾನವದ್ಯಾ ಸರ್ವಾಂಗ ಸುಂದರೀ ಸರ್ವಸಾಕ್ಷಿಣೀ ಸರ್ವಾತ್ಮಿಕಾ ಸರ್ವಸೌಖ್ಯ ದಾತ್ರೀ ಸರ್ವವಿಮೋಹಿನೀ
ಸರ್ವಾಧಾರಾ ಸರ್ವಗತಾ ಸರ್ವಾವಗುಣವರ್ಜ್ಜಿತಾ ಸರ್ವಾರುಣಾ ಸರ್ವಮಾತಾ ಸರ್ವಭೂಷಣ ಭೂಷಿತಾ||
ಸರ್ವಾಂಗೇ ಘನಸಾರಕುಂಕುಮಘನಶ್ರೀಗಂಧಪಂಕಾಂಕಿತಂ
ಕಸ್ತೂರೀತಿಲಕಂ ಚ ಫಾಲಫಲಕೇ ಗೋರೋಚನಾಪತ್ರಕಮ್ ।
ಗಂಡಾದರ್ಶನಮಂಡಲೇ ನಯನಯೋರ್ದಿವ್ಯಾಂಜನಂ ತೇಽಂಚಿತಂ
ಕಂಠಾಬ್ಜೇ ಮೃಗನಾಭಿಪಂಕಮಮಲಂ ತ್ವತ್ಪ್ರೀತಯೇ ಕಲ್ಪತಾಮ್॥
ಸರ್ವಜ್ಞತಾಂ ಸದಸಿ ವಾಕ್ಪಟುತಾಂ ಪ್ರಸೂತೇ ದೇವಿ ತ್ವದಂಘ್ರಿಸರಸೀರುಹಯೋಃ ಪ್ರಣಾಮಃ |
ಕಿಂ ಚ ಸ್ಫುರನ್ಮಕುಟಮುಜ್ಜ್ವಲಮಾತಪತ್ರಂ ದ್ವೇ ಚಾಮರೇ ಚ ಮಹತೀಂ ವಸುಧಾಂ ದದಾತಿ ||
ಸರ್ವೇಶಾಂಗವಿಹಾರಿಣೀಂ ಸಕರುಣಾಂ ಸನ್ನಾದಿನೀಂ ನಾದಿನೀಂ
ಸಂಯೋಗಪ್ರಿಯರೂಪಿಣೀಂ ಪ್ರಿಯವತೀಂ ಪ್ರೀತಾಂ ಪ್ರತಾಪೋನ್ನತಾಂ ।
ಸರ್ವಾಂತರ್ಗತಿಶಾಲಿನೀಂ ಶಿವತನೂಸಂದೀಪಿನೀಂ ದೀಪಿನೀಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಸಂಸಾರಸ್ಥಿತಿ ಸೃಷ್ಟಿಸಂಲಯಕರೀಂ ಸಂಸಾರಸಾರೋಪಮಾಂ
ಸಂಸಾರಾರ್ಣವ ಮೋಹ ಭಾರತರಣಿಂ ಸರ್ಪಾದಿ ಭೂತೋದಯಾಂ ।
ಸರ್ವಕ್ಲೇಶಹರಾಂ ಸಕಾರಸತನೂಂ ಸರ್ವಾತ್ಮಿಗಾಂ ಸರ್ವಗಾಂ
ಸರ್ವಾಹ್ಲಾದನಕಾರಿಣೀಂ ಅನುಪಮಾಂ ವಂದೇ ಸದಾ ಸುಂದರೀಂ ॥

8. ಶ್ರೀಲಲಿತಾ ಮಂತ್ರದ ದ್ವಿತೀಯ ಪಾದದ ತೃತೀಯಾಕ್ಷರವಾದ "ಕ" ಅಕ್ಷರ ಮತ್ತು ಶ್ರೀಶಂಕರಭಗವತ್ಪಾದರ ವಿವರಣೆಯಾದ ಸ್ಮರಃ ಎಂಬುದರ ತತ್ವವೇನೆಂದರೆ, ಮಂತ್ರದ ದ್ವಿತೀಯ ಪಾದದ ತತ್ವಾರ್ಥವು, "ಜಗತ್ತಿನ ವ್ಯಾಪಾರ" ಪ್ರತಿಪಾದವಾದುದೆಂದು ತಿಳಿಸಿ, ಸೂರ್ಯ ಮತ್ತು ಚಂದ್ರರ ವಿಚಾರವನ್ನು ತಿಳಿಸಿತು. ಜಗತ್ತಿನ ಇರುವಿಕೆ ಎಂದರೆ, ಪ್ರಾಣಿಗಳ ವ್ಯಾಪಾರವು ನಡೆಯುವುದಾಗಿದೆ. ಸೃಷ್ಟಿಗೆ ಮನ್ಮಥಬೀಜವು ಹೇಗೆ ಕಾರಣವಾಗಿ, ಸೃಷ್ಟಿಯ ತತ್ವವಾದ ಪ್ರಥಮ ಪಾದದಲ್ಲಿ "ಕಾಮ" ಎಂಬ ರೂಪದಂತಿತ್ತೋ, ಹಾಗೆಯೇ, ಮನ್ಮಥಬೀಜವು, ಪ್ರಾಣಿಗಳ ವ್ಯಾಪಾರಕ್ಕೆ ಕಾರಣವಾದದ್ದಾಗಿ, "ಸ್ಮರಃ" ಎಂಬ ರೂಪದಲ್ಲಿರುವುದು.

ಪ್ರಥಮ ಪಾದದ ಪ್ರಥಮಾಕ್ಷರವಾಗಿ ಈಶ್ವರ ಸೋಪಾನವಾದ ತತ್ವವಾಗಿ ಬಂದು, ದ್ವಿತೀಯ ಪಾದದಲ್ಲಿ, ಅನಿತ್ಯವಾದ ವಿಷಯ ಸುಖಕ್ಕೂ ಮತ್ತು ನಿತ್ಯವಾದ ಆತ್ಮಸುಖಕ್ಕೂ, ಅನ್ವಯಿಸುತ್ತಾ ಬಂದಿರುವ ಶಿವವರ್ಣ "ಕ" ಕಾರ.

**ಕಕಾರಾರ್ಥಾ ಕಾಲಹಂತ್ರೀ ಕಾಮೇಶೀ ಕಾಮಿತಾರ್ಥದಾ ಕಾಮಸಂಜೀವಿನೀ ಕಲ್ಯಾ ಕಠಿನಸ್ತನಮಂಡಲಾ**
**ಕರಭೋರುಃ ಕಲಾನಾಥಮುಖೀ ಕಚಜಿತಾಂಬುದಾ ಕಟಾಕ್ಷಸ್ಯಂದಿ ಕರುಣಾ ಕಪಾಲಿ ಪ್ರಾಣನಾಯಿಕಾ**
**ಕಾರುಣ್ಯ ವಿಗ್ರಹಾ ಕಾಂತಾ ಕಾಂತಿಭೂತ ಜಪಾವಲಿಃ ಕಲಾಲಾಪಾ ಕಂಬುಕಂಠೀ ಕರನಿರ್ಜಿತ ಪಲ್ಲವಾ**
**ಕಲ್ಪವಲ್ಲೀ ಸಮಭುಜಾ ಕಸ್ತೂರೀ ತಿಲಕಾಂಚಿತಾ||**
**ಕಹ್ಲಾರೋತ್ಪಲಮಲ್ಲಿಕಾಮರುವಕೈಃ ಸೌವರ್ಣಪಂಕೇರುಹೈ-**
**-ರ್ಜಾತೀಚಂಪಕಮಾಲತೀವಕುಲಕೈರ್ಮಂದಾರಕುಂದಾದಿಭಿಃ ।**
**ಕೇತಕ್ಯಾ ಕರವೀರಕೈರ್ಬಹುವಿಧೈಃ ಕ್ಲುಪ್ತಾಃ ಸ್ರಜೋ ಮಾಲಿಕಾಃ**
**ಸಂಕಲ್ಪೇನ ಸಮರ್ಪಯಾಮಿ ವರದೇ ಸಂತುಷ್ಟಯೇ ಗೃಹ್ಯತಾಮ್ ||**
**ಕಲ್ಪದ್ರುಮೈರಭಿಮತಪ್ರತಿಪಾದನೇಷು ಕಾರುಣ್ಯವಾರಿಧಿಭಿರಂಬ ಭವಾತ್ಕಟಾಕ್ಷೈಃ |**
**ಆಲೋಕಯ ತ್ರಿಪುರಸುಂದರಿ ಮಾಮನಾಥಂ ತ್ವಯ್ಯೇವ ಭಕ್ತಿಭರಿತಂ ತ್ವಯಿ ಬದ್ಧತೃಷ್ಣಮ್ ||**
**ಕರ್ಮಾಕರ್ಮವಿವರ್ಜಿತಾಂ ಕುಲವತೀಂ ಕರ್ಮಪ್ರದಾಂ ಕೌಲಿನೀಂ**
**ಕಾರುಣ್ಯಾಂಬುಧಿ ಸರ್ವಕಾಮನಿರತಾಂ ಸಿಂಧುಪ್ರಿಯೋಲ್ಲಾಸಿನೀಂ ।**
**ಪಂಚಬ್ರಹ್ಮ ಸನಾತನಾಸನಗತಾಂ ಗೇಯಾಂ ಸುಯೋಗಾನ್ವಿತಾಂ**
**ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥**
**ಕಾಮಾಕ್ಷೀಂ ಕಲಿಕಲ್ಮಷೌಘಹರಿಣೀಂ ಕಲ್ಯಾಣವೃದ್ಧಿಪ್ರದಾಂ**
**ಕಂದರ್ಪಪ್ರತಿಬದ್ಧಲಾಲಸತನೂಂ ಸಂಬಿಭ್ರತೀಂ ಸುಂದರೀಂ ।**
**ಕಾಮಾಕಾರಕಲೇಬರಾಂ ಸುವಿಮಲಾಂ ಸದ್ಭಕ್ತ ಪಾದಾಂಭುಜಾಂ**
**ಕಾಂಚೀಯುಕ್ತ ನಿತಂಬಿನೀಂ ಅನುಪಮಾಂ ವಂದೇ ಸದಾ ಸುಂದರೀಂ ॥**

9. ಶ್ರೀಲಲಿತಾ ಮಂತ್ರದ ದ್ವಿತೀಯ ಪಾದದ ನಾಲ್ಕನೆಯ ಅಕ್ಷರವಾದ "ಹ" ಅಕ್ಷರ ಮತ್ತು ಇದಕ್ಕೆ ಶ್ರೀಶಂಕರಭಗವತ್ಪಾದರ ವಿವರಣೆಯಾದ ಹಂಸಃ ಎಂಬುದರ ತತ್ವವು, ವಿಷಯೋಪಭೋಗಗಳನ್ನು ಅನುಭವಿಸುವ ಜೀವರ ಸೋಪಾನ ಮತ್ತು ಜೀವನು, ವಿಷಯೋಪಭೋಗಗಳನ್ನು ಅನಿತ್ಯವಾದುವುಗಳೆಂದು ತಿಳಿದು, ನಿತ್ಯವಾದ ಪರಮಾತ್ಮೇಚ್ಛೆಗೆ ತಿರುಗುವ ಸೋಪಾನಗಳನ್ನು ಪ್ರತಿಪಾದಿಸುವ, ಈ ಶಿವವರ್ಣ "ಹ" ಕಾರ.

ಹಕಾರಾರ್ಥಾ ಹಂಸಗತಿರ್ಹಾಟಕಾಭರಣೋಜ್ಜ್ವಲಾ ಹಾರಹಾರಿ ಕುಚಾಭೋಗಾ ಹಾಕಿನೀ ಹಲ್ಯವರ್ಜ್ಜಿತಾ
ಹರಿತ್ಪತಿ ಸಮಾರಾಧ್ಯಾ ಹಠಾತ್ಕಾರ ಹತಾಸುರಾ ಹರ್ಷಪ್ರದಾ ಹವಿರ್ಭೋಕ್ತ್ರೀ ಹಾರ್ದಸಂತಮಸಾಪಹಾ
ಹಲ್ಲೀಸಲಾಸ್ಯ ಸಂತುಷ್ಟಾ ಹಂಸಮಂತ್ರಾರ್ಥ ರೂಪಿಣೀ ಹಾನೋಪಾದಾನ ನಿರ್ಮುಕ್ತಾ ಹರ್ಷಿಣೀ ಹರಿಸೋದರೀ
ಹಾಹಾಹೂಹೂ ಮುಖ ಸ್ತುತ್ಯಾ ಹಾನಿ ವೃದ್ಧಿ ವಿವರ್ಜ್ಜಿತಾ ಹಯ್ಯಂಗವೀನ ಹೃದಯಾ ಹರಿಗೋಪಾರುಣಾಂಶುಕಾ||

ಹಂತಾರಂ ಮದನಸ್ಯ ನಂದಯಸಿ ಯೈರಂಗೈರನಂಗೋಜ್ಜ್ವಲೈ-
-ರ್ಯೈರ್ಭೃಂಗಾವಲಿನೀಲಕುಂತಲಭರೈರ್ಬಧ್ನಾಸಿ ತಸ್ಯಾಶಯಮ್ ।
ತಾನೀಮಾನಿ ತವಾಂಬ ಕೋಮಲತರಾಣ್ಯಾಮೋದಲೀಲಾಗೃಹಾ-
-ಣ್ಯಾಮೋದಾಯ ದಶಾಂಗಗುಗ್ಗುಲುಘೃತೈರ್ಧೂಪೈರಹಂ ಧೂಪಯೇ ||

ಹಂತೇತರೇಷ್ವಪಿ ಮನಾಂಸಿ ನಿಧಾಯ ಚಾನ್ಯೇ ಭಕ್ತಿಂ ವಹಂತಿ ಕಿಲ ಪಾಮರದೈವತೇಷು |
ತ್ವಾಮೇವ ದೇವಿ ಮನಸಾ ಸಮನುಸ್ಮರಾಮಿ ತ್ವಾಮೇವ ನೌಮಿ ಶರಣಂ ಜನನಿ ತ್ವಮೇವ ||

ಹಸ್ತ್ಯುತ್ಕುಂಭ ಸ್ತನದ್ವಿತಯತಃ ಪೀನೋನ್ನತಾದಾನತಾಂ
ಹಾರಾದ್ಯಾಭರಣಾಂ ಸುರೇಂದ್ರವಿನುತಾಂ ಶೃಂಗಾರ ಪೀಠಾಲಯಾಂ ।
ಯೋನ್ಯಾಕಾರಕ ಯೋನಿಮುದ್ರಿತಕರಾಂ ನಿತ್ಯಾಂ ನವಾರ್ಣಾತ್ಮಿಕಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಹೇಮಾಂಭಾ ಹಿಮರಾಜ ಶೈಲತನಯಾಂ ಹರ್ಷಾತ್ಮಿಕಾಂ ಅಂಬಿಕಾಂ
ಹಂಸಾಖ್ಯಾಂ ಮುನಿಚಿತ್ತಹಂಸಸದೃಶೀಂ ಹಂಸಾಸನೋಪಸ್ಥಿತಾಂ ।
ಹಂಸೇಂದೂಹರಿವಾಹಿನಾಂ ಹರಮನೋಹಾರಾಂ ಆಕಾರಾತ್ಮಿಕಾಂ
ಹೇಲಾವಂದಿತ ವೈರಿರಂಜಿತ ಪದಾಂ ವಂದೇ ಸದಾ ಸುಂದರೀಂ ॥

10. ಶ್ರೀಲಲಿತಾ ಮಂತ್ರದ ದ್ವಿತೀಯ ಪಾದದ ಪಂಚಮಾಕ್ಷರವಾದ "ಲ" ಅಕ್ಷರದ ಶ್ರೀಶಂಕರಭಗವತ್ಪಾದರ ವಿವರಣೆಯಾದ ಶಕ್ರಃ ಎಂಬುದರ ತತ್ತ್ವವು, ಸೃಷ್ಟಿಸಿದ ಜಗತ್ತಿನ ವ್ಯಾಪಾರದಲ್ಲಿ, ರಾಕ್ಷಸ ಸ್ವರೂಪವಾದ ಅಧರ್ಮವು ಪ್ರಧಾನವಾಗದೇ, ದೈವೀಸ್ವರೂಪವಾದ ಧರ್ಮವೇ ಮೇಲ್ಮೆಯಾಗಿ ನಿಂತಿರಬೇಕೆಂಬುದು ಈಶ್ವರನ ನಿಯಮವೆಂಬುದನ್ನು ಪ್ರತಿಪಾದಿಸುವ ದೇವೇಂದ್ರ ಬೀಜ ಶಕ್ತಿವರ್ಣ "ಲ" ಕಾರ.

ಲಕಾರಾಖ್ಯಾ ಲತಾಪೂಜ್ಯಾ ಲಯಸ್ಥಿತ್ಯುದ್ಭವೇಶ್ವರೀ ಲಾಸ್ಯ ದರ್ಶನ ಸಂತುಷ್ಟಾ ಲಾಭಾಲಾಭ ವಿವರ್ಜ್ಜಿತಾ
ಲಂಘ್ಯೇತರಾಜ್ಞಾ ಲಾವಣ್ಯ ಶಾಲಿನೀ ಲಘು ಸಿದ್ಧಿದಾ ಲಾಕ್ಷಾರಸ ಸವರ್ಣಾಭಾ ಲಕ್ಷ್ಮಣಾಗ್ರಜ ಪೂಜಿತಾ
ಲಭ್ಯೇತರಾ ಲಬ್ಧ ಭಕ್ತಿ ಸುಲಭಾ ಲಾಂಗಲಾಯುಧಾ ಲಗ್ನಚಾಮರ ಹಸ್ತ ಶ್ರೀಶಾರದಾ ಪರಿವೀಜಿತಾ
ಲಜ್ಜಾಪದ ಸಮಾರಾಧ್ಯಾ ಲಂಪಟಾ ಲಕುಲೇಶ್ವರೀ ಲಬ್ಧಮಾನಾ ಲಬ್ಧರಸಾ ಲಬ್ಧ ಸಂಪತ್ಸಮುನ್ನತಿಃ||

ಲಕ್ಷ್ಮೀಮುಜ್ಜ್ವಲಯಾಮಿ ರತ್ನನಿವಹೋದ್ಭಾಸ್ವತ್ತರೇ ಮಂದಿರೇ
ಮಾಲಾರೂಪವಿಲಂಬಿತೈರ್ಮಣಿಮಯಸ್ತಂಭೇಷು ಸಂಭಾವಿತೈಃ ।
ಚಿತ್ರೈರ್ಹಾಟಕಪುತ್ರಿಕಾಕರಧೃತೈರ್ಗವ್ಯೈರ್ಘೃತೈರ್ವರ್ಧಿತೈ-
-ರ್ದಿವ್ಯೈರ್ದೀಪಗಣೈರ್ಧಿಯಾ ಗಿರಿಸುತೇ ಸಂತುಷ್ಟಯೇ ಕಲ್ಪತಾಮ್||

ಲಕ್ಷ್ಯೇಷು ಸತ್ಸ್ವಪಿ ಕಟಾಕ್ಷನಿರೀಕ್ಷಣಾನಾಮಾಲೋಕಯ ತ್ರಿಪುರಸುಂದರಿ ಮಾಂ ಕದಾಚಿತ್ |
ನೂನಂ ಮಯಾ ತು ಸದೃಶಃ ಕರುಣೈಕಪಾತ್ರಂ ಜಾತೋ ಜನಿಷ್ಯತಿ ಜನೋ ನ ಚ ಜಾಯತೇ ವಾ ||

ಲಕ್ಷ್ಮೀಲಕ್ಷಣಪೂರ್ಣ ಭಕ್ತವರದಾಂ ಲೀಲಾವಿನೋದಸ್ಥಿತಾಂ
ಲಾಕ್ಷಾರಂಜಿತ ಪಾದಪದ್ಮಯುಗಳಾಂ ಬ್ರಹ್ಮೇಂದ್ರ ಸಂಸೇವಿತಾಂ ।
ಲೋಕಾಲೋಕಿತ ಲೋಕಕಾಮಜನನೀಂ ಲೋಕಾಶ್ರಯಾಂಕಸ್ಥಿತಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಲೀಲಾಕ್ಷೀಂ ಪ್ರತಿನಂದಿನೀಂ ತ್ರಿನಯನಾಂ ವಂದೇ ಸದಾ ಸುಂದರೀಂ
ಲೀಲಾಲೋಹಿತ ಲೋಹಕಾಮಮನಸಾಂ ಲೋಕೇಷ್ಟಗಮ್ಯ ಪ್ರಭಾಂ ।
ಲೋಲಾಲೋಲಧಿಯಾತು ಲೋಲಮನಸಾಂ ಪುಂಸಾಂ ಅನೇಕಾತ್ಮಿಕಾಂ
ಲೀಲಾಕ್ಷೀಂ ಪ್ರತಿನಂದಿನೀಂ ತ್ರಿನಯನಾಂ ವಂದೇ ಸದಾ ಸುಂದರೀಂ ॥

11. ಜಗತ್ತು ಸೃಷ್ಟಿಯಾಗಿ ವ್ಯಾಪಾರದಲ್ಲಿರುವುದೆಂಬುದು ಮಂತ್ರದ ಎರಡನೇ ಪಾದದ ತತ್ತ್ವವಾಗಿರುವುದಷ್ಟೆ? ವ್ಯಾಪಾರದಲ್ಲಿರುವ ಸ್ವರೂಪವೂಕೂಡ ಪರಬ್ರಹ್ಮಸ್ವರೂಪವಾಗಿರುವುದೆಂಬುದು, ತತ್ತ್ವ ವ್ಯಾಪಾರದಿಂದಿರುವ ವಿಶ್ವವೆಲ್ಲಾ ಪರಬ್ರಹ್ಮಸ್ವರೂಪಣಿಯಾದ ಶ್ರೀಲಲಿತಾತ್ರಿಪುರಸುಂದರಿಯೇ ಆಗಿರುವಳೆಂಬ ತತ್ತ್ವಾರ್ಥವನ್ನು ಪ್ರತಿಪಾದಿಸುವ, ಪರಬ್ರಹ್ಮ ಪ್ರತಿಪಾದಕವಾದ ಉಭಯಾತ್ಮಕವೇ "ಹ್ರೀಂ" ಕಾರ.

ಹ್ರೀಂಕಾರಿಣೀ ಹ್ರೀಂಕಾರಾಢ್ಯಾ ಹ್ರೀಂಮಧ್ಯಾ ಹ್ರೀಂಶಿಖಾಮಣಿಃ ಹ್ರೀಂಕಾರಕುಂಡಾಗ್ನಿ ಶಿಖಾ ಹ್ರೀಂಕಾರಶಶಿಚಂದ್ರಿಕಾ
ಹ್ರೀಂಕಾರ ಭಾಸ್ಕರರುಚಿಃ ಹ್ರೀಂಕಾರಾಂಭೋದಚಂಚಲಾ ಹ್ರೀಂಕಾರಕಂದಾಂಕುರಿಕಾ ಹ್ರೀಂಕಾರೈಕಪರಾಯಣಾ
ಹ್ರೀಂಕಾರದೀರ್ಘಿಕಾಹಂಸೀ ಹ್ರೀಂಕಾರೋದ್ಯಾನಕೇಕಿನೀ ಹ್ರೀಂಕಾರಾರಣ್ಯ ಹರಿಣೀ ಹ್ರೀಂಕಾರಾವಾಲ ವಲ್ಲರೀ
ಹ್ರೀಂಕಾರ ಪಂಜರಶುಕೀ ಹ್ರೀಂಕಾರಾಂಗಣ ದೀಪಿಕಾ ಹ್ರೀಂಕಾರಕಂದರಾ ಸಿಂಹೀ ಹ್ರೀಂಕಾರಾಂಭೋಜ ಭೃಂಗಿಕಾ
ಹ್ರೀಂಕಾರಸುಮನೋ ಮಾಧ್ವೀ ಹ್ರೀಂಕಾರತರುಮಂಜರೀ||
ಹ್ರೀಂಕಾರೇಶ್ವರಿ ತಪ್ತಹಾಟಕಕೃತೈಃ ಸ್ಥಾಲೀಸಹಸ್ರೈರ್ಭೃತಂ
ದಿವ್ಯಾನ್ನಂ ಘೃತಸೂಪಶಾಕಭರಿತಂ ಚಿತ್ರಾನ್ನಭೇದಂ ತಥಾ ।
ದುಗ್ಧಾನ್ನಂ ಮಧುಶರ್ಕರಾದಧಿಯುತಂ ಮಾಣಿಕ್ಯಪಾತ್ರೇ ಸ್ಥಿತಂ
ಮಾಷಾಪೂಪಸಹಸ್ರಮಂಬ ಸಫಲಂ ನೈವೇದ್ಯಮಾವೇದಯೇ॥
ಹ್ರೀಂ ಹ್ರೀಮಿತಿ ಪ್ರತಿದಿನಂ ಜಪತಾಂ ತವಾಖ್ಯಾಂ ಕಿಂ ನಾಮ ದುರ್ಲಭಮಿಹ ತ್ರಿಪುರಾಧಿವಾಸೇ |
ಮಾಲಾಕಿರೀಟಮದವಾರಣಮಾನನೀಯಾ ತಾನ್ಸೇವತೇ ವಸುಮತೀ ಸ್ವಯಮೇವ ಲಕ್ಷ್ಮೀಃ ||
ಹ್ರೀಂಕಾರಾಶ್ರಿತ ಶಂಕರಪ್ರಿಯತನುಂ ಶ್ರೀಯೋಗಪೀಠೇಶ್ವರೀಂ
ಮಾಂಗಲ್ಯಾಯುತ ಪಂಕಜಾಭನಯನಾಂ ಮಾಂಗಲ್ಯ ಸಿದ್ಧಿಪ್ರದಾಂ ।
ಕಾರುಣ್ಯೇನ ವಿಶೇಷಿತಾಂಗ ಸುಮಹಾಲಾವಣ್ಯ ಸಂಶೋಭಿತಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಹ್ರೀಂಕಾರಾದಿ ನಿವಾಸಿನೀಂ ಸುಹೃದಯಾಂ ಹ್ರೀಂಕಾರನಾಮ್ನೀಂ ಸತೀಂ
ನಾನಾ ಮಂತ್ರಮಯೀಂ ತ್ರಯೀಂ ತನುಮಯೀಂ ಸದ್ವ್ಯಾಪಿನೀಂ ಮಾನಿನೀಂ ।
ಮಾರ್ತಾಂಡಾನಲ ಚಂದ್ರ ಸಂ ತ್ರಿನಯನಾಂ ಸನ್ಮಾನಿನೀಂ ಮಾನಿನೀಂ
ನಾನಾಕರ್ಮಮಯಾತ್ಮಿಕಾಂ ಅನುಪಮಾಂ ವಂದೇ ಸದಾ ಸುಂದರೀಂ ॥

12. ತೃತೀಯ ಪಾದದಲ್ಲಿನ ಪ್ರಥಮ ಅಕ್ಷರದ ಸ್ಥಾನ ಚಂದ್ರನ ಆಂತರ್ಯವಾಗಿರುವ ಪರಾಶಕ್ತಿಯ ಸ್ಥಾನ. "ಸ" ಅಕ್ಷರದ ವಿವರಣೆಯಾದ "ಪರಾ" ಎಂದರೆ ಸರ್ವೋತ್ಕೃಷ್ಟವಾದ ಶಕ್ತಿ ಎಂತಲೂ, ಪರಾಪಶ್ಯಂತೀ ಮಧ್ಯಮಾ ವೈಖರೀ ಸ್ವರೂಪವಾದ ನಾದಬ್ರಹ್ಮದಲ್ಲಿ "ಪರಾ" ಎಂದರೆ ಕಳಾರೂಪವೆಂದೂ ಅರ್ಥವಾಗುವುದು. ಶುದ್ಧ ಸತ್ವಗುಣ ಅಥವಾ ಕಳಾಸೋಪಾನವಾಗಿರುವ ಅರ್ಥಮಾತ್ರೆಯಾದ ಪರ್ರಶಕ್ತಿ ಎಂದರೆ ಸರ್ವೋತ್ಕೃಷ್ಟವಾದ ಶಕ್ತಿಯ ಪ್ರತೀಕವಾದ ಶಕ್ತಿವರ್ಣ "ಸ" ಕಾರ.

**ಸಕಾರಾಖ್ಯಾ ಸಮರಸಾ ಸಕಲಾಗಮಸಂಸ್ತುತಾ ಸರ್ವವೇದಾಂತ ತಾತ್ಪರ್ಯಭೂಮಿಃ ಸದಸದಾಶ್ರಯಾ**
**ಸಕಲಾ ಸಚ್ಚಿದಾನಂದಾ ಸಾಧ್ಯಾ ಸದ್ಗತಿದಾಯಿನೀ ಸನಕಾದಿಮುನಿಧ್ಯೇಯಾ ಸದಾಶಿವ ಕುಟುಂಬಿನೀ**
**ಸಕಾಲಾಧಿಷ್ಠಾನ ರೂಪಾ ಸತ್ಯರೂಪಾ ಸಮಾಕೃತಿಃ ಸರ್ವಪ್ರಪಂಚ ನಿರ್ಮಾತ್ರೀ ಸಮನಾಧಿಕ ವರ್ಜಿತಾ**
**ಸರ್ವೋತ್ತುಂಗಾ ಸಂಗಹೀನಾ ಸಗುಣಾ ಸಕಲೇಷ್ಟದಾ ||**
**ಸಚ್ಛಾಯೈರ್ವರಕೇತಕೀದಲರುಚಾ ತಾಂಬೂಲವಲ್ಲೀದಲೈಃ**
**ಪೂಗೈರ್ಭೂರಿಗುಣೈಃ ಸುಗಂಧಿಮಧುರೈಃ ಕರ್ಪೂರಖಂಡೋಜ್ಜ್ವಲೈಃ ।**
**ಮುಕ್ತಾಚೂರ್ಣವಿರಾಜಿತೈರ್ಬಹುವಿಧೈರ್ವಕ್ತ್ರಾಂಬುಜಾಮೋದನೈಃ**
**ಪೂರ್ಣಾ ರತ್ನಕಲಾಚಿಕಾ ತವ ಮುದೇ ನ್ಯಸ್ತಾ ಪುರಸ್ತಾದುಮೇ॥**
**ಸಂಪತ್ಕರಾಣಿ ಸಕಲೇಂದ್ರಿಯನಂದನಾನಿ ಸಾಮ್ರಾಜ್ಯದಾನನಿರತಾನಿ ಸರೋರುಹಾಕ್ಷಿ |**
**ತ್ವದ್ವಂದನಾನಿ ದುರಿತಾಹರಣೋದ್ಯತಾನಿ ಮಾಮೇವ ಮಾತರನಿಶಂ ಕಲಯಂತು ನಾಽನ್ಯಮ್ ||**
**ಸರ್ವಜ್ಞಾನ ಕಳಾವತೀಂ ಸಕರುಣಾಂ ಸರ್ವೇಶ್ವರೀಂ ಸರ್ವಗಾಂ**
**ಸತ್ಯಾಂ ಸರ್ವಮಯೀಂ ಸಹಸ್ರದಳಜಾಂ ಸತ್ವಾರ್ಣವೋಪಸ್ಥಿತಾಂ ।**
**ಸಂಗಾಸಂಗವಿವರ್ಜಿತಾಂ ಸುಖಕರೀಂ ಬಾಲಾರ್ಕಕೋಟಿಪ್ರಭಾಂ**
**ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥**
**ಸರ್ವಜ್ಞಾನಸುದೇವತಾಂ ಸಮುದಯಾಂ ಸರ್ವಾರ್ಥಸಂದರ್ಶಿನೀಂ**
**ಶರ್ವಾಣೀಂ ಸದಯಾ ಸದಾಶಿವಮನಃ ಸಂದಾಯಿನೀಂ ಶಾಂಕರೀಂ ।**
**ಸರ್ವೇಷಾಂ ಸಕಲೋಪಚಾರರಸಿಕಾಂ ಸರ್ವಾರ್ಥ ಸಿದ್ಧಿಪ್ರದಾಂ**
**ಸಾನಂದಾಂ ಸುರಬೃಂದವಂದಿತ ಪದಾಂ ವಂದೇ ಸದಾ ಸುಂದರೀಂ ॥**

13. ತೃತೀಯ ಪಾದದ ಎರಡನೆಯ ಅಕ್ಷರವಾದ "ಕ" ಎಂಬುದು, ದ್ವಿತೀಯ ಪಾದದಲ್ಲಿ ಮನ್ಮಥ ಶಕ್ತಿಯಾದ ಸ್ಮರಃ ಎಂಬ ತತ್ವದಲ್ಲಿತ್ತು. ಈ ಪಾದದಲ್ಲಿ, ಅದೇ ಮನ್ಮಥ ಶಕ್ತಿಯ "ಕ" ಅಕ್ಷರದಲ್ಲೇ, "ಮಾರ" ಎಂಬ ತತ್ವದಲ್ಲಿ ಬಂದಿರುವುದು. ಧ್ಯಾನ ಮತ್ತು ಸಮಾಧಿಗಳ ಅಭ್ಯಾಸದ "ಮಾರ" ಎಂಬ ತತ್ವದಲ್ಲಿ ಶಿವವರ್ಣ "ಕ" ಕಾರ.

**ಕಕಾರಿಣೀ ಕಾವ್ಯಲೋಲಾ ಕಾಮೇಶ್ವರಮನೋಹರಾ ಕಾಮೇಶ್ವರಪ್ರಾಣನಾಡೀ ಕಾಮೇಶೋತ್ಸಂಗವಾಸಿನೀ**
**ಕಾಮೇಶ್ವರಾಲಿಂಗಿತಾಂಗೀ ಕಾಮೇಶ್ವರಸುಖಪ್ರದಾ ಕಾಮೇಶ್ವರಪ್ರಣಯಿನೀ ಕಾಮೇಶ್ವರವಿಲಾಸಿನೀ**
**ಕಾಮೇಶ್ವರತಪಃಸಿದ್ಧಿಃ ಕಾಮೇಶ್ವರಮನಃಪ್ರಿಯಾ ಕಾಮೇಶ್ವರಪ್ರಾಣನಾಥಾ ಕಾಮೇಶ್ವರವಿಮೋಹಿನೀ**
**ಕಾಮೇಶ್ವರಬ್ರಹ್ಮವಿದ್ಯಾ ಕಾಮೇಶ್ವರಗೃಹೇಶ್ವರೀ ಕಾಮೇಶ್ವರಾಹ್ಲಾದಕರೀ ಕಾಮೇಶ್ವರಮಹೇಶ್ವರೀ**
**ಕಾಮೇಶ್ವರೀ ಕಾಮಕೋಟಿನಿಲಯಾ ಕಾಂಕ್ಷಿತಾರ್ಥದಾ||**

ಕನ್ಯಾಭಿಃ ಕಮನೀಯಕಾಂತಿಭಿರಲಂಕಾರಾಮಲಾರಾರ್ತಿಕಾ
ಪಾತ್ರೇ ಮೌಕ್ತಿಕಚಿತ್ರಪಂಕ್ತಿವಿಲಸತ್ಕರ್ಪೂರದೀಪಾಲಿಭಿಃ ।
ತತ್ತತ್ತಾಲಮೃದಂಗಗೀತಸಹಿತಂ ನೃತ್ಯತ್ಪದಾಂಭೋರುಹಂ
ಮಂತ್ರಾರಾಧನಪೂರ್ವಕಂ ಸುವಿಹಿತಂ ನೀರಾಜನಂ ಗೃಹ್ಯತಾಮ್ ॥
ಕಲ್ಪೋಪಸಂಹೃತಿಷು ಕಲ್ಪಿತತಾಂಡವಸ್ಯ ದೇವಸ್ಯ ಖಂಡಪರಶೋಃ ಪರಭೈರವಸ್ಯ |
ಪಾಶಾಂಕುಶೈಕ್ಷವಶರಾಸನಪುಷ್ಪಬಾಣಾ ಸಾ ಸಾಕ್ಷಿಣೀ ವಿಜಯತೇ ತವ ಮೂರ್ತಿರೇಕಾ ||
ಕಾದಿಕ್ಷಾಂತ ಸುವರ್ಣಬಿಂದು ಸುತನುಂ ಸರ್ವಾಂಗಸಂಶೋಭಿತಾಂ
ನಾನಾವರ್ಣ ವಿಚಿತ್ರಚಿತ್ರಚರಿತಾಂ ಚಾತುರ್ಯ ಚಿಂತಾಮಣೀಂ ।
ಚಿತ್ರಾನಂದವಿಧಾಯಿನೀಂ ಸುಚಪಲಾಂ ಕೂಟತ್ರಯಾಕಾರಿಣೀಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಕಾದಿಕ್ಷಾಂತಮನಸ್ಸ್ವರೂಪಧರಣೀಂ ಕಾಮೇಶ್ವರೀಂ ಕಾಮದಾಂ
ಕಾಸತ್ಕಾಂತಿಸಹಸ್ತಸಂಚಿತಕರೀಂ ಕಾಮೇ ಕಕಾರಾತ್ಮಿಕಾಂ ।
ಕಾಶ್ಮೀರಾಗುರುಕೌಸ್ತುಭಾನ್ವಿತತನುಂ ಕಂದರ್ಪದರ್ಪೋಜ್ಜ್ವಲಾಂ
ಕಾಮೋನ್ಮತ್ತಕಲೇಬರಾಂ ಸುವಿಮಲಾಂ ವಂದೇ ಸದಾ ಸುಂದರೀಂ ॥

14. ಲಕಾರವು ಪ್ರಥಮ ಪಾದದಲ್ಲಿ ಜಗತ್ಸೃಷ್ಟಿಯ ಮತ್ತು ಧಾರಣೆಯ ಕ್ಷಿತಿಃ ತತ್ವದಲ್ಲಿತ್ತು. ಮಂತ್ರದ ದ್ವಿತೀಯ ಪಾದವಾದ ವ್ಯಾಪಾರದಲ್ಲಿ, ದೈವೀ ಸಂಪತ್ತಿನ ಧಾರಣೆಯ ರೂಪವಾದ ದೇವೇಂದ್ರನ ತತ್ವವಾಗಿತ್ತು. ಈ ಪಾದದಲ್ಲಿ, ಲಯದ ತತ್ವವಾದ ಪರಮಪದರೂಪದಲ್ಲಿರುವ "ಹರಿಃ" ತತ್ವವಾಗಿ ಶಿವಾ ಎಂದು ಕರೆಯಲ್ಪಡುವುದು. ಅವಿದ್ಯಾಕಾರ್ಯಗಳನ್ನೆಲ್ಲಾ ನಿಗ್ರಹಿಸಿ, ಅಂತರ್ಮುಖದ ದಾರಿಯಾದ, ಸರ್ವವ್ಯಾಪಕನಾದ ವಿಷ್ಣುತತ್ವವಾದ "ಹರಿಃ" ಎಂಬುದನ್ನು ಪ್ರತಿಪಾದಿಸುವ ಶಕ್ತಿವರ್ಣ "ಲ"ಕಾರ.

ಲಕಾರಿಣೀ ಲಬ್ಧರೂಪಾ ಲಬ್ಧಧೀರ್ಲಬ್ಧ ವಾಂಚಿತಾ ಲಬ್ಧಪಾಪ ಮನೋದೂರಾ ಲಬ್ಧಾಹಂಕಾರ ದುರ್ಗಮಾ
ಲಬ್ಧಶಕ್ತಿರ್ಲಬ್ಧ ದೇಹಾ ಲಬ್ಧೈಶ್ವರ್ಯ ಸಮುನ್ನತಿಃ ಲಬ್ಧ ವೃದ್ಧಿರ್ಲಬ್ಧ ಲೀಲಾ ಲಬ್ಧಯೌವನ ಶಾಲಿನೀ
ಲಬ್ಧಾತಿಶಯ ಸರ್ವಾಂಗ ಸೌಂದರ್ಯಾ ಲಬ್ಧ ವಿಭ್ರಮಾ ಲಬ್ಧರಾಗಾ ಲಬ್ಧಪತಿರ್ಲಬ್ಧ ನಾನಾಗಮಸ್ಥಿತಿಃ
ಲಬ್ಧಭೋಗಾ ಲಬ್ಧಸುಖಾ ಲಬ್ಧಹರ್ಷಾಭಿಪೂರಿತಾ||
ಲಕ್ಷ್ಮೀರ್ಮೌಕ್ತಿಕಲಕ್ಷಕಲ್ಪಿತಸಿತಚ್ಛತ್ರಂ ತು ಧತ್ತೇ ರಸಾ-
-ದಿಂದ್ರಾಣೀ ಚ ರತಿಶ್ಚ ಚಾಮರವರೇ ಧತ್ತೇ ಸ್ವಯಂ ಭಾರತೀ ।
ವೀಣಾಮೇಣವಿಲೋಚನಾಃ ಸುಮನಸಾಂ ನೃತ್ಯಂತಿ ತದ್ರಾಗವ-
-ದ್ಭಾವೈರಾಂಗಿಕಸಾತ್ತ್ವಿಕೈಃ ಸ್ಫುಟರಸಂ ಮಾತಸ್ತದಾಕರ್ಣ್ಯತಾಮ್ ॥
ಲಗ್ನಂ ಸದಾ ಭವತು ಮಾತರಿದಂ ತವಾರ್ಧಂ ತೇಜಃ ಪರಂ ಬಹುಲಕುಂಕುಮಪಂಕಶೋಣಮ್ |
ಭಾಸ್ವತ್ಕಿರೀಟಮಮೃತಾಂಶುಕಲಾವತಂಸಂ ಮಧ್ಯೇ ತ್ರಿಕೋಣನಿಲಯಂ ಪರಮಾಮೃತಾರ್ದ್ರಮ್ ||
ಲಕ್ಷ್ಮೀಶಾನ ವಿಧೀಂದ್ರ ಚಂದ್ರಮಕುಟಾದ್ಯಷ್ಟಾಂಗ ಪೀಠಾಶ್ರಿತಾಂ
ಸೂರ್ಯೇಂದ್ವಗ್ನಿಮಯೈಕಪೀಠನಿಲಯಾಂ ತ್ರಿಸ್ಥಾಂ ತ್ರಿಕೋಣೇಶ್ವರೀಂ ।
ಗೋಪ್ತ್ರೀಂ ಗರ್ವನಿಗರ್ವಿತಾಂ ಗಗನಗಾಂ ಗಂಗಾಗಣೇಶಪ್ರಿಯಾಂ

ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಲಾಕ್ಷಾರಂಜಿತಪಾದಪದ್ಮಯುಗಲಾಂ ವಿಷ್ಣೀಶಸಂಸೇವಿತಾಂ
ಲೋಹಿತ್ವುಂಜಿತ ಪುಲ್ಲದಾಡಿಮನಿಭಾಂ ಬಂಧೂಕಸಿಂಧೂರಭಾಂ ।
ಲೌಹಿತ್ಯಾಂಶುಕವೃತಾಂ ಸುಲಲಿತಾಂ ನಿರ್ಲಕ್ಷಿತಾಂ ಪಾಂಸುಲೈಃ
ಲಾಕ್ಷಾನಿರ್ಮಲ ಪುಣ್ಯಯುಕ್ತವಪುಷಾಂ ವಂದೇ ಸದಾ ಸುಂದರೀಂ ॥

15. ಜಗತ್ತಿನ ಸೃಷ್ಟಿಸ್ಥಿತಿಗಳಾಗಿ ಅನಂತರ ಲಯವನ್ನನುಸರಿಸಿ ಸರ್ವವೂ ಶ್ರೀಲಲಿತಾ ಮಹಾತ್ರಿಪುರಸುಂದರಿಯಲ್ಲಿ ಅಭೇದದಿಂದ ಅಡಗಿ, ಶ್ರೀಲಲಿತಾಮಹಾತ್ರಿಪುರಸುಂದರ್ಯಾತ್ಮಕವಾದ ಪರಬ್ರಹ್ಮವೊಂದೇ ಪುನಃ ಉಳಿಯುವ ತತ್ವವನ್ನು ಪ್ರತಿಪಾದಿಸುವ ಉಭಯಾತ್ಮಕ "ಹ್ರೀಂ" ಕಾರ.

ಹ್ರೀಂಕಾರ ಮೂರ್ತಿಃ ಹ್ರೀಂಕಾರ ಸೌಧಶೃಂಗ ಕಪೋತಿಕಾ ಹ್ರೀಂಕಾರ ದುಗ್ಧಾಬ್ಧಿ ಸುಧಾ ಹ್ರೀಂಕಾರ ಕಮಲೇಂದಿರಾ
ಹ್ರೀಂಕಾರಮಣಿ ದೀಪಾರ್ಚಿಃ ಹ್ರೀಂಕಾರ ತರುಶಾರಿಕಾ ಹ್ರೀಂಕಾರ ಪೇಟಕ ಮಣಿಃ ಹ್ರೀಂಕಾರಾದರ್ಶಬಿಂಬಿತಾ
ಹ್ರೀಂಕಾರ ಕೋಶಾಸಿಲತಾ ಹ್ರೀಂಕಾರಾಸ್ಥಾನ ನರ್ತಕೀ ಹ್ರೀಂಕಾರ ಶುಕ್ತಿಕಾ ಮುಕ್ತಾಮಣಿಃ ಹ್ರೀಂಕಾರ ಬೋಧಿತಾ
ಹ್ರೀಂಕಾರಮಯ ಸೌವರ್ಣಸ್ತಂಭ ವಿದ್ರುಮ ಪುತ್ರಿಕಾ ಹ್ರೀಂಕಾರ ವೇದೋಪನಿಷದ್ ಹ್ರೀಂಕಾರಾಧ್ವರ ದಕ್ಷಿಣಾ
ಹ್ರೀಂಕಾರ ನಂದನಾರಾಮ ನವಕಲ್ಪಕ ವಲ್ಲರೀ ಹ್ರೀಂಕಾರ ಹಿಮವತ್ಗಂಗಾ ಹ್ರೀಂಕಾರಾರ್ಣವ ಕೌಸ್ತುಭಾ
ಹ್ರೀಂಕಾರ ಮಂತ್ರಸರ್ವಸ್ವಾ ಹ್ರೀಂಕಾರಪರ ಸೌಖ್ಯದಾ||
ಹ್ರೀಂಕಾರತ್ರಯಸಂಪುಟೇನ ಮನುನೋಪಾಸ್ಯೇ ತ್ರಯೀಮೌಲಿಭಿ-
-ರ್ವಾಕ್ಯೈರ್ಲಕ್ಷ್ಯತನೋ ತವ ಸ್ತುತಿವಿಧೌ ಕೋ ವಾ ಕ್ಷಮೇತಾಂಬಿಕೇ ।
ಸಲ್ಲಾಪಾಃ ಸ್ತುತಯಃ ಪ್ರದಕ್ಷಿಣಶತಂ ಸಂಚಾರ ಏವಾಸ್ತು ತೇ
ಸಂವೇಶೋ ನಮಸಃ ಸಹಸ್ರಮಖಿಲಂ ತ್ವತ್ಪ್ರೀತಯೇ ಕಲ್ಪತಾಮ್ ॥
ಹ್ರೀಂಕಾರಮೇವ ತವ ನಾಮ ತದೇವ ರೂಪಂ ತ್ವನ್ನಾಮ ದುರ್ಲಭಮಿಹ ತ್ರಿಪುರೇ ಗೃಣಂತಿ |
ತ್ವತ್ತೇಜಸಾ ಪರಿಣತಂ ವಿಯದಾದಿಭೂತಂ ಸೌಖ್ಯಂ ತನೋತಿ ಸರಸೀರುಹಸಂಭವಾದೇಃ ||
ಹ್ರೀಂಕೂಟತ್ರಯರೂಪಿಣೀಂ ಸಮಯಿನೀಂ ಸಂಸಾರಿಣೀಂ ಹಂಸಿನೀಂ
ವಾಮಾಚಾರಪರಾಯಣೀಂ ಸುಕುಲಜಾಂ ಬೀಜಾವತೀಂ ಮುದ್ರಿಣೀಂ ।
ಕಾಮಾಕ್ಷೀಂ ಕರುಣಾರ್ದ್ರಚಿತ್ತಸಹಿತಾಂ ಶ್ರೀಂ ಶ್ರೀ ತ್ರಿಮೂರ್ತ್ಯಂಬಿಕಾಂ
ಶ್ರೀಚಕ್ರಪ್ರಿಯ ಬಿಂದುತರ್ಪಣಪರಾಂ ಶ್ರೀ ರಾಜರಾಜೇಶ್ವರೀಂ ॥
ಹ್ರೀಂಕಾರಾದಿಸಮಸ್ತ ಮಂತ್ರ ಸಹಿತಾಂ ಹೃತ್ಪದ್ಮಮಧ್ಯಸ್ಥಿತಾಂ
ಶ್ರೀಕಂಠಾಂ ಹೃದಯಸ್ತಗಾಢಶಿಖರ ಪ್ರಧ್ವಂಸಿಹಂಸಾತ್ಮಿಕಾಂ ।
ಸರ್ವಾಂತರ್ಗತ ಹಂಸ ಮಾನಸದೃಶೀಂ ಹ್ರೀಂಕಾರವೇಷೋಜ್ಜ್ವಲಾಂ
ಕಾಮೋನ್ಮತ್ತಕಲೇವರಾಂ ಅನುಪಮಾಂ ವಂದೇ ಸದಾ ಸುಂದರೀಂ ॥

ಯಾ ವಿದ್ಯಾ ಶಿವಕೇಶವಾದಿ ಜನನೀ ಯಾ ವೈ ಜಗನ್ಮೋಹಿನೀ
ಯಾ ಬ್ರಹ್ಮಾದಿಪಿಪೀಲಿಕಾಂತ ಜಗದಾನಂದೈಕ ಸಂದಾಯಿನೀ ।
ಯಾ ಪಂಚಪ್ರಣವದ್ವಿರೇಫನಳಿನೀ ಯಾ ಚಿತ್ಕಳಾಮಾಲಿನೀ

ಸಾ ಪಾಯಾತ್ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥

ಶ್ರೀಮಂತ್ರಾಕ್ಷರ ಮಾಲಯಾ ಗಿರಿಸುತಾಂ ಯಃ ಪೂಜಯೇಚ್ಚೇತಸಾ

ಸಂಧ್ಯಾಸು ಪ್ರತಿ ವಾಸರಂ ಸುನಿಯತ ಸ್ತಸ್ಯಾಮಲಾ ಸ್ಯಾನ್ಮ ಮನಃ ।

ಚಿತ್ತಾಂಭೋರುಹ ಮಂಡಪೇ ಗಿರಿಸುತಾ ನೃತ್ಯಂ ವಿಧತ್ತೇರಸಾ

ಏದ್ವಾಣಿ ವಕ್ತ್ರಸರೋರುಹೇ ಜಲಧಿಜಾ ಗೇಹೇ ಜಗನ್ಮಂಗಲಾ ॥

ಆಯುಷ್ಕರಂ ಪುಷ್ಟಿಕರಂ ಪುತ್ರದಂ ವಶ್ಯಕಾರಕಮ್ ವಿದ್ಯಾಪ್ರದಂ ಕೀರ್ತಿಕರಂ ಸುಕವಿತ್ವಪ್ರದಾಯಕಮ್ ।

ಸರ್ವಸಂಪತ್ಪ್ರದಂ ಸರ್ವಭೋಗದಂ ಸರ್ವಸೌಖ್ಯದಮ್ ಭಕ್ತಸ್ಯ ಯದ್ಯದಿಷ್ಟಂ ಸ್ಯಾತ್ತತ್ತತ್ಪೂರಯತೇ ಧ್ರುವಮ್ ॥

ಶ್ರೀಲಲಿತಾಮಹಾತ್ರಿಪುರಸುಂದರೀ ಮಂತ್ರದ ವಿಭೂತಿಗಳ ರಹಸ್ಯಾಮೃತವನ್ನು ಪಾರಾಯಣೆ ಮಾಡುವ ಭಾಗ್ಯವನ್ನು ಅನುಗ್ರಹ ಮಾಡಿದ ಶ್ರೀಲಲಿತಾಮಹಾತ್ರಿಪುರಸುಂದರೀ ಪರದೇವತೆಗೂ, ಸೌಂದರ್ಯಲಹರಿಯ ಒಂದೇ ಒಂದು ಶ್ಲೋಕದಲ್ಲಿ ಶ್ರೀಲಲಿತಾ ಮಂತ್ರದ ರಹಸ್ಯಗಳನ್ನೆಲ್ಲಾ ಗೂಢವಾಗಿಟ್ಟು ಮುಮುಕ್ಷುಗಳನ್ನು ಉದ್ಧಾರ ಮಾಡಿರುವ ಪರಾವತಾರವೂ ಸರ್ವಜ್ಞಮೂರ್ತಿಗಳೂ ಆದ ಶ್ರೀಶಂಕರಭಗವತ್ಪಾದರವರಿಗೂ ಅನೇಕಾನೇಕ ಪ್ರಣಾಮಗಳು.

॥ಶ್ರೀಲಲಿತಾಮಹಾತ್ರಿಪುರಸುಂದರೀ ಚರಣಾರವಿಂದಾರ್ಪಣಮಸ್ತು॥

॥ಓಂ ತತ್ಸತ್॥



ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಸೌಂದರ್ಯಲಹರೀ ಮೀಮಾಂಸೆ

ಗೌರೀಪುತ್ರ ನಮಸ್ತೇಸ್ತು ಶಂಕರ ಪ್ರಿಯ ಪುತ್ರಕ । ನಮಸ್ತೇ ದೇವದೇವೇಶ ನಮಸ್ತೇ ಗಣನಾಯಕ ॥

ಶ್ರೀವಿದ್ಯಾಂ ಜಗತಾಂ ಧಾತ್ರೀಂ ಸರ್ಗಸ್ಥಿತಿಲಯೇಶ್ವರೀಂ । ನಮಾಮಿ ಲಲಿತಾಂ ನಿತ್ಯಾಂ ಮಹಾತ್ರಿಪುರಸುಂದರೀಂ ॥

ಮಂತ್ರಮೂಲಂ ಗುರೂರ್ವಾಕ್ಯಂ ಪೂಜಾಮೂಲಂ ಗುರುಕೃಪಾ । ಮೋಕ್ಷಮೂಲಂ ಗುರುಪಾದಂ ತಸ್ಮೈ ಶ್ರೀಗುರವೇ ನಮಃ ॥

ಜ್ಯೇಷ್ಠ ಶುದ್ಧ ದ್ವಾದಶಿ ಆದಿಶಂಕರಾಚಾರ್ಯರು ಕೈಲಾಸ ಗಮನ ಮಾಡಿದ ಪುಣ್ಯದಿನ. ಈ ಪರ್ವ ದಿನದ ಆಚರಣೆಯ ಪೂರ್ವಭಾವಿಯಾಗಿ ನಮ್ಮ ನಾದಾರ್ಚನೆ ತಂಡ ಇಂದು ಶ್ರೀ ಆದಿಶಂಕರಾಚಾರ್ಯ ವಿರಚಿತ ಸೌಂದರ್ಯಲಹರೀ ಪಾರಾಯಣೆಯನ್ನು ಹಮ್ಮಿಕೊಂಡಿದೆ.

ಶ್ರೀದೇವಿಯ ಮಹಿಮೆಯ ಸಂಕೀರ್ತನೆ, ತ್ರಿಪುರಸುಂದರಿಯ ಅನುಪಮ ಲಾವಣ್ಯದ ವರ್ಣನೆ ಮತ್ತು ಶ್ರೀಮಾತೆಯ ಕೃಪಾಯಾಚನೆ, ಈ ಮೂರರ ತ್ರಿವೇಣೀ ಸಂಗಮವೇ ಶ್ರೀ ಆದಿಶಂಕರಾಚಾರ್ಯ ವಿರಚಿತ ಸೌಂದರ್ಯಲಹರೀ. ನಿತ್ಯಜೀವನದ ಅನೇಕ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ನಿರೂಪಿಸಿರುವ ಸಂಜೀವಿನಿ. ಇಷ್ಟಾರ್ಥ ಸಿದ್ಧಿಗಳಾದ, ಕಾರ್ಯಜಯ, ಸಕಲಾಭಿವೃದ್ಧಿ, ದಾರಿದ್ರ್ಯ ನಿವಾರಣೆ, ಧನಪ್ರಾಪ್ತಿ, ವೇದಶಾಸ್ತ್ರ ಪಾರಂಗತ್ವ, ಸರ್ವಜನ ವಶೀಕರಣ, ಸಂತಾನ ಪ್ರಾಪ್ತಿ, ಶತೃಬಾಧಾ ನಿವಾರಣೆ, ಸಮ್ಮೋಹನ ವಿದ್ಯೆ, ಕಾವ್ಯಜ್ಞಾನ ಪ್ರಾಪ್ತಿ, ಸರ್ವಕಲಾ ಸಿದ್ಧಿ, ಸಕಲ ಇಷ್ಟಾರ್ಥ ಸಿದ್ಧಿ, ಋಣಮುಕ್ತಿ, ಭಯನಿವಾರಣೆ, ಶತೃನಾಶ, ಆತ್ಮಜ್ಞಾನ, ದುಃಸ್ವಪ್ನನಿವಾರಣೆ, ವಿಷನಿವೃತ್ತಿ, ಜ್ವರನಿವೃತ್ತಿ, ಮಹಾಮಾರಿ ಪೀಡಾ ನಿವಾರಣೆ, ಸಂಗೀತ ವಾದ್ಯಗಳಲ್ಲಿ ನೈಪುಣ್ಯ ಸಿದ್ಧಿ, ಜನಾದರಣೆ, ಕಾವ್ಯರಚನಾ ಸಾಮರ್ಥ್ಯ, ಧೃಡಕಾಯತೆ, ದೇವೀದರ್ಶನ, ಮಂತ್ರ ಸಿದ್ಧಿ, ವಾಕ್ಸಿದ್ಧಿ, ಸರ್ವಕಾರ್ಯ ಸಿದ್ಧಿಗಳನ್ನು ದಯಪಾಲಿಸುವ ಮಹಾಮಂತ್ರವೇ ಸೌಂದರ್ಯಲಹರೀ.

ಸೌಂದರ್ಯಲಹರೀ ಶ್ಲೋಕವು ಪಠಿಸಲು ಬಹು ಆಕರ್ಶಕವಾದುದು. ಇದರ ಪಾರಾಯಣೆಯಿಂದ ದಯಾಮಯಿಯಾದ ಆ ಜಗಜ್ಜನನಿಯು ಕೃಪೆದೋರಿ, ನಮ್ಮೆಲ್ಲರ ಲೌಕಿಕ ಮತ್ತು ಪಾರಲೌಕಿಕ ಪ್ರಕಾರದ ಎಲ್ಲ ಕಾಮನೆಗಳನ್ನು ಬಹು ಬೇಗ ಪೂರೈಸುತ್ತಾಳೆಂಬುದು ಶ್ರದ್ಧಾನ್ವಿತ ನಂಬಿಕೆ.

ಜ್ಯೇಷ್ಠ ಶುದ್ಧ ದ್ವಾದಶಿಯು, ಆದಿಶಂಕರಾಚಾರ್ಯರು ಕೈಲಾಸ ಗಮನ ಮಾಡಿ, ಲೋಕಪಾಲಕನಾದ ಪರಮೇಶ್ವರನು ಪ್ರಸಾದಿಸಿದ ಐದು ಚಂದ್ರಮೌಳೀಶ್ವರ ಲಿಂಗಗಳ ಜೊತೆಗೆ, ಶ್ರೀಮಾತೆ ಪರಮೇಶ್ವರಿಯು ನೀಡಿದ ಸೌಂದರ್ಯಲಹರಿಯನ್ನು ಧರೆಗೆ ತಂದ ಪರಮ ಶ್ರೇಷ್ಟ ದಿನವೆಂದು ಶಂಕರವಿಜಯ ಪ್ರಸ್ತುತ ಪಡಿಸುತ್ತಿದೆ. ಮಂತ್ರ-ತಂತ್ರ-ಯಂತ್ರ ರಹಸ್ಯಗಳನ್ನೊಳಗೊಂಡ, ಗೌಡಪಾದಾಚಾರ್ಯರ ಸುಭಗೋದಯ ಸ್ತುತಿ ಪ್ರಭಾವದಿಂದ ಸೌಂದರ್ಯಲಹರಿಯನ್ನು ಶಂಕರಾಚಾರ್ಯರು ರಚಿಸಿದ್ದಾರೆ. ಸೌಂದರ್ಯಲಹರಿಯು, ಲಲಿತಾಸಹಸ್ರನಾಮದ ಕವಿತಾತ್ಮಕ ವ್ಯಾಖ್ಯಾನವಾಗಿದೆ. ನಾಮದಲ್ಲಿಯೇ ಸೌಃ-ಲಂ-ಹ್ರೀಂ ಬೀಜಾಕ್ಷರಗಳನ್ನು ಒಳಗೊಂಡ ಸೌಂದರ್ಯಲಹರಿಯು, ಒಂದು ಅಪೂರ್ವ ಸ್ತುತಿ ರೂಪದ ಕಾವ್ಯ. ಸಮಸ್ತ ಸೌಂದರ್ಯದ, ವೈವಿಧ್ಯಮಯ ಜಗತ್ತಿನ ವರ್ಣಮಯವಾದ ಚೆಲುವಿನ ಮೂಲ ಅಧಿಷ್ಠಾತ್ರಿಯಾಗಿರುವ, ಜಗಜ್ಜನನಿಯ ಭವ್ಯ-ದಿವ್ಯ ಮಹಿಮೆಯನ್ನು ಸ್ತುತಿಸುವ ಈ ಸ್ತೋತ್ರವು, ಶ್ರೀವಿದ್ಯಾ ಉಪಾಸನೆಗೆ ಒಂದು ಆಧಾರ ಗ್ರಂಥವಾಗಿದೆ. ವೈಶಿಷ್ಟ್ಯವೆಂದರೆ, ಮೇಲ್ನೋಟಕ್ಕೆ ಭಗವತಿಯ ಮಹಿಮೆ, ಸೌಂದರ್ಯ, ಗುಣವೈಭವಗಳ ವರ್ಣನೆಯಂತೆ ಕಂಡುಬಂದರೂ, ಅದರ ಹಿಂದೆ ಅನುಷ್ಠಾನಪರವಾದ, ಮಂತ್ರಾತ್ಮಕವಾದ ರಹಸ್ಯಾರ್ಥಗಳು ಅಡಗಿದ್ದು, ಉಪಾಸಕನ ಭಕ್ತಿ, ಶ್ರದ್ಧೆ ಹಾಗೂ ಸಾಧನೆಯ ಬಲದಿಂದ ಮಾತ್ರವೇ, ಅದರ ಅಂತರಾರ್ಥವನ್ನು ತಿಳಿಯಬಹುದಾಗಿದೆ. ಈ ಸ್ತೋತ್ರದ ಮೂಲಕ ಆದಿಶಂಕರರು, ಮಹಾಮಾತೆಯೂ, ಮಹಾರಾಜ್ಞಿಯೂ, ಸಿಂಹಾಸನೇಶ್ವರಿಯೂ, ಲಾವಣ್ಯಶೇವಧಿಯೂ, ಛಂದೋಸಾರಳೂ, ಶಾಸ್ತ್ರಸಾರಳೂ,

ತತ್ವಮಯಿಯೂ, ತತ್ವಾರ್ಥಸ್ವರೂಪಿಣಿಯೂ, ತ್ರಿಪುರಸುಂದರಿಯೂ ಆದ ಕಾಮೇಶ್ವರಿಯನ್ನು ಮಾತೃರೂಪದಲ್ಲಿ ದರ್ಶಿಸಿ ಚಿತ್ರಿಸಿದ್ದಾರೆ.

ಸೌಂದರ್ಯಲಹರಿಯು ಒಂದು ಶತಕ ಪದ್ಯಗಳನ್ನೊಳಗೊಂಡಿರುವಂತಹ ಸ್ತೋತ್ರರತ್ನವಾಗಿದೆ. ಇದರಲ್ಲಿ ಮೊದಲಿನ 41 ಪದ್ಯಗಳನ್ನು **"ಆನಂದ ಲಹರಿ"** ಎಂದೂ, ಅದರ ಮುಂದಿನ ಪದ್ಯಗಳನ್ನು **"ಸೌಂದರ್ಯಲಹರಿ"** ಎಂದೂ ಹೇಳಲಾಗುತ್ತದೆ. ಆನಂದ ಲಹರಿ ವಿಭಾಗದಲ್ಲಿ ಮಹಾತ್ರಿಪುರಸುಂದರೀ ವರ್ಣನೆ, ದೇವಿಯ ಸಗುಣೋಪಾಸನೆ, ನಿರ್ಗುಣೋಪಾಸನೆ, ಶ್ರೀಚಕ್ರೋಪಾಸನೆ, ಷೋಡಶಾಕ್ಷರೀ ಮಂತ್ರಮಹಿಮೆ, ಕುಂಡಲಿನೀ ಧ್ಯಾನ, ಶ್ರೀವಿದ್ಯಾ ಮಹಿಮೆ, ಕೆಲವು ಪ್ರಯೋಗಗಳು, ಶಿವಶಕ್ತಿ ಉಪಾಸನೆ, ಪ್ರಪಂಚ ರೂಪ ಪರಿಣಾಮ, ಸಮಯಮತದ ಪೂಜಾಕ್ರಮಗಳನ್ನು ವಿವರಿಸಿದ್ದಾರೆ. ಸೌಂದರ್ಯಲಹರಿ ವಿಭಾಗದಲ್ಲಿ, ಶ್ರೀದೇವಿಯ ಕಿರೀಟದಿಂದ ಕಾಲಿನವರೆಗೆ ಅವಯವ ವರ್ಣನೆಯನ್ನು ಕಾಣುತ್ತೇವೆ.

**ಸಂಸಾರದ ಭೀಕರವಾದ ಅಲೆಗಳಲ್ಲಿ ತೊಳಲಾಡುತ್ತಿರುವ ಜೀವಿಗಳನ್ನು ರಕ್ಷಿಸಲು ಸಾಧನೆ "ಭಗವತಿಯ ಚಿಂತನೆ".**

ಇಂದು ನಮ್ಮ ನಾದಾರ್ಚನೆ ತಂಡ, ಸಕಲ ವಿಧವಾದ ಆಪತ್ತುಗಳಿಂದಲೂ ನಮ್ಮನ್ನು ರಕ್ಷಿಸಿ, ನಾವು ಬೇಡುವ ಸಕಲ ಇಷ್ಟಾರ್ಥಗಳನ್ನೂ ಪೂರೈಸಿ, ನಮ್ಮನ್ನು ಸನ್ಮಾರ್ಗಕ್ಕೆ ಕರೆದೊಯ್ದು, ಭಕ್ತಿಮಾರ್ಗವನ್ನು ನೀಡುವ ದಿವ್ಯಮಂತ್ರ ಗುಚ್ಛವಾದ ಸೌಂದರ್ಯಲಹರಿಯ ಮೀಮಾಂಸೆಯನ್ನು ಹಮ್ಮಿಕೊಂಡಿದೆ. ಮೊದಲಿಗೆ ಆನಂದಲಹರಿಯ ಮೀಮಾಂಸೆ.

**ಓಂ ಸೃಷ್ಟಿಕರ್ತ್ರೀ ಬ್ರಹ್ಮರೂಪಾಯೈ ನಮಃ**

**ಓಂ ಸಂಹಾರಿಣೀ ರುದ್ರರೂಪಾಯೈ ನಮಃ**

**ಓಂ ಲಯಕರೀಯೈ ನಮಃ**

ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣೀಭೂತಳಾದ ಜಗಜ್ಜನನಿಯನ್ನು ಆದಿಶಕ್ತಿ ಎಂದು ಹೇಳಲಾಗುತ್ತದೆ. ದೇವಾನುದೇವತೆಗಳಲ್ಲೆಲ್ಲಾ ಅತ್ಯಂತ ಪ್ರಮುಖರೆನಿಸಿ, ಸೃಷ್ಟಿ-ಸ್ಥಿತಿ-ಲಯಗಳ ಹೊಣೆಗಾರಿಕೆ ಹೊತ್ತ ಬ್ರಹ್ಮ, ವಿಷ್ಣು, ಮಹೇಶ್ವರರು ಜಗಜ್ಜನನಿಯ ಅಧೀನರೆಂದೂ, ದೇವಿಯ ಪಾದಧೂಳಿಯ ಮಹಿಮೆಯಿಂದ, ಅವರು ಸೃಷ್ಟಿ-ಸ್ಥಿತಿ-ಲಯ ಕಾರ್ಯಗಳಿಗೆ ಕಾರಣೀಭೂತರಾಗಿರುವುದರಿಂದ, ಅವರಿಂದಲೂ ಶ್ರೀಮಾತೆಯು ವಂದ್ಯಳೆಂದು ತಿಳಿಸುತ್ತಾ, ತ್ರಿಮೂರ್ತಿಗಳಿಗಿಂತಲೂ ಅವಳನ್ನು ಶ್ರೇಷ್ಠಳೆಂದು ಪರಿಗಣಿಸಿ, ಆ ದೇವಿಯನ್ನು ಭಕ್ತಿಯ ಪರಾಕಾಷ್ಠೆಯಲ್ಲಿ ಸ್ತುತಿಸುವುದೇ ಸೌಂದರ್ಯಲಹರಿಯ ಈ ಶ್ಲೋಕಗಳ ಸಾರ.

**ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।**
**ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥**

**ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ ವಿರಿಂಚಿಃ ಸಂಚಿನ್ವನ್ ವಿರಚಯತಿ ಲೋಕಾನವಿಕಲಮ್ ।**
**ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ ಹರಃ ಸಂಕ್ಷುಭ್ಯೈನಂ ಭಜತಿ ಭಸಿತೋದ್ಧೂಲನವಿಧಿಮ್ ॥**

ಜಗತ್ತಿನ ಮೂಲ ಚೈತನ್ಯ ಸ್ವರೂಪನಾದ ಶಿವನು, ಮಾಯಾ ಸ್ವರೂಪಿಣಿಯಾದ ಶಕ್ತಿಯೊಂದಿಗೆ ಒಡಗೂಡಿದಾಗ ಮಾತ್ರಾ ಪ್ರಪಂಚದ ಉತ್ಪತ್ತ್ಯಾದಿಗಳು ಸಾಧ್ಯ. ಶಕ್ತಿಯ ಸಹಕಾರವಿಲ್ಲದೇ ಕೇವಲ ಚೈತನ್ಯ ಒಂದರಿಂದಲೇ ಏನು ಮಾಡಲೂ ಸಾಧ್ಯವಿಲ್ಲ. ಶಿವನು ಎಷ್ಟೇ ಶಕ್ತಿಯುತನಾದರೂ, ಶಿವೆಯ ಸಹಯೋಗವಿಲ್ಲದಿದ್ದರೆ ಏನನ್ನೂ ಸಾಧಿಸಲಾರನೆಂಬ ಅಂಶವನ್ನು ಈ ಮಹಾಮಂತ್ರ ಸ್ಪಷ್ಟಪಡಿಸುತ್ತದೆ.

**ಪರೋಪಿ ಶಕ್ತಿ ರಹಿತಃ ಶಕ್ತ್ಯಾ ಯುಕ್ತೋ ಭವೇದ್ಯದಿ । ಸೃಷ್ಟಿ ಸ್ಥಿತಿ ಲಯಾನ್ ಕರ್ತುಂ ಅಶಕ್ತಃ ಶಕ್ತ ಏವ ಹಿ ॥**

ಶಕ್ತಿ ಸ್ವರೂಪಿಣಿಯಾದ ಪಾರ್ವತಿಯು ಶಿವಮಯವಾಗಿ, ಶಿವ ಸ್ವರೂಪನಾದ ಈಶ್ವರನು ಶಕ್ತಿಮಯವಾಗಿ ಕಾಣುವ, ಈ ಶಿವ-ಶಕ್ತಿ ತತ್ವಗಳ ಐಕ್ಯತೆಯನ್ನು ಪ್ರತಿಬಿಂಬಿಸುವ ಅರ್ಧನಾರೀಶ್ವರ ರೂಪಾಕೃತಿಯು ಅನುಭವಗಮ್ಯವಾದ ಅನುಪಮ ಸೌಂದರ್ಯವನ್ನು ಹೊಂದಿರುವುದಾಗಿರುತ್ತದೆ. ರೂಪಾಕೃತಿಯ ನಿದರ್ಶನ, ಶಿವಶಕ್ತಿಗಳ ಐಕ್ಯವರ್ಣನೆ, ಶಕ್ತಿ ಸ್ವರೂಪಿಣಿಯನ್ನು ಶಿವಮಯವಾಗಿ ಕಾಣುವ ವಿಧಾನವನ್ನು ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಕಾಣಬಹುದಾಗಿದೆ.

**ತ್ವಯಾ ಹೃತ್ವಾ ವಾಮಂ ವಪುರಪರಿತೃಪ್ತೇನ ಮನಸಾ ಶರೀರಾರ್ಧಂ ಶಂಭೋರಪರಮಪಿ ಶಂಕೇ ಹೃತಮಭೂತ್ ।**
**ಯದೇತತ್ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮಕುಟಮ್ ॥**

**ಶರೀರಂ ತ್ವಂ ಶಂಭೋಃ ಶಶಿಮಿಹಿರವಕ್ಷೋರುಹಯುಗಂ ತವಾತ್ಮಾನಂ ಮನ್ಯೇ ಭಗವತಿ ನವಾತ್ಮಾನಮನಘಮ್ ।**
**ಅತಶ್ಶೇಷಶ್ಶೇಷೀತ್ಯಯಮುಭಯಸಾಧಾರಣತಯಾ ಸ್ಥಿತಃ ಸಂಬಂಧೋ ವಾಂ ಸಮರಸಪರಾನಂದಪರಯೋಃ ॥**

**ಶರಣಾಗತ ದೀನಾರ್ತ ಪರಿತ್ರಾಣ ಪರಾಯಣೇ। ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಸ್ತುತೇ॥**

ಭಕ್ತಿಯಿಂದ ತ್ರಿಕರಣ ಪೂರ್ವಕವಾಗಿ ನಮಿಸಿದವರಿಗೆ, ದೇವಿಯು ಸೌಭಾಗ್ಯ, ಸುಭಗತ್ವ, ಸಾರೂಪ್ಯ ಮತ್ತು ಸೌಶೀಲ್ಯಾದಿ ಭಾಗ್ಯಗಳನ್ನು ನೀಡುವಳೆಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಲಾಗಿದೆ. ಭಕ್ತರ ಕಷ್ಟಗಳನ್ನು ದೂರ ಮಾಡುವುದಷ್ಟೇ ಅಲ್ಲದೆ, ಅವರಿಗೆ ಐಹಿಕ ಮತ್ತು ಪಾರಲೌಕಿಕ ಸುಖವನ್ನು ಸಹಾ ಪ್ರಸಾದಿಸುತ್ತಾಳೆ.

**ಸ್ತುತಾ ಸಂಪೂಜಿತಾ ಪುಷ್ಪೈರ್ಧೂಪ ಗಂಧಾದಿಭಿಸ್ತಥಾ ದದಾತಿ ವಿತ್ತಂ ಪುತ್ರಾಂಶ್ಚ ಮತಿಂ ಧರ್ಮೇ ತಥಾ ಶುಭಂ**

**ಸ ಚಿಂತಿತಾ ಚ ವಿಜ್ಞಾನಂ ತುಷ್ಟಾ ಬುದ್ಧಿಂ ಪ್ರಯಚ್ಛತಿ ಸಾಧಿತಾ ನೈವ ನೃಣಾಂ ಭೋಗ ಸ್ವರ್ಗಾಪವರ್ಗದಾ||**

ದೇವಾನುದೇವತೆಗಳೂ ಸಹ ದೇವಿಯ ಕೃಪೆಯನ್ನು ಯಾಚಿಸುವಂತಹವರೇ ಆಗಿದ್ದಾರೆ. ಇದಕ್ಕೆ ಮನ್ಮಥ, ಶಿವ, ವಿಷ್ಣು ಯಾರೂ ಹೊರತಲ್ಲ, ಎಂಬುದನ್ನು ಸೌಂದರ್ಯಲಹರಿಯ ಈ ಶ್ಲೋಕ ವಿವರಿಸುತ್ತದೆ.

**ಹರಿಸ್ತ್ವಾಮಾರಾಧ್ಯ ಪ್ರಣತಜನಸೌಭಾಗ್ಯಜನನೀಂ ಪುರಾ ನಾರೀ ಭೂತ್ವಾ ಪುರರಿಪುಮಪಿ ಕ್ಷೋಭಮನಯತ್ ।**
**ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ ಮುನೀನಾಮಪ್ಯಂತಃ ಪ್ರಭವತಿ ಹಿ ಮೋಹಾಯ ಮಹತಾಮ್ ॥**

ದೇವಿಯು ಐಹಿಕ ಸುಖಭೋಗಗಳನ್ನು ನೀಡುವುದರಲ್ಲಿ ಸಂಶಯವೇ ಇಲ್ಲ ಎಂಬುದಕ್ಕೆ ಸೌಂದರ್ಯಲಹರಿಯ ಈ ಶ್ಲೋಕ ಒಂದು ನಿದರ್ಶನ.

**ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ ।**
**ಗಲದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾ ಹಠಾತ್ ತ್ರುಟ್ಯತ್ಕಾಂಚ್ಯೋ ವಿಗಲಿತದುಕೂಲಾ ಯುವತಯಃ ॥**

ಅವಳ ಕೃಪಾಕಟಾಕ್ಷವಿದ್ದರೆ ಏನು ಬೇಕಾದರೂ ಸಾಧ್ಯವಾದೀತೆಂಬುದನ್ನು ಇದು ಸ್ಪಷ್ಟ ಪಡಿಸುತ್ತದೆ. “ಅವ್ಯಾಜ ಕರುಣಾಮೂರ್ತಿ” ಅವಳ ಕರುಣೆ ಅಪಾರವೆಂಬುದನ್ನು ಸೌಂದರ್ಯಲಹರಿಯ ಈ ಶ್ಲೋಕ ಸ್ಪಷ್ಟ ಪಡಿಸುತ್ತದೆ.

**ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಮಿತಿ ಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ ।**
**ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ ಮುಕುಂದಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಮ್ ॥**

**ಶ್ರೀಮದ್ವಾಗ್ಭವ ಕೂಟೈಕ ಸ್ವರೂಪ ಮುಖಪಂಕಜಾ । ಕಂಠಾಧಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ ॥**

**ಶಕ್ತಿಕೂಟೈಕ ತಾಪನ್ನ ಕಟ್ಯಥೋಭಾಗ ಧಾರಿಣೀ । ಮೂಲಮಂತ್ರಾತ್ಮಿಕಾ, ಮೂಲಕೂಟ ತ್ರಯ ಕಲೇವರಾ ॥**

ಲಲಿತಾ ಸಹಸ್ರನಾಮದಲ್ಲಿ, ಶ್ರೀದೇವಿಯ ಮಂತ್ರವಾದ ಪಂಚದಶಾಕ್ಷರಿಯ ಮೂರು ವಿಭಾಗಗಳನ್ನು ಪ್ರತಿಪಾದಿಸಿ, ಮೂಲಮಂತ್ರದ ಅರ್ಥವನ್ನು ರಹಸ್ಯಾರ್ಥದಲ್ಲಿ ತಿಳಿಸಿರುತ್ತದೆ.

**ಆತ್ಮವಿದ್ಯಾ, ಮಹಾವಿದ್ಯಾ, ಶ್ರೀವಿದ್ಯಾ, ಕಾಮಸೇವಿತಾ।ಶ್ರೀಷೋಡಶಾಕ್ಷರೀ ವಿದ್ಯಾ, ತ್ರಿಕೂಟಾ, ಕಾಮಕೋಟಿಕಾ॥**

ಕಲಾನಿಧಿಯೂ, ಕಲಾಮಾಲೆಯೂ, ಕಾವ್ಯ ಕಲೆಯೂ ಆದ ಜಗಜ್ಜನನಿಯು, ನಾದಬ್ರಹ್ಮದ ಶಕ್ತಿ ಸ್ವರೂಪವಾದ ಷೋಡಶಾಕ್ಷರೀ ವಿದ್ಯೆಯನ್ನು ಪುಷ್ಪಮಾಲಿಕೆಯಂತೆ ಧರಿಸಿರುವವಳೂ, ಸ್ವರ ವ್ಯಂಜನ ಸಂಯೋಗದಿಂದ ಉಂಟಾಗುವ ಸಕಲ ಕಲಾನಿಧಿಯಾಗಿರುವ ಶ್ರೀದೇವಿಯ ಮಂತ್ರ ಮಹಿಮೆ ಮತ್ತು 15 ಅಕ್ಷರಗಳನ್ನುಳ್ಳ ಪಂಚದಶಾಕ್ಷರಿ ಮಂತ್ರವು, 16 ಅಕ್ಷರಗಳನ್ನುಳ್ಳ ಷೋಡಶಾಕ್ಷರೀ ಮಂತ್ರವಾಗುವ, ಮಂತ್ರೋದ್ಧಾರ ಕ್ರಮವನ್ನು ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ವಿವರಿಸಲಾಗಿದೆ.

**ಚತುಷ್ಷಷ್ಟ್ಯಾ ತಂತ್ರೈಃ ಸಕಲಮತಿಸಂಧಾಯ ಭುವನಂ ಸ್ಥಿತಸ್ತತ್ತತ್ಸಿದ್ಧಿಪ್ರಸವಪರತಂತ್ರೈಃ ಪಶುಪತಿಃ ।**
**ಪುನಸ್ತ್ವನ್ನಿರ್ಬಂಧಾದಖಿಲಪುರುಷಾರ್ಥೈಕಘಟನಾಸ್ವತಂತ್ರಂ ತೇ ತಂತ್ರಂ ಕ್ಷಿತಿತಲಮವಾತೀತರದಿದಮ್ ॥**

**ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ ಸ್ಮರೋ ಹಂಸಃ ಶಕ್ರಸ್ತದನು ಚ ಪರಾಮಾರಹರಯಃ ।**
**ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾ ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥**

**ಸ್ಮರಂ ಯೋನಿಂ ಲಕ್ಷ್ಮೀಂ ತ್ರಿತಯಮಿದಮಾದೌ ತವ ಮನೋರ್ನಿಧಾಯೈಕೇ ನಿತ್ಯೇ ನಿರವಧಿಮಹಾಭೋಗರಸಿಕಾಃ ।**
**ಭಜಂತಿ ತ್ವಾಂ ಚಿಂತಾಮಣಿಗುನನಿಬದ್ಧಾಕ್ಷವಲಯಾಃ ಶಿವಾಗ್ನೌ ಜುಹ್ವಂತಃ ಸುರಭಿಘೃತಧಾರಾಹುತಿಶತೈಃ ॥**

**ಮಹಾತಂತ್ರಾ, ಮಹಾಮಂತ್ರಾ, ಮಹಾಯಂತ್ರಾ, ಮಹಾಸನಾ;** ಭಗವತಿಯನ್ನು ರೇಖಾಕೃತಿ, ಮಂತ್ರಾಕೃತಿ, ರೂಪಾಕೃತಿಗಳಲ್ಲಿ ಪೂಜಿಸುವುದುಂಟು. ಅವುಗಳಲ್ಲಿ ರೇಖಾಕೃತಿಯು ಶ್ರೀಚಕ್ರ.

**ಬಿಂದು ತ್ರಿಕೋಣ ವಸುಕೋಂ ದಶಾರಯುಗ್ಮ ।ಮನ್ವಶ್ರ ನಾಗದಳ ಸಂಯುತ ಷೋಡಶಾರಂ ॥**
**ವೃತ್ತತ್ರಯಂ ಚ ಧರಣೀ ಸದನ ತ್ರಯಂ ಚ । ಶ್ರೀಚಕ್ರ ಮೇತದುದಿತಂ ಪರದೇವತಾಯಾಃ ॥**

ಶ್ರೀಚಕ್ರದ ಹಿರಿಮೆಯನ್ನೂ, ಪೂರ್ವವೃತ್ತಾಂತವನ್ನೂ, ಶ್ರೀಚಕ್ರದ ಉಪಾಸನಾ ಕ್ರಮವನ್ನೂ ಸೌಂದರ್ಯಲಹರಿಯ ಈ ಶ್ಲೋಕಗಳು ವಿವರಿಸುತ್ತವೆ.

**ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತೋ ನಿಷೇವ್ಯೇ ನಿತ್ಯೇ ತ್ವಾಮಹಮಿತಿ ಸದಾ ಭಾವಯತಿ ಯಃ ।**
**ಕಿಮಾಶ್ಚರ್ಯಂ ತಸ್ಯ ತ್ರಿನಯನಸಮೃದ್ಧಿಂ ತೃಣಯತೋ ಮಹಾಸಂವರ್ತಾಗ್ನಿರ್ವಿರಚಯತಿ ನಿರಾಜನವಿಧಿಮ್ ॥**

**ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ ಪಂಚಭಿರಪಿ ಪ್ರಭಿನ್ನಾಭಿಃ ಶಂಭೋರ್ನವಭಿರಪಿ ಮೂಲಪ್ರಕೃತಿಭಿಃ ।**
**ಚತುಶ್ಚತ್ವಾರಿಂಶದ್ವಸುದಲಕಲಾಶ್ರತ್ರಿವಲಯತ್ರಿರೇಖಾಭಿಃ ಸಾರ್ಧಂ ತವ ಶರಣಕೋಣಾಃ ಪರಿಣತಾಃ ॥**

**ಓಂ ಆಜ್ಞಾಚಕ್ರಾಬ್ಜ ನಿಲಯಾಯೈ ನಮಃ**

**ಓಂ ಮೂಲಾಧಾರಾಂಬುಜಾರೂಢಾಯೈ ನಮಃ**

**ಓಂ ಮಣಿಪೂರಾಬ್ಜನಿಲಯಾಯೈ ನಮಃ**

**ಓಂ ಅನಾಹತಾಬ್ಜನಿಲಯಾಯೈ ನಮಃ**

**ಓಂ ಸ್ವಾಧಿಷ್ಠಾನಾಂಬುಜಗತಾಯೈ ನಮಃ**

ಆಜ್ಞಾಚಕ್ರದಲ್ಲಿರುವ ಮನಸ್ತತ್ವವೂ, ವಿಶುದ್ಧ ಚಕ್ರದಲ್ಲಿರುವ ಆಕಾಶ ತತ್ವವೂ, ಅನಾಹತ ಚಕ್ರದಲ್ಲಿರುವ ವಾಯು ತತ್ವವೂ, ಸ್ವಾಧಿಷ್ಠಾನ ಚಕ್ರದಲ್ಲಿರುವ ಅಗ್ನಿ ತತ್ವವೂ, ಮಣಿಪೂರಕ ಚಕ್ರದಲ್ಲಿರುವ ಜಲ ತತ್ವವೂ, ಮೂಲಾಧಾರ ಚಕ್ರದಲ್ಲಿರುವ ಪೃಥ್ವಿ ತತ್ವವೂ, ಭಗವತಿಯೇ ಎನ್ನುವುದರ ಮೂಲಕ ಸೃಷ್ಟಿ-ಸ್ಥಿತಿ-ಲಯಗಳಿಗೆ ಅವಳೇ ಕಾರಣಳೆಂದು ವರ್ಣಿಸಲಾಗಿದೆ.

ಮೊದಲು ಭಗವತಿಯ ಸರ್ವಾಂತರ್ಯಾಮಿತ್ವವನ್ನು ವಿವರಿಸಿ, ತದನಂತರ ಕ್ರಮವಾಗಿ, ಆಜ್ಞಾ, ವಿಶುದ್ಧೀ, ಅನಾಹತ, ಸ್ವಾಧಿಷ್ಠಾನ, ಮಣಿಪೂರ ಮತ್ತು ಮೂಲಾಧಾರ ಚಕ್ರಗಳಲ್ಲಿ ದೇವಿಯ ಸರ್ವಶಕ್ತಿತ್ವವನ್ನೂ, ಸರ್ವರೂಪತ್ವವನ್ನೂ ಧ್ಯಾನಿಸಲಾಗಿದೆ ಮತ್ತು ಆಯಾ ಚಕ್ರದಲ್ಲಿನ ವಿಶಿಷ್ಟ ಸ್ವರೂಪದ ದೇವತೆಯ ಆರಾಧನೆಯಿಂದ ಸಾಧಕನಿಗೆ ದೊರೆಯುವ ವಾಂಛಿತ ಫಲಗಳ ನಿರೂಪಣೆಯನ್ನೂ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಕಾಣಬಹುದಾಗಿದೆ.

**ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ಸಾರಥಿರಸಿ ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನ ಹಿ ಪರಮ್ ।**
**ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ ಚಿದಾನಂದಾಕಾರಂ ಶಿವಯುವತಿ ಭಾವೇನ ಬಿಭೃಷೇ ॥**

**ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ ಪರಂ ಶಂಭುಂ ವಂದೇ ಪರಿಮಿಲಿತಪಾರ್ಶ್ವಂ ಪರಚಿತಾ ।**
**ಯಮಾರಾಧ್ಯನ್ ಭಕ್ತ್ಯಾ ರವಿಶಶಿಶುಚೀನಾಮವಿಷಯೇ ನಿರಾಲೋಕೇಽಲೋಕೇ ನಿವಸತಿ ಹಿ ಭಾಲೋಕಭುವನೇ ॥**

**ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ ವ್ಯೋಮಜನಕಂ ಶಿವಂ ಸೇವೇ ದೇವೀಮಪಿ ಶಿವಸಮಾನವ್ಯವಸಿತಾಮ್ ।**
**ಯಯೋಃ ಕಾಂತ್ಯಾ ಯಾಂತ್ಯಾಃ ಶಶಿಕಿರಣಸಾರೂಪ್ಯಸರಣೇವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತೀ ॥**

**ಸಮುನ್ಮೀಲತ್ ಸಂವಿತ್ ಕಮಲಮಕರಂದೈಕರಸಿಕಂ ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್ ।**
**ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿರ್ಯದಾದತ್ತೇ ದೋಷಾದ್ ಗುಣಮಖಿಲಮದ್ಭ್ಯಃ ಪಯ ಇವ ॥**

**ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ ನಿರತಂ ತಮೀಡೇ ಸಂವರ್ತಂ ಜನನಿ ಮಹತೀಂ ತಾಂ ಚ ಸಮಯಾಮ್ ।**
**ಯದಾಲೋಕೇ ಲೋಕಾನ್ ದಹತಿ ಮಹತಿ ಕ್ರೋಧಕಲಿತೇ ದಯಾರ್ದ್ರಾ ಯಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ ॥**

**ತಟಿತ್ತ್ವಂತಂ ಶಕ್ತ್ಯಾ ತಿಮಿರಪರಿಪಂಥಿಫುರಣಯಾ ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಮ್ ।**
**ತವ ಶ್ಯಾಮಂ ಮೇಘಂ ಕಮಪಿ ಮಣಿಪೂರೈಕಶರಣಂ ನಿಷೇವೇ ವರ್ಷಂತಂ ಹರಮಿಹಿರತಪ್ತಂ ತ್ರಿಭುವನಮ್ ॥**

**ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್ ।**
**ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ॥**

ಭಗವತಿಯನ್ನು ಲಕ್ಷ್ಮೀ, ಸರಸ್ವತಿಯರಿಗಿಂತ ಶ್ರೇಷ್ಠಳೆಂದು ಪ್ರತಿಬಿಂಬಿಸಿರುವುದರ ಜೊತೆ ಜೊತೆಯಲ್ಲಿಯೇ, ಲಕ್ಷ್ಮೀ, ಸರಸ್ವತಿಯರು ಪಾರ್ವತಿಯಲ್ಲಿಯೇ ಐಕ್ಯವೆನ್ನುವ ಹಾಗೂ ಅವರೆಲ್ಲರ ತಾದಾತ್ಮತೆಯು ಆದಿಶಕ್ತಿಯಲ್ಲಿದೆ ಎಂದೆನ್ನುವ ಏಕತತ್ವವಾದದ ಪ್ರತಿರೂಪವನ್ನು ಸೌಂದರ್ಯಲಹರಿಯ ಶ್ಲೋಕಗಳಲ್ಲಿ ಕಾಣಬಹುದಾಗಿದೆ.

**ಯಾ ಕುಂದೇಂದು ತುಷಾರಹಾರಧವಳಾ ಯಾ ಶುಭ್ರವಸ್ತ್ರಾವೃತಾ**
**ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ ।**
**ಯಾ ಬ್ರಹ್ಮಾಚ್ಯುತ ಶಂಕರಪ್ರಭೃತಿಭಿರ್ದೇವೈಸ್ಸದಾ ಪೂಜಿತಾ**
**ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥**

ಇಂತಹ ಸರಸ್ವತಿಯ ದರ್ಶನವನ್ನು ಆದಿಶಂಕರರಿಂದ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಹೀಗೆ ಪ್ರಸ್ತುತಪಡಿಸಲಾಗಿದೆ.

**ಶರಜ್ಜ್ಯೋತ್ಸ್ನಾ ಶುದ್ಧಾಂ ಶಶಿಯುತಜಟಾಜೂಟಮಕುಟಾಂ ವರತ್ರಾಸತ್ರಾಣಸ್ಫಟಿಕಘಟಿಕಾಪುಸ್ತಕಕರಾಮ್ ।**
**ಸಕೃನ್ನ ತ್ವಾ ನತ್ವಾ ಕಥಮಿವ ಸತಾಂ ಸಂನ್ನಿದಧತೇ ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ ಫಣಿತಯಃ ॥**

**ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ ಭಜಂತೇ ಯೇ ಸಂತಃ ಕತಿಚಿದರುಣಾಮೇವ ಭವತೀಮ್ ।**
**ವಿರಿಂಚಿಪ್ರೇಯಸ್ಯಾಸ್ತರುಣತರಶೃಂಗಾರಲಹರೀಗಭೀರಾಭಿರ್ವಾಗ್ಭಿರ್ವಿದಧತಿ ಸತಾಂ ರಂಜನಮಮೀ ॥**

**ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿಃ ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ ।**
**ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ ಭಂಗಿರುಚಿಭಿಃ ವಚೋಭಿರ್ವಾಗ್ದೇವೀವದನಕಮಲಾಮೋದಮಧುರೈಃ ॥**

ಮಾತಾ ಪೂರ್ವ ರೂಪಂ, ಪಿತೋರುತ್ತರ ರೂಪಂ. ಚಿಚ್ಛಕ್ತಿಯಾದ ಶ್ರೀಮಾತೆ ಆದಿರೂಪಳು. ಪ್ರತಿಫಲಿತ ಚೈತನ್ಯನಾದ ಪಿತನು ಅನಂತರದವನು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾಗಿಯೂ, ಪುರುಷತ್ವ, ಸ್ತ್ರೀತ್ವಗಳೆರಡಕ್ಕೂ ಕಾರಣವಾಗಿಯೂ, ತ್ರಿಮೂರ್ತಿಗಳಿಗೂ ಆದಿಯಾಗಿಯೂ, ಯಾವ ಶಕ್ತಿ ಇರುವುದೋ ಅದೇ ಜಗನ್ಮಾತೆಯಾದ ಪರದೇವತೆಯು. ಶಕ್ತಿ ಎನಿಸುವ ಮಾತೆಯು ಶಕ್ತನೆನಿಸುವ ಪಿತನಿಗೆ ಆದಿಯಾಗಿರುವಳು. ಶಕ್ತಿ ಎನಿಸುವ ಪರಬ್ರಹ್ಮ ಸ್ವರೂಪಿಣಿಯಾದ ಶ್ರೀಮಾತೆಯನ್ನು ಪ್ರಧಾನವಾದ ಕುಲದೇವತೆಯಾಗಿ ಭಾವಿಸಿ, ದೇವಾನುದೇವತೆಗಳೆಲ್ಲಾ ಅವಳಿಗೆ ಅಗ್ರಪೂಜೆಯನ್ನು ಸಮರ್ಪಿಸುವರು. ಅವಳೇ ಸಾಕ್ಷಾತ್ ಪರಬ್ರಹ್ಮ ಸ್ವರೂಪಿಣಿಯೆಂದು ತಿಳಿದು, ಉಪಾಸಿಸಿ, ಮೋಕ್ಷ ಸಾಮ್ರಾಜ್ಯವನ್ನು ಹೊಂದುವುದೇ ಶ್ರೀವಿದ್ಯೆ. ಮೋಕ್ಷಪ್ರಾಪ್ತಿ, ಆತ್ಮಸಾಕ್ಷಾತ್ಕಾರ, ಅಜ್ಞಾನ ನಿವೃತ್ತಿ, ಮೊದಲಾದ ಶ್ರೀವಿದ್ಯಾ ಮಹಿಮೆಗಳನ್ನು ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಕಾಣಬಹುದು.

**ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿಪ್ರಭೃತಯಃ ।**
**ಯದಾಲೋಕೌತ್ಸುಕ್ಯಾದಮರಲಲನಾ ಯಾಂತಿ ಮನಸಾ ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯಪದವೀಮ್ ॥**

**ಜಗತ್ಸೂತೇ ಧಾತಾ ಹರಿರವತಿ ರುದ್ರಃ ಕ್ಷಪಯತೇ ತಿರಸ್ಕುರ್ವನ್ನೇತತ್ಸ್ವಮಪಿ ವಪುರೀಶಸ್ತಿರಯತಿ ।**
**ಸದಾಪೂರ್ವಃ ಸರ್ವಂ ತದಿದಮನುಗೃಹ್ಣಾತಿ ಚ ಶಿವಸ್ತವಾಜ್ಞಾಮಾಲಂಬ್ಯ ಕ್ಷಣಚಲಿತಯೋರ್ಭ್ರೂಲತಿಕಯೋಃ ॥**

**ತ್ರಯಾಣಾಂ ದೇವಾನಾಂ ತ್ರಿಗುಣಜನಿತಾನಾಂ ತವ ಶಿವೇ ಭವೇತ್ ಪೂಜಾ ಪೂಜಾ ತವ ಚರಣಯೋರ್ಯಾ ವಿರಚಿತಾ ।**
**ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ ಸ್ಥಿತಾ ಹ್ಯೇತೇ ಶಶ್ವನ್ಮುಕುಲಿತಕರೋತ್ತಂಸಮಕುಟಾಃ ॥**

**ವಿರಿಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ ವಿನಾಶಂ ಕೀನಾಶೋ ಭಜತಿ ಧನದೋ ಯಾತಿ ನಿಧನಮ್ ।**
**ವಿತಂದ್ರೀ ಮಾಹೇಂದ್ರೀ ವಿತತಿರಪಿ ಸಂಮೀಲಿತದೃಶಾ ಮಹಾಸಂಹಾರೇಽಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ ॥**

**ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾವಿರಚನಾ ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ ।**
**ಪ್ರಣಾಮಸ್ಸಂವೇಶಸ್ಸುಖಮಖಿಲಮಾತ್ಮಾರ್ಪಣದೃಶಾ ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ ॥**

**ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯುಹರಿಣೀಂ ವಿಪದ್ಯಂತೇ ವಿಶ್ವೇ ವಿಧಿಶತಮಖಾದ್ಯಾ ದಿವಿಷದಃ ।**
**ಕರಾಲಂ ಯತ್ಕ್ಷ್ವೇಲಂ ಕಬಲಿತವತಃ ಕಾಲಕಲನಾ ನ ಶಂಭೋಸ್ತನ್ಮೂಲಂ ತವ ಜನನಿ ತಾಟಂಕಮಹಿಮಾ ॥**

**ಕಿರೀಟಂ ವೈರಿಂಚಂ ಪರಿಹರ ಪುರಃ ಕೈಟಭಭಿದಃ ಕಠೋರೇ ಕೋಟೀರೇ ಸ್ಖಲಸಿ ಜಹಿ ಜಂಭಾರಿಮುಕುಟಮ್ ।**
**ಪ್ರಣಮ್ರೇಷ್ವೇತೇಷು ಪ್ರಸಭಮುಪಯಾತಸ್ಯ ಭವನಂ ಭವಸ್ಯಾಭ್ಯುತ್ಥಾನೇ ತವ ಪರಿಜನೋಕ್ತಿರ್ವಿಜಯತೇ ॥**

ತಾಂತ್ರಿಕ ಪ್ರಯೋಗ, ಕುಂಡಲಿನೀ ಮಹಿಮೆ, ಜಗತ್ತನ್ನು ಆವರಿಸಿರುವ ಪಂಚಭೂತ ತತ್ವಗಳೂ ಹಾಗೂ ಮನಸ್ಸನ್ನು ಸೃಷ್ಟಿಸಿರುವ ಭಗವತಿಯ ವಿವರಣೆ, ವಿಶ್ವಾತ್ಮಕ ದೃಷ್ಟಿಯಿಂದ ಭಗವತಿಯ ವಿಶ್ರಾಂತಿಧಾಮ, ದೇವಿಯ ಪಾದಾಂಕಿತವಾದ ಷಟ್ಚಕ್ರಗಳ ಕಿರಣ ವಿಭಾಗದ ನಿರೂಪಣೆಯನ್ನು ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಕಾಣಬಹುದಾಗಿದೆ.

**ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲಿತೈಃ ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯಮಹಸಃ ।**
**ಅವಾಪ್ಯ ಸ್ವಾಂ ಭೂಮಿಂ ಭುಜಗನಿಭಮಧ್ಯುಷ್ಟವಲಯಂ ಸ್ವಮಾತ್ಮಾನಂ ಕೃತ್ವಾ ಸ್ವಪಿಷಿ ಕುಲಕುಂಡೇ ಕುಹರಿಣಿ ॥**

ಕ್ಷಿತೌ ಷಟ್ಪಂಚಾಶದ್ ದ್ವಿಸಮಧಿಕಪಂಚಾಶದುದಕೇ ಹುತಾಶೇ ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ ।
ದಿವಿ ದ್ವಿಷ್ಷಟ್ತ್ರಿಂಶನ್ಮನಸಿ ಚ ಚತುಷ್ಷಷ್ಟಿರಿತಿ ಯೇ ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್ ॥

ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್ ।
ಮಹಾಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ ॥

ದೇವಿಯ ಕೃಪೆಯ ಪ್ರಭಾವ, ಸೌಂದರ್ಯದ ಮಹಿಮೆ, ದಿವ್ಯಮೂರ್ತಿ ಸ್ವರೂಪ, ಪೀಠ ವರ್ಣನೆ, ಅವಿದ್ಯೆ ಎಂಬ ಕತ್ತಲಿಗೆ ಸೂರ್ಯನಂತೆ ಅಭೀಷ್ಟವನ್ನು ಕೊಡುವ ಚಿಂತಾಮಣಿಯಂತಿರುವ ಮಹಾಮಾತೆಯ ಪಾದರೇಣುವಿನ ಮಹಿಮೆ, ಅಧಿಕಾಧಿಕ ಫಲವನ್ನು ಕೊಡುವ ಜಗದಂಬೆಯ ಚರಣಾರವಿಂದಗಳ ಮಹಿಮೆ, ಭಗವತಿಯ ಭವ್ಯ ದಿವ್ಯ ದರ್ಶನ, ಜ್ಞಾನಾನಂದ ಸ್ವರೂಪಳಾದ ಭವಾನಿಯ ಪೀಠ ವರ್ಣನೆ, ಶಿವೆಯ ವಿಹಾರ ಮಾರ್ಗಗಳ ಪರಿಚಯ, ಮುಂತಾದ ಸಾಯುಜ್ಯ ಪದವಿಯನ್ನು ಕೊಡುವ ಧ್ಯಾನ ವಿಶೇಷಗಳೊಂದಿಗೆ ದೇವಿಯ ಉಪಾಸನಾ ಕ್ರಮದ ವಿವರಣೆಯನ್ನು ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ಕಾಣಬಹುದು.

ಅವಿದ್ಯಾನಾಮಂತ-ಸ್ತಿಮಿರ-ಮಿಹಿರದ್ವೀಪನಗರೀ ಜಡಾನಾಂ ಚೈತನ್ಯ-ಸ್ತಬಕ-ಮಕರಂದ-ಸ್ರುತಿಝುರೀ ।
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ ನಿಮಗ್ನಾನಾಂ ದಂಷ್ಟ್ರಾ ಮುರರಿಪು-ವರಾಹಸ್ಯ ಭವತಿ ॥

ತ್ವದನ್ಯಃ ಪಾಣಿಭ್ಯಾಮಭಯವರದೋ ದೈವತಗಣಃ ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ ।
ಭಯಾತ್ ತ್ರಾತುಂ ದಾತುಂ ಫಲಮಪಿ ಚ ವಾಂಛಾಸಮಧಿಕಂ ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ ॥

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾಃ ವಸಂತಃ ಸಾಮಂತೋ ಮಲಯಮರುದಾಯೋಧನರಥಃ ।
ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾಂ ಅಪಾಂಗಾತ್ತೇ ಲಬ್ಧ್ವಾ ಜಗದಿದ-ಮನಂಗೋ ವಿಜಯತೇ ॥

ಕ್ವಣತ್ಕಾಂಚೀದಾಮಾ ಕರಿಕಲಭಕುಂಭಸ್ತನನತಾ ಪರಿಕ್ಷೀಣಾ ಮಧ್ಯೇ ಪರಿಣತಶರಚ್ಚಂದ್ರವದನಾ ।
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋಪುರುಷಿಕಾ ॥

ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀಪರಿವೃತೇ ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ ।
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಮ್ ॥

ಮಹೀಂ ಮೂಲಾಧಾರೇ ಕಮಪಿ ಮಣಿಪೂರೇ ಹುತವಹಂ ಸ್ಥಿತಂ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ ।
ಮನೋಽಪಿ ಭ್ರೂಮಧ್ಯೇ ಸಕಲಮಪಿ ಭಿತ್ವಾ ಕುಲಪಥಂ ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ ॥

ತನುಚ್ಛಾಯಾಭಿಸ್ತೇ ತರುಣತರಣಿಶ್ರೀಸರಣಿಭಿಃ ದಿವಂ ಸರ್ವಾಮುರ್ವೀಮರುಣಿಮನಿ ಮಗ್ನಾಂ ಸ್ಮರತಿ ಯಃ ।
ಭವಂತ್ಯಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣಗಣಿಕಾಃ ॥

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್ ।
ಸ ಸದ್ಯಃ ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ ॥

ಕಿರಂತೀಮಂಗೇಭ್ಯಃ ಕಿರಣನಿಕುರಂಬಾಮೃತರಸಂ ಹೃದಿ ತ್ವಾಮಾಧತ್ತೇ ಹಿಮಕರಶಿಲಾಮೂರ್ತಿಮಿವ ಯಃ ।
ಸ ಸರ್ಪಾಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ ಜ್ವರಪ್ಲುಷ್ಟಾನ್ ದೃಷ್ಟ್ಯಾ ಸುಖಯತಿ ಸುಧಾಧಾರಸಿರಯಾ ॥

ಯಾ ದೇವೀ ಸರ್ವ ಭೂತೇಷು ಮಾತೃರೂಪೇಣ ಸಂಸ್ಥಿತಾ । ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

॥ ಶ್ರೀಜಗದಂಬಾರ್ಪಣಮಸ್ತು ॥



### ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಲಲಿತಾ ಸಹಸ್ರನಾಮ ಸ್ತೋತ್ರ ಮತ್ತು ಸೌಂದರ್ಯಲಹರೀ ಸಾಮ್ಯತೆ

ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರವನ್ನು ಶ್ರೀ ಮಹಾವಿಷ್ಣುವು ಹಯಗ್ರೀವಾವತಾರವೆತ್ತಿದಾಗ ಅಗಸ್ತ್ಯಮಹರ್ಷಿಗಳಿಗೆ ಉಪದೇಶ ಮಾಡಿದರು. ಇದು ಶ್ರೀ ವ್ಯಾಸ ಮಹರ್ಷಿಗಳಿಂದ ರಚಿಸಲ್ಪಟ್ಟ ಹದಿನೆಂಟು ಪುರಾಣಗಳಲ್ಲಿ ಕೊನೆಯದಾದ ಬ್ರಹ್ಮಾಂಡ ಪುರಾಣದಲ್ಲಿರುವುದು. ಆದಿಶಂಕರರು ತಮ್ಮ ಸೌಂದರ್ಯಲಹರಿಯಲ್ಲಿ, ಲಲಿತಾ ಸಹಸ್ರನಾಮದ ಹಲವಾರು ಅಂಶಗಳನ್ನು ಅಂತರ್ಗತಗೊಳಿಸಿದ್ದಾರೆ. ಈ ಎರಡು ದಿವ್ಯ ಸ್ತೋತ್ರಗಳಲ್ಲೂ, ಜಗನ್ಮಾತೆಯ ವರ್ಣನೆ, ಶ್ರೀಚಕ್ರ ನಿರೂಪಣಾ ಮಹಿಮೆ ಹಾಗೂ ಶ್ರೀವಿದ್ಯೋಪಾಸನೆಯ ಅಂಶಗಳು ಕಂಡುಬರುತ್ತವೆ. ಶ್ರೀ ಲಲಿತಾ ಸಹಸ್ರನಾಮ ಹಾಗೂ ಸೌಂದರ್ಯಲಹರಿ ಎಂಬ ಈ ಮಹಾ ಸ್ತೋತ್ರಗಳಲ್ಲಿ ಇರುವ ಸಮಾನಾರ್ಥಕ ಪದಗಳನ್ನೂ ಮತ್ತು ಭಾವಗಳನ್ನೂ ಸದೃಶ ರೂಪದಲ್ಲಿ ಪಾರಾಯಣೆ ಮಾಡುವ ಒಂದು ಅಳಿಲು ಪ್ರಯತ್ನ ನಮ್ಮ ನಾದಾರ್ಚನೆ ತಂಡದಿಂದ.

ಪದ್ಮರಾಗಮಣಿಗಳ ಪಂಕ್ತಿಗಳಿಂದ ಥಳಥಳಿಸುತ್ತಿರುವ ಕಿರೀಟದಿಂದ ಶೃಂಗರಿಸಲ್ಪಟ್ಟವಳು, **"ಕುರುವಿಂದ ಮಣಿಶ್ರೇಣೀ ಕನತ್ಕೋಟೀರ ಮಂಡಿತಾ",** ಇಂದ್ರಧನುಃ ಪ್ರಭಾ, ಎಂದು ಲಲಿತಾ ಸಹಸ್ರನಾಮದಲ್ಲಿ ಸ್ತುತಿಸಲ್ಪಡುವ ಶ್ರೀಮಾತೆಯು, ಆದಿಶಂಕರರ ಕಲ್ಪನೆಯಲ್ಲಿ, ಬ್ರಹ್ಮಾಂಡ ಸ್ವರೂಪಿಣಿಯೂ ಮತ್ತು ವಿಶ್ವವಿರಾಟ್ ಶರೀರೆಯೂ ಆಗಿದ್ದಾಳೆ. ಭಂಡಾಸುರನಿಂದ ಪೀಡಿತರಾದ ಇಂದ್ರಾದಿ ದೇವತೆಗಳು ತಮ್ಮ ರಕ್ಷಣೆಗಾಗಿ ಭಗವತಿಯನ್ನು ಪ್ರಾರ್ಥಿಸಿದರು. ಆಗ,

**"ಚಿದಗ್ನಿಕುಂಡಸಂಭೂತಾ ದೇವಕಾರ್ಯ ಸಮುದ್ಯತಾ, ಉದ್ಯದ್ಭಾನು ಸಹಸ್ರಾಭಾ ಚತುರ್ಬಾಹು ಸಮನ್ವಿತಾ, ರಾಗಸ್ವರೂಪಪಾಶಾಢ್ಯಾ ಕ್ರೋಧಾಕಾರಾಂಕುಶೋಜ್ವಲಾ, ಮನೋರೂಪೇಕ್ಷುಕೋದಂಡಾ ಪಂಚತನ್ಮಾತ್ರಸಾಯಕಾ, ನಿಜಾರುಣ ಪ್ರಭಾಪೂರಾ ಮಜ್ಜದ್ ಬ್ರಹ್ಮಾಂಡ ಮಂಡಲಾ, ಚಂಪಕಾಶೋಕಪುನ್ನಾಗ ಸೌಗಂಧಿಕಲಸತ್ಕಚ"**

ಎಂದು ವರ್ಣಿಸಲ್ಪಡುವ ಆ ಮಹಾದೇವಿಯು ಆವಿರ್ಭವಿಸಿದಳು. ಅಗ್ನಿಕುಂಡದಿಂದ ಉದ್ಭವವಾದ ದೇವಿಯ ಸ್ವರೂಪದಲ್ಲಿ ಮೊದಲು ಗೋಚರವಾದುದು, ಶಿರಸ್ಸಿನ ಕಿರೀಟ. ಆ ಮಹಾದೇವಿಯ ಕಿರೀಟವೇ ಆಕಾಶ, ದ್ವಾದಶಾದಿತ್ಯರೇ ಕಿರೀಟದ ಮಣಿಗಳು. ದ್ವಾದಶಾದಿತ್ಯರ ಕಾಂತಿಯು ಕಿರೀಟದಲ್ಲಿನ ಚಂದ್ರರೇಖೆಯಲ್ಲಿ ನಾನಾವರ್ಣಗಳನ್ನು ಪ್ರತಿಫಲಿಸುತ್ತಾ, ಕಾಮನಬಿಲ್ಲೆಂದೆನ್ನುವ ಭ್ರಮೆಯನ್ನುಂಟುಮಾಡುತ್ತಿದೆ ಎಂಬುದನ್ನು ಸೌಂದರ್ಯಲಹರಿಯ ಈ ಶ್ಲೋಕದಲ್ಲಿ ಕಾಣಬಹುದು.

**ಗತೈರ್ಮಾಣಿಕ್ಯತ್ವಂ ಗಗನಮಣಿಭಿಃ ಸಾಂದ್ರಘಟಿತಂ ಕಿರೀಟಂ ತೇ ಹೈಮಂ ಹಿಮಗಿರಿಸುತೇ ಕೀರ್ತಯತಿ ಯಃ ।**
**ಸ ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ ಧನುಃ ಶೌನಾಸೀರಂ ಕಿಮಿತಿ ನ ನಿಬಧ್ನಾತಿ ಧಿಷಣಾಮ್ ॥**

ವಿರಾಟ್ ಸ್ವರೂಪಳಾದ ಶ್ರೀದೇವಿಯ ಶಿರಸ್ಸಿನ ಕೇಶವು ಆಕಾಶವೆಂಬ ತತ್ವ. ನೀಲಚಿಕುರಾ, ವ್ಯೋಮಕೇಶೀ, ಚಂಪಕಾಶೋಕ ಪುನ್ನಾಗ ಸೌಗಂಧಿಕಲಸತ್ಕಚಾ, ಅಜ್ಞಾನಧ್ವಾಂತ ದೀಪಿಕಾ ಎಂದು ಶ್ರೀಮಾತೆಯು ಸ್ತುತಿಸಲ್ಪಡುತ್ತಾಳೆ. ಸ್ತ್ರೀಯರ ಕೇಶಪಾಶದ ಉದ್ದವು ಗಂಡನ ಆಯಸ್ಸಿನ ದೀರ್ಘಾಯುತ್ವಕ್ಕೆ ಸಂಕೇತವೆಂಬುದು ಅಂಗಸಾಮುದ್ರಿಕಾ ಶಾಸ್ತ್ರದ ಹೇಳಿಕೆ. ಒತ್ತಾಗಿಯೂ, ನುಣುಪಾಗಿಯೂ, ಹೊಳಪಾಗಿಯೂ, ನೀಳವಾಗಿಯೂ ಇರುವ ದವಿಯ ಕೇಶರಾಶಿಯ ದರ್ಶನವು, ನಮ್ಮ ಅಜ್ಞಾನಾಂಧಕಾರವನ್ನು ನಿವಾರಿಸಲಿ ಎನ್ನುವ ಮೂಲಕ, ದೇವಿಯು ಅಜ್ಞಾನವನ್ನು ನಿವಾರಿಸತಕ್ಕವಳು ಎಂಬುದನ್ನು ಸ್ಮರಿಸುತ್ತಾ, **"ಅಜ್ಞಾನಧ್ವಾಂತ ದೀಪಿಕಾ"** ಎಂದು ಸ್ತುತಿಸಿರುವುದು ಸ್ಪಷ್ಟವಾಗುತ್ತದೆ. ಪರಮೇಶ್ವರಿಯ ಬೈತಲೆಯ ಅಂಚಿನಲ್ಲಿ

ಕಾಣುವ ಸಿಂಧೂರವು **"ನವೀನಾರ್ಕ ಕಿರಣಂ"** ಉದಯ ರವಿಯಂತೆ ಗೋಚರಿಸುತ್ತದೆ ಎಂದು ವರ್ಣಿಸುತ್ತಾ, ಇಂತಹ ಸಿಂಧೂರ ತುಂಬಿದ ಬೈತಲೆಯ ವದನಾರವಿಂದ ದರ್ಶನವು ಎಲ್ಲರಿಗೂ ಶುಭವನ್ನುಂಟುಮಾಡಲಿ ಎಂಬ ಪ್ರಾರ್ಥನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿದೆ.

**ಧುನೋತು ಧ್ವಾಂತಂ ನಸ್ತುಲಿತದಲಿತೇಂದೀವರವನಂ ಘನಸ್ನಿಗ್ಧಶ್ಲಕ್ಷ್ಣಂ ಚಿಕುರನಿಕುರುಂಬಂ ತವ ಶಿವೇ ।**
**ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸೋ ವಸಂತ್ಯಸ್ಮಿನ್ ಮನ್ಯೇ ವಲಮಥನವಾಟೀವಿಟಪಿನಾಮ್ ॥**

**ತನೋತು ಕ್ಷೇಮಂ ನಸ್ತವ ವದನಸೌಂದರ್ಯಲಹರೀಪರೀವಾಹಸ್ರೋತಃಸರಣಿರಿವ ಸೀಮಂತಸರಣಿಃ ।**
**ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ॥**

ದರಸ್ಮೇರ ಮುಖಾಂಬುಜಾ, ದರಹಾಸೋಜ್ವಲನ್ಮುಖೀ, ರಾಕೇಂದುವದನಾ, ಷಡಾನನಾ, ತಾಂಬೂಲಪೂರಿತಮುಖೀ ಎಂದು ಲಲಿತಾ ಸಹಸ್ರನಾಮದಲ್ಲಿ ಸ್ತುತಿಸಲ್ಪಡುವ ಶ್ರೀಮಾತೆಯನ್ನು ಆದಿಶಂಕರರು ಹೀಗೆ ವರ್ಣಿಸುತ್ತಾರೆ. ಮರಿದುಂಬಿಗಳು ತಾವರೆಯ ಪರಿಮಳವನ್ನು ಆಸ್ವಾದಿಸಲು ಹೂವಿನ ಸುತ್ತಾ ಝೇಂಕರಿಸುತ್ತಾ, ಹಾರಾಡುತ್ತಾ, ತಾವರೆಯ ಸೊಬಗನ್ನು ಹೆಚ್ಚಿಸುವಂತೆ, ತಂಪಾದ ಗಾಳಿಗೆ ದೇವಿಯ ಲಲಾಟದಲ್ಲಿ ಹಾರಾಡುತ್ತಿರುವ ಮುಂಗುರುಳು, ಅವಳ ವದನಾರವಿಂದದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ದೇವಿಯ ಮುಖಾರವಿಂದವನ್ನು ಆವರಿಸಿರುವ, ಮನ್ಮಥನನ್ನು ದಹಿಸಿದ ಶಿವನ ನೇತ್ರಗಳಲ್ಲಿ ಮೂಡಿರುವ ಶೃಂಗಾರ ಭಾವವು, ಜಗದೋದ್ಧಾರಕ್ಕೆ ಕಾರಣವಾಗುತ್ತದೆಂಬ ಅಂಶವನ್ನು ಸ್ಪಷ್ಟಪಡಿಸುವ ಮುಖಕಮಲ ವರ್ಣನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿದೆ.

**ಅರಾಲೈಃ ಸ್ವಾಭಾವ್ಯಾದಲಿಕಲಭಸಶ್ರೀಭಿರಲಕೈಃ ಪರೀತಂ ತೇ ವಕ್ತ್ರಂ ಪರಿಹಸತಿ ಪಂಕೇರುಹರುಚಿಮ್ ।**
**ದರಸ್ಮೇರೇ ಯಸ್ಮಿನ್ ದಶನರುಚಿಕಿಂಜಲ್ಕರುಚಿರೇ ಸುಗಂಧೌ ಮಾದ್ಯಂತಿ ಸ್ಮರದಹನಚಕ್ಷುರ್ಮಧುಲಿಹಃ ॥**

**ಸ್ಮಿತಜ್ಯೋತ್ಸ್ನಾಜಾಲಂ ತವ ವದನಚಂದ್ರಸ್ಯ ಪಿಬತಾಂ ಚಕೋರಾಣಾಮಾಸೀದತಿರಸತಯಾ ಚಂಚುಜಡಿಮಾ ।**
**ಅತಸ್ತೇ ಶೀತಾಂಶೋರಮೃತಲಹರೀಮಮ್ಲರುಚಯಃ ಪಿಬಂತಿ ಸ್ವಚ್ಛಂದಂ ನಿಶಿ ನಿಶಿ ಭೃಶಂ ಕಾಂಜಿಕಧಿಯಾ ॥**

**"ಅಷ್ಟಮೀಚಂದ್ರವಿಭ್ರಾಜ ದಲಿಕಸ್ಥಳಶೋಭಿತಾ",** ಎಂದು ಲಲಿತಾ ಸಹಸ್ರನಾಮದಲ್ಲಿ ಸ್ತುತಿಸಲ್ಪಡುವ ಶ್ರೀಮಾತೆಯನ್ನು ಆದಿಶಂಕರರು ಹೀಗೆ ವರ್ಣಿಸುತ್ತಾರೆ. ಮನ್ಮಥನ ಮಂಗಳಕರವಾದ ಅರಮನೆಯಂತಿರುವ ಶ್ರೀದೇವಿಯ ಮುಖದಲ್ಲಿ, ಸ್ವಲ್ಪ ಬಾಗಿದ ಹುಬ್ಬುಗಳೂ, ದುಂಬಿಗಳಂತಿರುವ ಕಣ್ಣುಗಳೂ, ಮನ್ಮಥನ ಬಿಲ್ಲಿನ ಹೆದೆಯಂತಿದ್ದು, ಸೃಷ್ಟಿ-ಸ್ಥಿತಿ-ಲಯ-ಶಿರೋಧಾನ- ಅನುಗ್ರಹ ಎಂಬ ಪಂಚತತ್ವಗಳನ್ನು ನಿರ್ವಹಿಸುತ್ತಾ ಜಗತ್ತಿನ ಭಯವನ್ನು ಪರಿಹರಿಸುವ ಶಿವೆಯ ವರ್ಣನೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿದೆ.

**ಲಲಾಟಂ ಲಾವಣ್ಯದ್ಯುತಿವಿಮಲಮಾಭಾತಿ ತವ ಯದ್ದ್ವಿತೀಯಂ ತನ್ಮನ್ಯೇ ಮಕುಟಘಟಿತಂ ಚಂದ್ರಶಕಲಮ್ ।**
**ವಿಪರ್ಯಾಸನ್ಯಾಸಾದುಭಯಮಪಿ ಸಂಭೂಯ ಚ ಮಿಥಃ ಸುಧಾಲೇಪಸ್ಯೂತಿಃ ಪರಿಣಮತಿ ರಾಕಾಹಿಮಕರಃ ॥**

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ. ವಕ್ತ್ರಲಕ್ಷ್ಮೀ ಪರೀವಾಹ ಚಲನ್ಮೀನಾಭಲೋಚನಾ, ಸಹಸ್ರಾಕ್ಷೀ, ಪದ್ಮನಯನಾ, ತ್ರಿನಯನಾ, ರಾಜೀವಲೋಚನಾ, ದರಾಂದೋಲಿತ ದೀರ್ಘಾಕ್ಷೀ, ವಿಶಾಲಾಕ್ಷೀ, ಉನ್ಮೇಷನಿಮಿಷೋತ್ಪನ್ನ

ವಿಪನ್ನಭುವನಾವಳಿ ಎಂದು ಲಲಿತಾ ಸಹಸ್ರನಾಮದಲ್ಲಿ ಸ್ತುತಿಸಲ್ಪಡುವ ಶ್ರೀಮಾತೆಯನ್ನು ಆದಿಶಂಕರರು ಹೀಗೆ ವರ್ಣಿಸುತ್ತಾರೆ. ಕರುಣಾಸಾಗರಳಾದ ದೇವಿಯ ನೇತ್ರಗಳು ಸೂರ್ಯ, ಚಂದ್ರ, ಅಗ್ನಿಯಂತೆ ಪ್ರಧಾನವಾದುದಷ್ಟೇ ಅಲ್ಲ, ಸುಂದರವಾದುದಾಗಿಯೂ, ಲೋಕಾನುಗ್ರಹಕಾರಕವಾಗಿಯೂ ಇರುವುದು. ಸುಸ್ಪಷ್ಟ ಮೀನಾಕ್ಷಿ, ನೀಲೋತ್ಪಲಾಕ್ಷಿ ಎಂದು ಭಗವತಿಯನ್ನು ಪೂಜಿಸುವುದುಂಟು. ಈ ಹೋಲಿಕೆಯು ಕೇವಲ ಅದರ ಸ್ವರೂಪದ ದೃಷ್ಟಿಯಿಂದ ಸರಿಯಾದುದೇ ಹೊರತು, ಸ್ವಭಾವದ ದೃಷ್ಟಿಯಿಂದಲ್ಲ ಎಂಬುದನ್ನು ಶಂಕರರು ಸ್ಪಷ್ಟಪಡಿಸುತ್ತಾರೆ. ಭುವನೇಶ್ವರಿಯ ಕಣ್ಣಿನ ಆಲಿಗಳು ಸುತ್ತಲೂ ಬಿಳಿಯಾಗಿದ್ದು, ಕಣ್ಣುಗುಡ್ಡೆಗಳು ಕಪ್ಪಾಗಿರುತ್ತವೆ. ಮೂರನೆಯ ಕಣ್ಣು ಮಾತ್ರಾ ಕೆಂಪಾಗಿರುತ್ತದೆ. ಬಿಳೀಬಣ್ಣದ ಪ್ರತೀಕವಾದ ಸತ್ವಗುಣಕ್ಕೆ ವಿಷ್ಣು, ಕೆಂಪುಬಣ್ಣದ ಪ್ರತೀಕವಾದ ರಜೋಗುಣಕ್ಕೆ ಬ್ರಹ್ಮ ಮತ್ತು ಕಪ್ಪುಬಣ್ಣದ ಪ್ರತೀಕವಾದ ತಮೋಗುಣಕ್ಕೆ ರುದ್ರನು ಇಲ್ಲಿ ಪ್ರಧಾನರಾಗಿದ್ದಾರೆ. ಜಗತ್ತಿನ ಸೃಷ್ಟಿ ಪ್ರಳಯಗಳು, ದೇವಿಯ ಕಣ್ಣುಗಳ ಮುಚ್ಚುವಿಕೆ ಮತ್ತು ತೆರೆಯುವಿಕೆಯನ್ನು ಅವಲಂಬಿಸಿವೆ. ಸಮಸ್ತ ವಾಕ್ ಸಂಪತ್ತಿನ ಅಧಿದೇವತೆಯಾದ ಶ್ರೀದೇವಿಯ ಕೃಪಾಕಟಾಕ್ಷವೇ ಕಾವ್ಯರಚನಾ ಶಕ್ತಿಯ ಅನುಗ್ರಹಕ್ಕೆ ಕಾರಣವೆಂದು ಭಾವಿಸುತ್ತಾ, ಅವುಗಳ ಧನ್ಯತೆಯನ್ನು ಕೊಂಡಾಡುವ ಪರಿ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿದೆ.

**ಭ್ರುವೌ ಭುಗ್ನೇ ಕಿಂಚಿದ್ಭುವನಭಯಭಂಗವ್ಯಸನಿನಿ ತ್ವದೀಯೇ ನೇತ್ರಾಭ್ಯಾಂ ಮಧುಕರರುಚಿಭ್ಯಾಂ ಧೃತಗುಣಮ್ ।**
**ಧನುರ್ಮನ್ಯೇ ಸವ್ಯೇತರಕರಗೃಹೀತಂ ರತಿಪತೇಃ ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾಂತರಮುಮೇ ॥**

**ಅಹಃ ಸೂತೇ ಸವ್ಯಂ ತವ ನಯನಮರ್ಕಾತ್ಮಕತಯಾ ತ್ರಿಯಾಮಾಂ ವಾಮಂ ತೇ ಸೃಜತಿ ರಜನೀನಾಯಕತಯಾ ।**
**ತೃತೀಯಾ ತೇ ದೃಷ್ಟಿರ್ದರದಲಿತಹೇಮಾಂಬುಜರುಚಿಃ ಸಮಾಧತ್ತೇ ಸಂಧ್ಯಾಂ ದಿವಸನಿಶಯೋರಂತರಚರೀಮ್ ॥**

**ವಿಶಾಲಾ ಕಲ್ಯಾಣೀ ಸ್ಫುಟರುಚಿರಯೋಧ್ಯಾ ಕುವಲಯೈಃ ಕೃಪಾಧಾರಾಧಾರಾ ಕಿಮಪಿ ಮಧುರಾಭೋಗವತಿಕಾ ।**
**ಅವಂತೀ ದೃಷ್ಟಿಸ್ತೇ ಬಹುನಗರವಿಸ್ತಾರವಿಜಯಾ ಧ್ರುವಂ ತತ್ತನ್ನಾಮವ್ಯವಹರಣಯೋಗ್ಯಾ ವಿಜಯತೇ ॥**

**ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ ಕಟಾಕ್ಷವ್ಯಾಕ್ಷೇಪಭ್ರಮರಕಲಭೌ ಕರ್ಣಯುಗಲಮ್ ।**
**ಅಮುಂಚಂತೌ ದೃಷ್ಟ್ವಾ ತವ ನವರಸಾಸ್ವಾದತರಲಾವಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಮ್ ॥**

**ವಿಭಕ್ತತ್ರೈವರ್ಣ್ಯಂ ವ್ಯತಿಕರಿತಲೀಲಾಂಜನತಯಾ ವಿಭಾತಿ ತ್ವನ್ನೇತ್ರತ್ರಿತಯಮಿದಮೀಶಾನದಯಿತೇ ।**
**ಪುನಃ ಸ್ರಷ್ಟುಂ ದೇವಾನ್ ದ್ರುಹಿಣಹರಿರುದ್ರಾನುಪರತಾನ್ ರಜಃ ಸತ್ತ್ವಂ ಬಿಭ್ರತ್ತಮ ಇತಿ ಗುಣಾನಾಂ ತ್ರಯಮಿವ ॥**

**ನಿಮೇಷೋನ್ಮೇಷಾಭ್ಯಾಂ ಪ್ರಲಯಮುದಯಂ ಯಾತಿ ಜಗತೀ ತವೇತ್ಯಾಹುಃ ಸಂತೋ ಧರಣಿಧರರಾಜನ್ಯತನಯೇ ।**
**ತ್ವದುನ್ಮೇಷಾಜ್ಜಾತಂ ಜಗದಿದಮಶೇಷಂ ಪ್ರಲಯತಃ ಪರಿತ್ರಾತುಂ ಶಂಕೇ ಪರಿಹೃತನಿಮೇಷಾಸ್ತವ ದೃಶಃ ॥**

**ತವಾಪರ್ಣೇ ಕರ್ಣೇಜಪನಯನಪೈಶುನ್ಯಚಕಿತಾ ನಿಲೀಯಂತೇ ತೋಯೇ ನಿಯತಮನಿಮೇಷಾಃ ಶಫರಿಕಾಃ ।**
**ಇಯಂ ಚ ಶ್ರೀರ್ಬದ್ಧಚ್ಛದಪುಟಕವಾಟಂ ಕುವಲಯಂ ಜಹಾತಿ ಪ್ರತ್ಯೂಷೇ ನಿಶಿ ಚ ವಿಘಟಯ್ಯ ಪ್ರವಿಶತಿ ॥**

**ದೃಶಾ ದ್ರಾಘೀಯಸ್ಯಾ ದರದಲಿತನೀಲೋತ್ಪಲರುಚಾ ದವೀಯಾಂಸಂ ದೀನಂ ಸ್ನಪಯ ಕೃಪಯಾ ಮಾಮಪಿ ಶಿವೇ ।**
**ಅನೇನಾಯಂ ಧನ್ಯೋ ಭವತಿ ನ ಚ ತೇ ಹಾನಿರಿಯತಾ ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿಮಕರಃ ॥**

ಶಿವನಲ್ಲಿ "ಶೃಂಗಾರ" ರಸವನ್ನೂ, ಶಿವೇತರರಲ್ಲಿ "ಭೀಭತ್ಸ"ವನ್ನೂ, ಸವತಿಯಾದ ಗಂಗೆಯಲ್ಲಿ "ರೌದ್ರ"ವನ್ನೂ, ನಾಗಾಭರಣನಾದ ಶಿವನನ್ನು ಕಂಡು "ಭಯ"ವನ್ನೂ, ಶಿವಕಥಾಶ್ರವಣದಲ್ಲಿ "ಅದ್ಭುತ" ರಸವನ್ನೂ, ತಾವರೆಯ ಚೆಲುವಿಗಿಂತ ತನ್ನ ಸೌಂದರ್ಯವು ಅಧಿಕವಾದುದೆಂದು ಭಾವಿಸುವುದರಲ್ಲಿ "ವೀರ" ರಸವನ್ನೂ, ಸಖಿಯರೊಂದಿಗೆ ಸಲಿಗೆಯಿಂದಿದ್ದಾಗ "ಹಾಸ್ಯ"ರಸ ಬೀರುವುದನ್ನು ಸಹಜವೆಂಬಂತೆ ಚಿತ್ರಿಸಿ, ಭಕ್ತನಾದ ನನ್ನಲ್ಲಿ ಮತ್ತು ನನ್ನಂತಹಾ ಭಕ್ತರಮೇಲೆ, ನಮ್ಮ ಉದ್ಧಾರಕ್ಕಾಗಿ "ಕರುಣ" ರಸವನ್ನು ತೋರು ಎಂದು ಶಂಕರರು ಮಾಡಿದ ಪ್ರಾರ್ಥನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿದೆ.

**ಶಿವೇ ಶೃಂಗಾರಾರ್ದ್ರಾ ತದಿತರಜನೇ ಕುತ್ಸನಪರಾ ಸರೋಷಾ ಗಂಗಾಯಾಂ ಗಿರಿಶಚರಿತೇ ವಿಸ್ಮಯವತೀ ।**
**ಹರಾಹಿಭ್ಯೋ ಭೀತಾ ಸರಸಿರುಹಸೌಭಾಗ್ಯಜನನೀ ಸಖೀಷು ಸ್ಮೇರಾ ತೇ ಮಯಿ ಜನನಿ ದೃಷ್ಟಿಃ ಸಕರುಣಾ ॥**

**ಗತೇ ಕರ್ಣಾಭ್ಯರ್ಣಂ ಗರುತ ಇವ ಪಕ್ಷ್ಮಾಣಿ ದಧತೀ ಪುರಾಂ ಭೇತ್ತುಶ್ಚಿತ್ತಪ್ರಶಮರಸವಿದ್ರಾವಣಫಲೇ ।**
**ಇಮೇ ನೇತ್ರೇ ಗೋತ್ರಾಧರಪತಿಕುಲೋತ್ತಂಸಕಲಿಕೇ ತವಾಕರ್ಣಾಕೃಷ್ಟಸ್ಮರಶರವಿಲಾಸಂ ಕಲಯತಃ ॥**

**ಪವಿತ್ರೀಕರ್ತುಂ ನಃ ಪಶುಪತಿಪರಾಧೀನಹೃದಯೇ ದಯಾಮಿತ್ರೈರ್ನೇತ್ರೈರರುಣಧವಲಶ್ಯಾಮರುಚಿಭಿಃ ।**
**ನದಃ ಶೋಣೋ ಗಂಗಾ ತಪನತನಯೇತಿ ಧ್ರುವಮಮುಂ ತ್ರಯಾಣಾಂ ತೀರ್ಥಾನಾಮುಪನಯಸಿ ಸಂಭೇದಮನಘಮ್ ॥**

ದೇವಿಯ ಕೆನ್ನೆಗಳನ್ನು ಮನ್ಮಥನ ಬಿಲ್ಲಿಗೂ, ಕಿವಿಯವರೆಗೂ ಹರಡಿದ ಅವಳ ನೀಳವಾದ ಕಡೆಗಣ್ಣಿನ ನೋಟವನ್ನು ಬಿಲ್ಲಿನಲ್ಲಿ ಹೂಡಿದ ಬಾಣಕ್ಕೂ ಹೋಲಿಸಿ, ಅವಳ ವದನ ಸೌಂದರ್ಯವು, ಸೌಂದರ್ಯದ ಮಡುವಿದ್ದಂತೆ ಎಂಬ ವಿವರಣೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿದೆ.

**ಅರಾಲಂ ತೇ ಪಾಲೀಯುಗಲಮಗರಾಜನ್ಯತನಯೇ ನ ಕೇಷಾಮಾಧತ್ತೇ ಕುಸುಮಶರಕೋದಂಡಕುತುಕಮ್ ।**
**ತಿರಶ್ಚೀನೋ ಯತ್ರ ಶ್ರವಣಪಥಮುಲ್ಲಂಘ್ಯ ವಿಲಸನ್ನಪಾಂಗವ್ಯಾಸಂಗೋ ದಿಶತಿ ಶರಸಂಧಾನಧಿಷಣಾಮ್ ॥**

ಪದ್ಮರಾಗಶಿಲಾದರ್ಶಾ ಪರಿಭಾವಿಕಪೋಲಭೂಃ, ಕನತ್ಕನಕ ತಾಟಂಕಾ, ತಾಟಂಕಯುಗಳೀಭೂತಾ ತಪನೋಡುಪ ಮಂಡಲಾ, ಎಂದು ಲಲಿತಾ ಸಹಸ್ರನಾಮದಲ್ಲಿ ಸ್ತುತಿಸಲ್ಪಡುವ ಶ್ರೀಮಾತೆಯನ್ನು ಆದಿಶಂಕರರು ಹೀಗೆ ವರ್ಣಿಸುತ್ತಾರೆ. ಪದ್ಮರಾಗ ಶಿಲೆಯಂತೆ ಪರಿಶುಭ್ರವಾಗಿ ಹೊಳೆಯುತ್ತಿರುವ ಕಪೋಲಗಳನ್ನು ಹೊಂದಿರುವ ಭಗವತಿಯು, ಸೌಮಂಗಲ್ಯವನ್ನು ಸೂಚಿಸುವ ಮಿನುಗುಟ್ಟುವ ಚಿನ್ನದ ಓಲೆಯನ್ನು ಧರಿಸಿರುವಳೆಂದು ವರ್ಣಿಸುತ್ತಾ, ಅವಳು ಕಿವಿಯಲ್ಲಿ ಧರಿಸಿರುವ ಓಲೆಗಳನ್ನು ಸೂರ್ಯಮಂಡಲ ಮತ್ತು ಚಂದ್ರಮಂಡಲ ಎಂದು ಸೌಂದರ್ಯಲಹರಿಯ ಈ ಶ್ಲೋಕದಲ್ಲಿ ವಿವರಿಸಲಾಗಿದೆ.

**ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ ಚತುಶ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಮ್ ।**
**ಯಮಾರುಹ್ಯ ದ್ರುಹ್ಯತ್ಯವನಿರಥಮರ್ಕೇಂದುಚರಣಂ ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ ॥**

ಕಲಾಲಾಪಾ ಎಂದು ಶ್ರೀಮಾತೆಯನ್ನು ಸ್ತುತಿಸುತ್ತಾರೆ. ಇಂಪಾದ ಕಂಠಧ್ವನಿಯುಳ್ಳ ಶ್ರೀಮಾತೆಯ ವಾಕ್ಕು, ಸರಸ್ವತಿಯ ರೂಪವಾಗಿದೆ. ಸಕಲ ಶಬ್ದರಾಶಿಗಳೂ ಭಗವತಿಯ ಅಧೀನವಾದುದರಿಂದ ಇವಳ ವಚನಾಮೃತವನ್ನು, ಕಿವಿಗೊಟ್ಟು

ಸರಸ್ವತಿ ಆಲಿಸಿ, ಆಶ್ಚರ್ಯದಿಂದ ತಲೆದೂಗಿದಾಗ, "ಝುಲ್ ಝುಲ್" ಎಂಬ ಝುಣತ್ಕಾರದ ಧ್ವನಿಯೊಂದಿಗೆ ಬರುವ ಮೆಚ್ಚುಗೆಯ ಪ್ರತ್ಯುತ್ತರ ಸೌಂದರ್ಯಲಹರಿಯ ಈ ಶ್ಲೋಕದಲ್ಲಿದೆ.

**ಸರಸ್ವತ್ಯಾಃ ಸೂಕ್ತೀರಮೃತಲಹರೀಕೌಶಲಹರೀಃ ಪಿಬಂತ್ಯಾಃ ಶರ್ವಾಣಿ ಶ್ರವಣಚುಲುಕಾಭ್ಯಾಮವಿರಲಮ್ ।**
**ಚಮತ್ಕಾರಶ್ಲಾಘಾಚಲಿತಶಿರಸಃ ಕುಂಡಲಗಣೋ ಝಣತ್ಕಾರೈಸ್ತಾರೈಃ ಪ್ರತಿವಚನಮಾಚಷ್ಟ ಇವ ತೇ ॥**

**"ನವಚಂಪಕ ಪುಷ್ಪಾಭಾ ನಾಸಾದಂಡ ವಿರಾಜಿತಾ"**, ಆಗತಾನೇ ಅರಳುತ್ತಿರುವ ಸಂಪಿಗೆಯ ಹೂವಿನಂತೆ ನೇರವಾದ ನಾಸಿಕವುಳ್ಳವಳು, **"ತಾರಾಕಾಂತಿ ತಿರಸ್ಕಾರೀ ನಾಸಾಭರಣ ಭಾಸುರಾ"**, ಆ ಮೂಗಿನಲ್ಲಿ ನಕ್ಷತ್ರಗಳ ಕಾಂತಿಯನ್ನೂ ತಿರಸ್ಕರಿಸುವಂತಹಾ ಹೊಳಪುಳ್ಳ ಬುಲಾಕು ಧರಿಸಿದ್ದಾಳೆ ಎಂದು ದರ್ಶಿಸಿ, ನಮ್ಮ ಅಭಿಷ್ಟಾರ್ಥಕ್ಕಾಗಿ ಶಂಕರರು ಇಟ್ಟ ಬೇಡಿಕೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿದೆ.

**ಅಸೌ ನಾಸಾವಂಶಸ್ತುಹಿನಗಿರಿವಂಶಧ್ವಜಪಟಿ ತ್ವದೀಯೋ ನೇದೀಯಃ ಫಲತು ಫಲಮಸ್ಮಾಕಮುಚಿತಮ್ ।**
**ವಹನ್ನಂತರ್ಮುಕ್ತಾಃ ಶಿಶಿರತರನಿಶ್ವಾಸಗಲಿತಂ ಸಮೃದ್ಧ್ಯಾ ಯತ್ತಾಸಾಂ ಬಹಿರಪಿ ಚ ಮುಕ್ತಾಮಣಿಧರಃ ॥**

**"ನವವಿದ್ರುಮಬಿಂಬಶ್ರೀನ್ಯಕ್ಕಾರೀನದನಚ್ಛದಾ",** ಶ್ರೀಮಾತೆಯು ಹೊಸಹವಳದ ಮತ್ತು ತೊಂಡೇಹಣ್ಣಿನ ಕಾಂತಿಯನ್ನು ತಿರಸ್ಕರಿಸುವಂತಹಾ ಕಾಂತಿಯುಕ್ತವಾದ ತುಟಿಗಳುಳ್ಳವಳು. ಸಹಜವಾಗಿಯೇ ಸುಂದರವಾಗಿರುವ ದೇವಿಯ ಕೆಂಪು ತುಟಿಗಳ ಚೆಲುವನ್ನು ಲೋಕದ ವಸ್ತುಗಳಿಗೆ ಹೋಲಿಸುವುದೆಂತು? ಅವಳ ಚೆಲುವುಗೆ ಯಾವುದೂ ಸರಿಸಾಟಿಯಲ್ಲ. ದೇವಿಯ ತುಟಿಗಳ ಕೆಂಪು ತೊಂಡೆಹಣ್ಣಿಗೆ ಹಾಗೂ ಹವಳಕ್ಕೆ ಬಂದಿದೆಯೇ ಹೊರತು, ಇವುಗಳಿಂದ ದೇವಿಯ ತುಟಿಗಳಿಗಲ್ಲ ಎಂಬ ವಾದ ಸೌಂದರ್ಯಲಹರಿಯ ಈ ಶ್ಲೋಕದಲ್ಲಿದೆ.

**ಪ್ರಕೃತ್ಯಾ ರಕ್ತಾಯಾಸ್ತವ ಸುದತಿ ದಂತಚ್ಛದರುಚೇಃ ಪ್ರವಕ್ಷ್ಯೇ ಸಾದೃಶ್ಯಂ ಜನಯತು ಫಲಂ ವಿದ್ರುಮಲತಾ ।**
**ನ ಬಿಂಬಂ ತದ್ಬಿಂಬಪ್ರತಿಫಲನರಾಗಾದರುಣಿತಂ ತುಲಾಮಧ್ಯಾರೋಢುಂ ಕಥಮಿವ ವಿಲಜ್ಜೇತ ಕಲಯಾ ॥**

**"ಕರ್ಪೂರವೀಟಿಕಾಮೋದ ಸಮಾಕರ್ಷದಿಗಂತರಾ, ಅನಾಕಲಿತಸಾದೃಶ್ಯ ಚುಬುಕಶ್ರೀವಿರಾಜಿತಾ"** ಚಂದ್ರಬಿಂಬದಂತಿರುವ ವದನವುಳ್ಳ ದೇವಿಯ, ಪತಿಯ ಗುಣಗಳನ್ನು ಸದಾ ವರ್ಣಿಸುವುದರಿಂದ ಕೆಂಪಾಗಿರುವ ಜಿಹ್ವಾಗ್ರವನ್ನು ನೋಡಿ, ಸರಸ್ವತಿಯೂ ನಾಚಿ, ವೀಣಾಗಾನವನ್ನು ನಿಲ್ಲಿಸಿದ್ದಾಳೆ. ಹೋಲಿಸಲಸಾಧ್ಯವಾದ, ಕಾಂತಿಯುಕ್ತವಾದ ಗಲ್ಲವು, ದೇವಿಯ ಮುಖವೆಂಬ ಕನ್ನಡಿಗಿರುವ ಕೈಹಿಡಿಯಂತಿದೆ ಎಂಬ ವರ್ಣನೆ, ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

**ಅವಿಶ್ರಾಂತಂ ಪತ್ಯುರ್ಗುಣಗಣಕಥಾಮ್ರೇಡನಜಪಾ ಜಪಾಪುಷ್ಪಚ್ಛಾಯಾ ತವ ಜನನಿ ಜಿಹ್ವಾ ಜಯತಿ ಸಾ ।**
**ಯದಗ್ರಾಸೀನಾಯಾಃ ಸ್ಫಟಿಕದೃಷದಚ್ಛಚ್ಛವಿಮಯೀ ಸರಸ್ವತ್ಯಾ ಮೂರ್ತಿಃ ಪರಿಣಮತಿ ಮಾಣಿಕ್ಯವಪುಷಾ ॥**

**ರಣೇ ಜಿತ್ವಾ ದೈತ್ಯಾನಪಹೃತಶಿರಸ್ತ್ರೈಃ ಕವಚಿಭಿರ್ನಿವೃತ್ತೈಶ್ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ ।**
**ವಿಶಾಖೇಂದ್ರೋಪೇಂದ್ರೈಃ ಶಶಿವಿಶದಕರ್ಪೂರಶಕಲಾ ವಿಲೀಯಂತೇ ಮಾತಸ್ತವ ವದನತಾಂಬೂಲಕಬಲಾಃ ॥**

**ವಿಪಂಚ್ಯಾ ಗಾಯಂತೀ ವಿವಿಧಮಪದಾನಂ ಪಶುಪತೇಃ ತ್ವಯಾರಬ್ಧೇ ವಕ್ತುಂ ಚಲಿತಶಿರಸಾ ಸಾಧುವಚನೇ ।**
**ತದೀಯೈರ್ಮಾಧುರ್ಯೈರಪಲಪಿತತಂತ್ರೀಕಲರವಾಂ ನಿಜಾಂ ವೀಣಾಂ ವಾಣೀ ನಿಚುಲಯತಿ ಚೋಲೇನ ನಿಭೃತಮ್ ॥**

ಕರಾಗ್ರೇಣ ಸ್ಪೃಷ್ಟಂ ತುಹಿನಗಿರಿಣಾ ವತ್ಸಲತಯಾ ಗಿರೀಶೇನೋದಸ್ತಂ ಮುಹುರಧರಪಾನಾಕುಲತಯಾ ।
ಕರಗ್ರಾಹ್ಯಂ ಶಂಭೋರ್ಮುಖಮುಕುರವೃಂತಂ ಗಿರಿಸುತೇ ಕಥಂಕಾರಂ ಬ್ರೂಮಸ್ತವ ಚಿಬುಕಮೌಪಮ್ಯರಹಿತಮ್ ॥

**"ಕಾಮೇಶಬದ್ಧ ಮಾಂಗಲ್ಯಾ ಸೂತ್ರಶೋಭಿತ ಕಂಧರಾ, ಕಾಲಕಂಠೀ, ಕನಕಾಂಗದ ಕೇಯೂರ ಕಮನೀಯ ಭುಜಾನ್ವಿತಾ, ಮೃಣಾಲಾ ಮೃದುದೋರ್ಲತಾ".** ಸಾಮುದ್ರಿಕಾ ಶಾಸ್ತ್ರದಲ್ಲಿ, ಸ್ತ್ರೀಯರಿಗೆ ಕಂಠದಲ್ಲಿ, ಲಲಾಟದಲ್ಲಿ ಮತ್ತು ಹೊಟ್ಟೆಯ ಮೇಲೆ ಮೂರು ಗೆರೆಗಳಿರುವುದು, ಲಕ್ಷಣವಾದುದೆಂದೂ, ಸೌಭಾಗ್ಯ ಸೂಚಕವಾದುದೆಂದೂ ವಿವರಿಸಲಾಗಿದೆ. ಮಹಾ ಸೌಭಾಗ್ಯ ಸೂಚಕವಾದ ಈ ಮೂರು ರೇಖೆಗಳು, ದೇವಿಯ ಕಂಠದಲ್ಲಿದ್ದುದರಿಂದಲೇ, ಪರಮೆಶ್ವರನು ಅವಳಿಗೆ ಪತಿಯಾದನೆಂಬ ವಿವರಣೆ ಹಾಗೆಯೇ, ಸಂಗೀತದ ಗತಿ-ಗಮಕ-ಗೀತೆಗಳ ರಹಸ್ಯವನ್ನು ತಿಳಿದಿರುವುದರ ಪ್ರತೀಕ ದೇವಿಯ ಕೊರಳಿನ ಈ ಮೂರು ರೇಖೆಗಳು ಎಂದು ವಿವರಿಸುವುದರ ಜೊತೆಗೆ, ಅವು ಸಂಗೀತದ ಷಡ್ಜ, ಮಧ್ಯಮ ಮತ್ತು ಗಾಂಧಾರ ಗ್ರಾಮಗಳನ್ನು ಸೂಚಿಸುತ್ತಿದೆ ಎನ್ನುತ್ತಾ, ಭಗವತಿಯನ್ನು ಸಂಗೀತ ಕಲಾ ನಿಪುಣೆ ಎಂದೂ, ಸಕಲ ಕಲಾ ಕೋವಿದೆ ಎಂದೂ ಶಂಕರರು ಇಲ್ಲಿ ವಿವರಿಸಿದ್ದಾರೆ. ಸರಸ್ವತಿಯ ಪತಿಯಾದ ಬ್ರಹ್ಮನು ಏಕಕಾಲದಲ್ಲಿ ತನ್ನ ನಾಲ್ಕು ಮುಖಗಳಿಂದಲೂ, ಚಿನ್ನದ ತೋಳಬಂದಿ ಮತ್ತು ಭುಜಕೀರ್ತಿಗಳಿಂದ ಅಲಂಕೃತವಾಗಿರುವ ದೇವಿಯ ನಾಲ್ಕು ಭುಜಗಳ ಸೌಂದರ್ಯವನ್ನು ಕೀರ್ತಿಸುತ್ತಾ, ಅಭಯ ಕೋರುತ್ತಿದ್ದಾನೆಂಬುದನ್ನು ತಿಳಿಸಲಾಗಿದೆ. ಹೀಗೆ ಶ್ರೀಮಾತೆಯನ್ನು ಬ್ರಹ್ಮನಿಗಿಂತಲೂ ಶ್ರೇಷ್ಟಳೆಂದೂ, ಅವಳ ಅನುಗ್ರಹಕ್ಕಾಗಿ ಬ್ರಹ್ಮನು ಪ್ರಾರ್ಥಿಸುತ್ತಾನೆಂದೂ, ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ ವಿವರಿಸಿದೆ.

ಭುಜಾಶ್ಲೇಷಾನ್ ನಿತ್ಯಂ ಪುರದಮಯಿತುಃ ಕಂಟಕವತೀ ತವ ಗ್ರೀವಾ ಧತ್ತೇ ಮುಖಕಮಲನಾಲಶ್ರಿಯಮಿಯಮ್ ।
ಸ್ವತಃ ಶ್ವೇತಾ ಕಾಲಾಗುರುಬಹುಲಜಂಬಾಲಮಲಿನಾ ಮೃಣಾಲೀಲಾಲಿತ್ಯಂ ವಹತಿ ಯದಧೋ ಹಾರಲತಿಕಾ ॥

ಗಲೇ ರೇಖಾಸ್ತಿಸ್ರೋ ಗತಿಗಮಕಗೀತೈಕನಿಪುಣೇ ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ ।
ವಿರಾಜಂತೇ ನಾನಾವಿಧಮಧುರರಾಗಾಕರಭುವಾಂ ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ತೇ ॥

ಮೃಣಾಲೀಮೃದ್ವೀನಾಂ ತವ ಭುಜಲತಾನಾಂ ಚತಸೃಣಾಂ ಚತುರ್ಭಿಃ ಸೌಂದರ್ಯಂ ಸರಸಿಜಭವಃ ಸ್ತೌತಿ ವದನೈಃ ।
ನಖೇಭ್ಯಃ ಸಂತ್ರಸ್ಯನ್ ಪ್ರಥಮಮಥನಾದಂಧಕರಿಪೋಶ್ಚತುರ್ಣಾಂ ಶೀರ್ಷಾಣಾಂ ಸಮಮಭಯಹಸ್ತಾರ್ಪಣಧಿಯಾ ॥

ನಖಾನಾಮುದ್ದ್ಯೋತೈರ್ನವನಲಿನರಾಗಂ ವಿಹಸತಾಂ ಕರಾಣಾಂ ತೇ ಕಾಂತಿಂ ಕಥಯ ಕಥಯಾಮಃ ಕಥಮುಮೇ ।
ಕಯಾಚಿದ್ವಾ ಸಾಮ್ಯಂ ಭಜತು ಕಲಯಾ ಹಂತ ಕಮಲಂ ಯದಿ ಕ್ರೀಡಲ್ಲಕ್ಷ್ಮೀಚರಣತಲಲಾಕ್ಷಾರಸಛಣಮ್ ॥

ವಿಘ್ನೇಶ್ವರನು ಸರ್ವೇಶ್ವರಿಯ ಸ್ತನದ್ವಯಗಳನ್ನು ತನ್ನ ಕುಂಭಸ್ಥಳಗಳಿಗೆ ಸಮಾನವಾಗಿದೆ ಎಂದು ಭಾವಿಸಿ, ತನ್ನ ಸೊಂಡಿಲಿನಿಂದ ಪರಿಶೀಲಿಸಿಕೊಳ್ಳುತ್ತಾನೆಂದು, ಅದನ್ನು ಕಂಡ ಜನರು ನಗುತ್ತಾರೆಂದು ವರ್ಣಿಸಿರುವ ಅತಿಶಯೋಕ್ತಿ ಸೌಂದರ್ಯಲಹರಿಯ ಈ ಶ್ಲೋಕದಲ್ಲಿ.

ಸಮಂ ದೇವಿ ಸ್ಕಂದದ್ವಿಪವದನಪೀತಂ ಸ್ತನಯುಗಂ ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಮ್ ।
ಯದಾಲೋಕ್ಯಾಶಂಕಾಕುಲಿತಹೃದಯೋ ಹಾಸಜನಕಃ ಸ್ವಕುಂಭೌ ಹೇರಂಬಃ ಪರಿಮೃಶತಿ ಹಸ್ತೇನ ಝಡಿತಿ ॥

ಪಾರ್ವತಿಯ ಸ್ತನಗಳನ್ನು ಅಮೃತರಸ ತುಂಬಿದ ಮಾಣಿಕ್ಯದ ಬಿಂದಿಗೆಗಳೆಂದು ವರ್ಣಿಸುತ್ತಾ, ಅದನ್ನು ಸೇವಿಸಿ ಆಸ್ವಾದಿಸಿದ, ಅವಳ ಮಕ್ಕಳಾದ ಗಣಪತಿ ಮತ್ತು ಷಣ್ಮುಖರು ಪೌಷ್ಟಿಕತೆಯನ್ನೂ, ಜ್ಞಾನಸಮೃದ್ಧಿಯನ್ನು ಪಡೆದು, ಸದಾ ಕುಮಾರರಾಗಿದ್ದು, ಜಗದ್ವಂದ್ಯರಾಗಿದ್ದಾರೆಂಬ ವರ್ಣನೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿ.

**ಅಮೂ ತೇ ವಕ್ಷೋಜಾವಮೃತರಸಮಾಣಿಕ್ಯಕುತುಪೌ ನ ಸಂದೇಹಸ್ಪಂದೋ ನಗಪತಿಪತಾಕೇ ಮನಸಿ ನಃ ।**
**ಪಿಬಂತೌ ತೌ ಯಸ್ಮಾದವಿದಿತವಧೂಸಂಗರಸಿಕೌ ಕುಮಾರಾವದ್ಯಾಪಿ ದ್ವಿರದವದನಕ್ರೌಂಚದಲನೌ ॥**

**"ರತ್ನಗ್ರೈವೇಯಚಿಂತಾಕಲೋಲಮುಕ್ತಾಫಲಾನ್ವಿತಾ"** ರತ್ನಖಚಿತವಾದ ಹಾರಗಳ ನಡುವೆ ತೂಗಾಡುತ್ತಿರುವ ಮುತ್ತಿನ ಪದಕವಿರುವ ಕಂಠೀಹಾರವನ್ನು ಧರಿಸಿರುವವಳು ಎಂಬುದಾಗಿ ಲಲಿತಾ ಸಹಸ್ರನಾಮದಲ್ಲಿ ವರ್ಣಿತವಾಗಿದ್ದರೆ, ಸೌಂದರ್ಯಲಹರಿಯಲ್ಲಿ ಚಿನ್ನ ಮತ್ತು ರತ್ನಗಳಿಂದ ಕೂಡಿದ ಮೂರೆಳೆಯ ಹಾರದಿಂದ ಶೋಭಿತವಾದ ದೇವಿಯ ಕೊರಳು ಎಂದು ವರ್ಣಿಸಲ್ಪಟ್ಟಿದೆ. ಈ ಹಾರವನ್ನು ಸೇರಿಸಿದ "ಚಿಂತಾಮಣಿ" ಎಂಬ ಪದಕವು, ದೇವಿಯ ಸ್ತನ್ಯ ಪ್ರದೇಶದ ಮೇಲೆ ಪ್ರಕಾಶಮಾನವಾಗಿ ತೋರುತ್ತಿದೆ. ಭಗವತಿಯ ಕೆಂದುಟಿಯ ಕಾಂತಿಯನ್ನು ಪ್ರತಿಫಲಿಸುತ್ತಿರುವ ಆ ಮುತ್ತಿನ ಸರವು ಈಶ್ವರನ ಪ್ರತಾಪದ ಕೀರ್ತಿಯ ಸಂಕೇತದಂತೆ ಪ್ರಕಾಶಿಸುತ್ತದೆ ಎಂಬ ಉತ್ಪ್ರೇಕ್ಷೆ. ಸರಸ್ವತೀ ಸಿದ್ಧಿಗೆ, ಕವಿಕತೃತ್ವ ಶಕ್ತಿಗೆ, ಅತೀಂದ್ರಿಯ ಅನುಭವಿಯ ವಾಗ್ವಿಲಾಸ ರಚನೆಗೂ, ದೇವಿಯ ದಯೆ ಮತ್ತು ಅನುಗ್ರಹವೇ ಕಾರಣವೆಂದು ತಿಳಿದು, ಅವಳಿಗೆ ಸಂಪೂರ್ಣ ಶರಣಾಗತರಾಗಿ, ಅವಳ ಮಹಿಮಾತಿಶಯವನ್ನು ತಮ್ಮ ನಿರ್ಮಲ ನಿರಹಂಕಾರ ಚಿತ್ತದಿಂದ ಕೊಂಡಾಡುವ ಪರಿ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

**ವಹತ್ಯಂಬ ಸ್ತಂಬೇರಮದನುಜಕುಂಭಪ್ರಕೃತಿಭಿಃ ಸಮಾರಬ್ಧಾಂ ಮುಕ್ತಾಮಣಿಭಿರಮಲಾಂ ಹಾರಲತಿಕಾಮ್ ।**
**ಕುಚಾಭೋಗೋ ಬಿಂಬಾಧರರುಚಿಭಿರಂತಃ ಶಬಲಿತಾಂ ಪ್ರತಾಪವ್ಯಾಮಿಶ್ರಾಂ ಪುರದಮಯಿತುಃ ಕೀರ್ತಿಮಿವ ತೇ ॥**

**ತವ ಸ್ತನ್ಯಂ ಮನ್ಯೇ ಧರಣಿಧರಕನ್ಯೇ ಹೃದಯತಃ ಪಯಃಪಾರಾವಾರಃ ಪರಿವಹತಿ ಸಾರಸ್ವತಮಿವ ।**
**ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್ ಕವೀನಾಂ ಪ್ರೌಢಾನಾಮಜನಿ ಕಮನೀಯಃ ಕವಯಿತಾ ॥**

**ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ ।**
**ಸಮುತ್ತಸ್ಥೌ ತಸ್ಮಾದಚಲತನಯೇ ಧೂಮಲತಿಕಾ ಜನಸ್ತಾಂ ಜಾನೀತೇ ತವ ಜನನಿ ರೋಮಾವಲಿರಿತಿ ॥**

**ಯದೇತತ್ ಕಾಲಿಂದೀತನುತರತರಂಗಾಕೃತಿ ಶಿವೇ ಕೃಶೇ ಮಧ್ಯೇ ಕಿಂಚಿಜ್ಜನನಿ ತವ ಯದ್ಭಾತಿ ಸುಧಿಯಾಮ್ ।**
**ವಿಮರ್ದಾದನ್ಯೋಽನ್ಯಂ ಕುಚಕಲಶಯೋರಂತರಗತಂ ತನೂಭೂತಂ ವ್ಯೋಮ ಪ್ರವಿಶದಿವ ನಾಭಿಂ ಕುಹರಿಣೀಮ್ ॥**

**ಸ್ಥಿರೋ ಗಂಗಾವರ್ತಃ ಸ್ತನಮುಕುಲರೋಮಾವಲಿಲತಾಕಲಾವಾಲಂ ಕುಂಡಂ ಕುಸುಮಶರತೇಜೋಹುತಭುಜಃ ।**
**ರತೇರ್ಲೀಲಾಗಾರಂ ಕಿಮಪಿ ತವ ನಾಭಿರ್ಗಿರಿಸುತೇ ಬಿಲದ್ವಾರಂ ಸಿದ್ಧೇರ್ಗಿರಿಶನಯನಾನಾಂ ವಿಜಯತೇ ॥**

**"ತನುಮಧ್ಯಾ, ತಲೋದರ್ಯೈ, ಸ್ತನಭಾರದಲನ್ಮಧ್ಯಾಪಟ್ಟಬಂಧವಲಿತ್ರಯಾ"** ಸ್ತನಭಾರದಿಂದ ಬಾಗಿದ ನಡುವಿನ ಆಧಾರಕ್ಕಾಗಿ, ಬ್ರಹ್ಮನು ಮೂರು ಕಟ್ಟುಗಳನ್ನು ಹಾಕಿದ್ದಾನೆಂದು ಲಲಿತಾ ಸಹಸ್ರನಾಮದಲ್ಲಿ ವರ್ಣಿಸಿದ್ದರೆ, ಶಂಕರರು, ದೇವಿಯ ಹೊಟ್ಟೆಯ ಮೇಲಿರುವ ಮೂರು ಮಡಿಕೆಗಳ ಗೆರೆಗಳನ್ನು ಏಲಕ್ಕಿ ಬಳ್ಳಿಗಳಿಗೆ ಹೋಲಿಸಿ, ಸ್ತನಭಾರದಿಂದ ಬಾಗಿದ

ನಡುವಿನ ಆಧಾರಕ್ಕಾಗಿ, ಬ್ರಹ್ಮನು ಮೂರು ಸುತ್ತಾಗಿ ಏಲಕ್ಕಿ ಬಳ್ಳಿಗಳನ್ನು ಕಟ್ಟಿದ್ದಾನೆನ್ನುತ್ತಾ, ಭಗವತಿಯ ಕೃಶವಾದ ಸೊಂಟವನ್ನು ನದಿಯ ದಡದ ವೃಕ್ಷಕ್ಕೆ ಹೋಲಿಸಿ, ಆ ಸುಂದರ ನಡುಭಾಗವು ಭಕ್ತರಿಗೆ ಕ್ಷೇಮವನ್ನು ತರಲಿ ಎಂಬ ಬೇಡಿಕೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

**ನಿಸರ್ಗಕ್ಷೀಣಸ್ಯ ಸ್ತನತಟಭರೇಣ ಕ್ಲಮಜುಷೋ ನಮನ್ಮೂರ್ತೇರ್ನಾರೀತಿಲಕ ಶನಕೈಸ್ತ್ರುಟ್ಯತ ಇವ ।**
**ಚಿರಂ ತೇ ಮಧ್ಯಸ್ಯ ತ್ರುಟಿತತಟಿನೀತೀರತರುಣಾ ಸಮಾವಸ್ಥಾಸ್ಥೇಮ್ನೋ ಭವತು ಕುಶಲಂ ಶೈಲತನಯೇ ॥**

**ಕುಚೌ ಸದ್ಯಃಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ ಕಷಂತೌ ದೋರ್ಮೂಲೇ ಕನಕಕಲಶಾಭೌ ಕಲಯತಾ ।**
**ತವ ತ್ರಾತುಂ ಭಂಗಾದಲಮಿತಿ ವಲಗ್ನಂ ತನುಭುವಾ ತ್ರಿಧಾ ನದ್ಧಂ ದೇವಿ ತ್ರಿವಲಿಲವಲೀವಲ್ಲಿಭಿರಿವ ॥**

**"ಮಾಣಿಕ್ಯಮಕುಟಾಕಾರಾ ಜಾನುದ್ವಯವಿರಾಜಿತಾ, ಇಂದ್ರಗೋಪಪರಿಕ್ಷಿಪ್ತಾ ಸ್ಮರತೂಣಾಭಜಂಘಿಕಾ, ಕಾಮೇಶಜ್ಞಾತ ಸೌಭಾಗ್ಯ ಮಾರ್ದವೋರುದ್ವಯಾನ್ವಿತಾ"** ಲಾವಣ್ಯ ಮತ್ತು ಕೋಮಲತೆಯಿಂದ ಕೂಡಿದ ತೊಡೆಗಳುಳ್ಳವಳಾದ ಭಗವತಿಯು, ತನ್ನ ಪತಿವ್ರತಾ ಧರ್ಮಕ್ಕನುಸಾರವಾಗಿ, ಪ್ರತಿನಿತ್ಯವೂ ತನ್ನ ಪತಿಯಾದ ಪರಮೇಶ್ವರನಿಗೆ ಬಾಗಿ ನಮಸ್ಕರಿಸುವುದರಿಂದ, ಅವು ಐರಾವತವೆಂಬ ಆನೆಯ ನೆತ್ತಿಯಲ್ಲಿರುವ ಎರಡು ಕುಂಭಸ್ಥಳಗಳಂತೆ, ಬಹು ಕಠಿಣವಾಗಿ, ಒರಟಾಯಿತೆಂದೂ ಮತ್ತು ದೇವಿಯ ಜಂಘ, ಮೋಣಕಾಲುಗಳ ವರ್ಣನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

**ಗುರುತ್ವಂ ವಿಸ್ತಾರಂ ಕ್ಷಿತಿಧರಪತಿಃ ಪಾರ್ವತಿ ನಿಜಾನ್ನಿತಂಬಾದಾಚ್ಛಿದ್ಯ ತ್ವಯಿ ಹರಣರೂಪೇಣ ನಿದಧೇ ।**
**ಅತಸ್ತೇ ವಿಸ್ತೀರ್ಣೋ ಗುರುರಯಮಶೇಷಾಂ ವಸುಮತೀಂ ನಿತಂಬಪ್ರಾಗ್ಭಾರಃ ಸ್ಥಗಯತಿ ಲಘುತ್ವಂ ನಯತಿ ಚ ॥**

**ಕರೀಂದ್ರಾಣಾಂ ಶುಂಡಾನ್ ಕನಕಕದಲೀಕಾಂಡಪಟಲೀಮುಭಾಭ್ಯಾಮೂರುಭ್ಯಾಮುಭಯಮಪಿ ನಿರ್ಜಿತ್ಯ ಭವತೀ ।**
**ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ ಗಿರಿಸುತೇ ವಿಧಿಜ್ಞ್ಯೇ ಜಾನುಭ್ಯಾಂ ವಿಬುಧಕರಿಕುಂಭದ್ವಯಮಸಿ ॥**

**ಪರಾಜೇತುಂ ರುದ್ರಂ ದ್ವಿಗುಣಶರಗರ್ಭೌ ಗಿರಿಸುತೇ ನಿಷಂಗೌ ಜಂಘೇ ತೇ ವಿಷಮವಿಶಿಖೋ ಬಾಢಮಕೃತ ।**
**ಯದಗ್ರೇ ದೃಶ್ಯಂತೇ ದಶಶರಫಲಾಃ ಪಾದಯುಗಲೀನಖಾಗ್ರಚ್ಛದ್ಮಾನಃ ಸುರಮಕುಟಶಾಣೈಕನಿಶಿತಾಃ ॥**

**"ಪದದ್ವಯ ಪ್ರಭಾಜಾಲಾ ಪರಾಕೃತ ಸರೋರುಹಾ"** ಕಮಲಗಳು, ರಾತ್ರಿಯಲ್ಲಿ ಮೊಗ್ಗಾಗಿ, ಸೂರ್ಯೋದಯವಾದಾಗ ಅರಳುವ ಸ್ವಭಾವ ಹೊಂದಿರುವುದು ಪ್ರಕೃತಿಯ ನಿಯಮ, ಆದರೇ ಸರ್ವೇಶ್ವರಿಯ ಪಾದಕಮಲಗಳು, ಕಮಲದಂತೆ ರಾತ್ರಿ ಮೊಗ್ಗಾಗದೇ, ಆ ಸಮಯದಲ್ಲಿಯೂ ಅರಳಿರುವ ಸಾಮರ್ಥ್ಯ ಹೊಂದಿರುತ್ತದೆ. ಅಂದರೆ ರಾತ್ರಿಯಲ್ಲಿ ಕಮಲದಂತೆ ಮೊಗ್ಗಾಗಿ ತನ್ನ ಕಾಂತಿಯನ್ನು ಕಳೆದುಕೊಳ್ಳದೇ ಸದಾಕಾಲವೂ, ವಿಕಸಿತಗೊಂಡೇ ಇರುತ್ತದೆ. ಹಾಗೇ ಹಿಮದಲ್ಲೂ ಅವು ನಾಶ ಹೊಂದುವುದಿಲ್ಲ. ದೇವಿಯ ಪದಕಮಲ, ಪಾದಾಗ್ರ, ಪಾದಮಹಿಮೆಯ ವರ್ಣನೆಯೊಂದಿಗೆ ದೇವಿಯ ಚರಣಕಮಲಗಳಿಗೆ ನಮಸ್ಕರಿಸಿ ಇಟ್ಟ ಭಕ್ತಿಪೂರ್ವಕ ಪ್ರಾರ್ಥನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

**ಶ್ರುತೀನಾಂ ಮೂರ್ಧಾನೋ ದಧತಿ ತವ ಯೌ ಶೇಖರತಯಾ ಮಮಾಪ್ಯೇತೌ ಮಾತಃ ಶಿರಸಿ ದಯಯಾ ಧೇಹಿ ಚರಣೌ ।**
**ಯಯೋಃ ಪಾದ್ಯಂ ಪಾಥಃ ಪಶುಪತಿಜಟಾಜೂಟತಟಿನೀ ಯಯೋರ್ಲಾಕ್ಷಾಲಕ್ಷ್ಮೀರರುಣಹರಿಚೂಡಾಮಣಿರುಚಿಃ ॥**

ನಮೋವಾಕಂ ಬ್ರೂಮೋ ನಯನರಮಣೀಯಾಯ ಪದಯೋಸ್ತವಾಸ್ಮೈ ದ್ವಂದ್ವಾಯ ಸ್ಫುಟರುಚಿರಸಾಲಕ್ತಕವತೇ ।
ಅಸೂಯತ್ಯತ್ಯಂತಂ ಯದಭಿಹನನಾಯ ಸ್ಪೃಹಯತೇ ಪಶೂನಾಮೀಶಾನಃ ಪ್ರಮದವನಕಂಕೇಲಿತರವೇ ॥

ಮೃಷಾ ಕೃತ್ವಾ ಗೋತ್ರಸ್ಖಲನಮಥ ವೈಲಕ್ಷ್ಯನಮಿತಂ ಲಲಾಟೇ ಭರ್ತಾರಂ ಚರಣಕಮಲೇ ತಾಡಯತಿ ತೇ ।
ಚಿರಾದಂತಃಶಲ್ಯಂ ದಹನಕೃತಮುನ್ಮೂಲಿತವತಾ ತುಲಾಕೋಟಿಕ್ವಾಣೈಃ ಕಿಲಿಕಿಲಿತಮೀಶಾನರಿಪುಣಾ ॥

ಹಿಮಾನೀಹಂತವ್ಯಂ ಹಿಮಗಿರಿನಿವಾಸೈಕಚತುರೌ ನಿಶಾಯಾಂ ನಿದ್ರಾಣಂ ನಿಶಿ ಚರಮಭಾಗೇ ಚ ವಿಶದೌ ।
ವರಂ ಲಕ್ಷ್ಮೀಪಾತ್ರಂ ಶ್ರಿಯಮತಿಸೃಜಂತೌ ಸಮಯಿನಾಂ ಸರೋಜಂ ತ್ವತ್ಪಾದೌ ಜನನಿ ಜಯತಶ್ಚಿತ್ರಮಿಹ ಕಿಮ್ ॥

ಪದಂ ತೇ ಕೀರ್ತೀನಾಂ ಪ್ರಪದಮಪದಂ ದೇವಿ ವಿಪದಾಂ ಕಥಂ ನೀತಂ ಸದ್ಭಿಃ ಕಠಿನಕಮಠೀಕರ್ಪರತುಲಾಮ್ ।
ಕಥಂ ವಾ ಬಾಹುಭ್ಯಾಮುಪಯಮನಕಾಲೇ ಪುರಭಿದಾ ಯದಾದಾಯ ನ್ಯಸ್ತಂ ದೃಷದಿ ದಯಮಾನೇನ ಮನಸಾ ॥

ನಖೈರ್ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಸ್ತರೂಣಾಂ ದಿವ್ಯಾನಾಂ ಹಸತ ಇವ ತೇ ಚಂಡಿ ಚರಣೌ ।
ಫಲಾನಿ ಸ್ವಃಸ್ಥೇಭ್ಯಃ ಕಿಸಲಯಕರಾಗ್ರೇಣ ದದತಾಂ ದರಿದ್ರೇಭ್ಯೋ ಭದ್ರಾಂ ಶ್ರಿಯಮನಿಶಮಹ್ನಾಯ ದದತೌ ॥

ದದಾನೇ ದೀನೇಭ್ಯಃ ಶ್ರಿಯಮನಿಶಮಾಶಾನುಸದೃಶೀಮಮಂದಂ ಸೌಂದರ್ಯಪ್ರಕರಮಕರಂದಂ ವಿಕಿರತಿ ।
ತವಾಸ್ಮಿನ್ ಮಂದಾರಸ್ತಬಕಸುಭಗೇ ಯಾತು ಚರಣೇ ನಿಮಜ್ಜನ್ಮಜ್ಜೀವಃ ಕರಣಚರಣಃ ಷಟ್ಚರಣತಾಮ್ ॥

ಪದನ್ಯಾಸಕ್ರೀಡಾಪರಿಚಯಮಿವಾರಬ್ಧುಮನಸಃ ಸ್ಖಲಂತಸ್ತೇ ಖೇಲಂ ಭವನಕಲಹಂಸಾ ನ ಜಹತಿ ।
ಅತಸ್ತೇಷಾಂ ಶಿಕ್ಷಾಂ ಸುಭಗಮಣಿಮಂಜೀರರಣಿತಚ್ಛಲಾದಾಚಕ್ಷಾಣಂ ಚರಣಕಮಲಂ ಚಾರುಚರಿತೇ ॥

**"ಮರಾಳೀ ಮಂದಗಮನಾ ಮಹಾಲಾವಣ್ಯ ಶೇವಧೀ"** ಕಲಹಂಸ ಗಮನದಂತೆ ಮಂದ ಗಂಭೀರ ನಡೆಯವಳೂ, ದರಸ್ಮೇರ ಮುಖಾಂಬುಜಳೂ, ಮಹಾಲಾವಣ್ಯ ಶೇವಧಿಯೂ, ಸರ್ವಾರುಣಳೂ, ಅನವದ್ಯಾಂಗಿಯೂ, ಚಾರುರೂಪಳೂ, ಕೋಮಲಾಕಾರಳೂ, ದಿವ್ಯವಿಗ್ರಹಳೂ, ದರಹಾಸೋಜ್ವಲನ್ಮುಖಿಯೂ, ಆದ ಕಾಮೇಶ್ವರಿಯ ಸೌಂದರ್ಯ ವರ್ಣನೆ ಮತ್ತು ಚಂದ್ರಮಂಡಲವೇ ದೇವಿಯ ಕರಂಡಿಕೆ ಎಂಬ ಪ್ರತಿಪಾದನೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿ.

ಗತಾಸ್ತೇ ಮಂಚತ್ವಂ ದ್ರುಹಿಣಹರಿರುದ್ರೇಶ್ವರಭೃತಃ ಶಿವಃ ಸ್ವಚ್ಛಚ್ಛಾಯಾಘಟಿತಕಪಟಪ್ರಚ್ಛದಪಟಃ ।
ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ ಶರೀರೀ ಶೃಂಗಾರೋ ರಸ ಇವ ದೃಶಾಂ ದೋಗ್ಧಿ ಕುತುಕಮ್ ॥

ಅರಾಲಾ ಕೇಶೇಷು ಪ್ರಕೃತಿಸರಲಾ ಮಂದಹಸಿತೇ ಶಿರೀಷಾಭಾ ಚಿತ್ತೇ ದೃಷದುಪಲಶೋಭಾ ಕುಚತಟೇ ।
ಭೃಶಂ ತನ್ವೀ ಮಧ್ಯೇ ಪೃಥುರುರಸಿಜಾರೋಹವಿಷಯೇ ಜಗತ್ತ್ರಾತುಂ ಶಂಭೋರ್ಜಯತಿ ಕರುಣಾ ಕಾಚಿದರುಣಾ ॥

ಕಲಂಕಃ ಕಸ್ತೂರೀ ರಜನಿಕರಬಿಂಬಂ ಜಲಮಯಂ ಕಲಾಭಿಃ ಕರ್ಪೂರೈರ್ಮರಕತಕರಂಡಂ ನಿಬಿಡಿತಮ್ ।
ಅತಸ್ತ್ವದ್ಭೋಗೇನ ಪ್ರತಿದಿನಮಿದಂ ರಿಕ್ತಕುಹರಂ ವಿಧಿರ್ಭೂಯೋ ಭೂಯೋ ನಿಬಿಡಯತಿ ನೂನಂ ತವ ಕೃತೇ ॥

**"ಅಂತರ್ಮುಖ ಸಮಾರಾಧ್ಯಾ ಬಹಿರ್ಮುಖ ಸುದುರ್ಲಭಾ"** ಬಹಿರ್ವಿಷಯಗಳಲ್ಲಿ ಆಸಕ್ತಿ ಹೊಂದಿರುವ ಚಂಚಲ ಚಿತ್ತರಿಗೆ, ದೇವಿಯ ಕಟಾಕ್ಷ ಲಭಿಸಲು ಸಾಧ್ಯವಿಲ್ಲವೆಂಬ ಸ್ಪಷ್ಟನೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿ.

**ಪುರಾರಾತೇರಂತಃಪುರಮಸಿ ತತಸ್ತ್ವಚ್ಚರಣಯೋಃ ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ ।**
**ತಥಾ ಹ್ಯೇತೇ ನೀತಾಃ ಶತಮಖಮುಖಾಃ ಸಿದ್ಧಿಮತುಲಾಂ ತವ ದ್ವಾರೋಪಾಂತಸ್ಥಿತಿಭಿರಣಿಮಾದ್ಯಾಭಿರಮರಾಃ ॥**

**"ವಾಗಾರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ, ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ"** ಮಾತು ಮತ್ತು ಅದರ ಅರ್ಥ ಒಂದಕ್ಕೊಂದು ಪೂರಕವಾಗಿರುವಂತೆ ಶಿವ ಪಾರ್ವತಿಯರಿಬ್ಬರೂ ಒಬ್ಬರನ್ನೊಬ್ಬರು ಬೆಸೆದುಕೊಂಡಿರುತ್ತಾರೆ. ಶಿವ ಕಾಮೆಶ್ವರಾಂಕಸ್ಥಳೂ, ಸಾಧ್ವಿಯೂ, ಸರ್ವಮಂಗಳೆಯೂ, ಮಾಹೇಶ್ವರಿಯೂ, ಮಹಾಕಾಮೇಶ ಮಹಿಷಿಯೂ, ಸದಾಶಿವಳೂ, ಕಾಮೇಶ್ವರ ಪ್ರಾಣನಾಡಿಯೂ, ಶ್ರೀಕಂಠಾರ್ಧ ಶರೀರಿಣಿಯೂ, ಶಿವ ಪ್ರಿಯಳೂ, ಸದಾಶಿವ ಪತಿವ್ರತೆಯೂ, ಶಂಭು ಮೋಹಿನಿಯೂ, ಶಿವಶಕ್ತ್ಯೈಕ್ಯರೂಪಿಣಿಯೂ ಆದ ಶಿವೆಯ ಪಾತಿವ್ರತ್ಯ ವರ್ಣನೆ ಸೌಂದರ್ಯಲಹರಿಯ ಈ ಶ್ಲೋಕದಲ್ಲಿ.

**ಕಲತ್ರಂ ವೈಧಾತ್ರಂ ಕತಿಕತಿ ಭಜಂತೇ ನ ಕವಯಃ ಶ್ರಿಯೋ ದೇವ್ಯಾಃ ಕೋ ವಾ ನ ಭವತಿ ಪತಿಃ ಕೈರಪಿ ಧನ್ಯೈಃ ।**
**ಮಹಾದೇವಂ ಹಿತ್ವಾ ತವ ಸತಿ ಸತೀನಾಮಚರಮೇ ಕುಚಾಭ್ಯಾಮಾಸಂಗಃ ಕುರವಕತರೋರಪ್ಯಸುಲಭಃ ॥**

ನಿರ್ದ್ವೈತಳೂ, ದ್ವೈತವರ್ಜಿತಳೂ, ಆದ ದೇವಿಯು, ಲಕ್ಷ್ಮೀ, ಸರಸ್ವತಿ, ಪಾರ್ವತಿ ಈ ಮೂರು ರೂಪಗಳಲ್ಲಿಯೂ ಇದ್ದು, ಅದನ್ನೂ ಮೀರಿದ ಅಪಾರ ಮಹಿಮೆಯುಳ್ಳವಳಾದ ನಾಲ್ಕನೆಯ ದೇವತೆ ಎಂದು ದೇವಿಯನ್ನು ಆರಾಧಿಸುತ್ತಾ, ಶಂಕರರು, ಏಕದೇವತಾ ವಾದದಿಂದ ಏಕತತ್ವ ವಾದಕ್ಕೆ ಪದಾರ್ಪಣೆಯನ್ನು, ಸೌಂದರ್ಯಲಹರಿಯ ಈ ಶ್ಲೋಕದಲ್ಲಿ ಮಾಡಿದ್ದಾರೆ.

**ಗಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ ಹರೇಃ ಪತ್ನೀಂ ಪದ್ಮಾಂ ಹರಸಹಚರೀಮದ್ರಿತನಯಾಮ್ ।**
**ತುರೀಯಾ ಕಾಪಿ ತ್ವಂ ದುರಧಿಗಮನಿಃಸೀಮಮಹಿಮಾ ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮಮಹಿಷಿ ॥**

ದೇವಿಯ ಪಾದತೀರ್ಥ ಮಹಿಮೆಯನ್ನು ವಿವರಿಸಿ, ಕಾಮದಾಯಿನಿಯೂ, ಭದ್ರಪ್ರಿಯಳೂ, ಭಕ್ತಿವಶ್ಯಳೂ, ಭಯಾಪಹಳೂ, ಶಾಂಕರಿಯೂ, ಶ್ರೀಕರಿಯೂ, ಸುಖಪ್ರದಳೂ, ಸಾಂದ್ರಕರುಣಳೂ, ರಕ್ಷಾಕರಿಯೂ, ಕರುಣಾರಸ ಸಾಗರಳೂ, ವರದೆಯೂ, ಸದ್ಯಪ್ರಸಾದಿನಿಯೂ, ಕೈವಲ್ಯಪದದಾಯಿನಿಯೂ, ಶುಭಕರಿಯೂ, ಸರ್ವಾರ್ಥದಾತ್ರಿಯೂ, ಆದ ಭಗವತಿಯೇ ಲಕ್ಷ್ಮಿ ಮತ್ತು ಸರಸ್ವತಿಯ ಸ್ವರೂಪವಾದ್ದರಿಂದ, ಅವಳ ಅನುಗ್ರಹ ದೊರೆತರೆ, ವಿದ್ಯಾ ಪಾರಂಗತರೂ, ಐಶ್ವರ್ಯವಂತರೂ ಆಗುತ್ತಾರೆ. ದೇವಿಯ ಪಾದಗಳಿಗೆ ನಮಿಸಿದವರಿಗೆ, ಐಹಿಕ ಸುಖಭೋಗಗಳು ದೊರೆಯುವುದರ ಜೊತೆಗೆ, ಜೀವಿಸಿರುವಾಗಲೇ ಸಂಸಾರ ಬಂಧನವನ್ನು ಕಳೆದುಕೊಂಡು, ಮೋಕ್ಷ ಸಾಮ್ರಾಜ್ಯದ ಪರಮಾನಂದ ಸುಖವೂ ದೊರೆಯುತ್ತದೆ. ಸಕಲ ಇಷ್ಟಾರ್ಥಸಿದ್ಧಿ ಪ್ರದಾಯಕಳಾಗಿರುವ ಭಗವತಿಯು, ಮೋಕ್ಷ ಪ್ರದಾಯಕಳೂ ಹೌದೆಂಬ ನಿರೂಪಣೆ ಸೌಂದರ್ಯಲಹರಿಯ ಈ ಶ್ಲೋಕಗಳಲ್ಲಿದೆ.

**ಕದಾ ಕಾಲೇ ಮಾತಃ ಕಥಯ ಕಲಿತಾಲಕ್ತಕರಸಂ ಪಿಬೇಯಂ ವಿದ್ಯಾರ್ಥೀ ತವ ಚರಣನಿರ್ಣೇಜನಜಲಮ್ ।**
**ಪ್ರಕೃತ್ಯಾ ಮೂಕಾನಾಮಪಿ ಚ ಕವಿತಾಕಾರಣತಯಾ ಕದಾ ಧತ್ತೇ ವಾಣೀಮುಖಕಮಲತಾಂಬೂಲರಸತಾಮ್ ॥**

**ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ ರತೇಃ ಪಾತಿವ್ರತ್ಯಂ ಶಿಥಿಲಯತಿ ರಮ್ಯೇಣ ವಪುಷಾ ।**
**ಚಿರಂ ಜೀವನ್ನೇವ ಕ್ಷಪಿತಪಶುಪಾಶವ್ಯತಿಕರಃ ಪರಾನಂದಾಭಿಖ್ಯಂ ರಸಯತಿ ರಸಂ ತ್ವದ್ಭಜನವಾನ್ ॥**

ಅವ್ಯಾಜಕರುಣಾಮೂರ್ತಿಯಾದ ದೇವಿಯ ಅನುಗ್ರಹದಿಂದ ದೊರೆತ ವಾಕ್ ಪಟುತ್ವ ಮತ್ತು ಕವಿತಾ ಸಾಮರ್ಥ್ಯದಿಂದ ಈ ಸೌಂದರ್ಯಲಹರೀ ಸ್ತೋತ್ರವನ್ನು ರಚಿಸಿದ್ದೇನೆಂದು ತಿಳಿಸುತ್ತಾ, ಶಂಕರರು, ಶಿರಬಾಗಿ, ಶರಣಾಗತರಾಗಿ ಆರ್ದ್ರತೆಯಿಂದ ತಮ್ಮ ನಯ-ವಿನಯಗಳನ್ನು ಸೌಂದರ್ಯಲಹರಿಯ ಈ ಶ್ಲೋಕದಲ್ಲಿ ಪ್ರತಿಬಿಂಬಿಸಿದ್ದಾರೆ.

**ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ ।**
**ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ ॥**

**ಅರುಣಾಂ ಕರುಣಾತರಂಗಿತಾಕ್ಷೀಂ ಧೃತ ಪಾಶಾಂಕುಶ ಪುಷ್ಪಬಾಣ ಚಾಪಾಮ್ ।**
**ಅಣಿಮಾದಿಭಿರಾವೃತಾಂ ಮಯೂಖೈಃ ಅಹಮಿತ್ಯೇವ ವಿಭಾವಯೇ ಭವಾನೀಮ್ ॥**

ಭಗವತಿಯ ಚಿಂತನೆಯಲ್ಲಿ ತಲ್ಲೀನನಾಗಿ ಯಾರು ತದ್ವೈಕ್ಯಭಾವವನ್ನು ಹೊಂದುತ್ತರೋ, ಅವರಿಗೆ ಮಹಾಪ್ರಳಯಕಾಲದ ಸಂವರ್ತಾಗ್ನಿಯೂ ಆರತಿಯನ್ನು ಎತ್ತುತ್ತದೆ. ದೇವಿಯ ಚರಣಗಳ ಕಾಂತಿಯಿಂದ, ಅವಳ ಸುತ್ತಲೂ ಇರುವ ಆವರಣ ದೇವತೆಗಳಾದ ನಿತ್ಯಾದೇವಿಯರನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೋ, ಅವರಿಗೆ ಯಾವ ಐಹಿಕ ಸಂಪತ್ತಿನ ಅವಶ್ಯಕತೆಯ ಬಯಕೆಯೂ ಇರದೇ, ಅದ್ವೈತಾನುಭೂತಿಯನ್ನು ಪಡೆಯುತ್ತಾರೆಂಬುದು ಶಂಕರರ ಭಾವನೆ.

**॥ಓಂ ಶಾಂತಿಃ ಶಾಂತಿಃ ಶಾಂತಿಃ॥**





**ಶ್ರೀ ಗಣೇಶ ಶಾರದ ಗುರುಭ್ಯೋ ನಮಃ**

# ಶ್ರೀಚಕ್ರಾರಾಧನೆ

## ಮುತ್ತುಸ್ವಾಮಿ ದೀಕ್ಷಿತರ ಕಮಲಾಂಬಾ ನವಾವರಣ ಕೃತಿಗಳೊಂದಿಗೆ

ಮಹಾತ್ರಿಪುರಸುಂದರ್ಯಾತ್ಮಕವಾದ ಪರಬ್ರಹ್ಮ ಚೈತನ್ಯವು, ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳೆಂಬ ಪುರತ್ರಯವನ್ನೂ, ಸ್ಥೂಲ, ಸೂಕ್ಷ್ಮ ಕಾರಣಗಳೆಂಬ ಶರೀರತ್ರಯವನ್ನೂ, ವ್ಯಾಪಿಸಿ, ದೇಶ ಕಾಲ ವಸ್ತುಗಳಲ್ಲಿ, ಹೊರಗೂ ಒಳಗೂ ಅಸಂಗದಿಂದ ಬೆಳಗುತ್ತಾ ಇರುವುದು. ಅದೇ ಪರಬ್ರಹ್ಮವು. ಅದಕ್ಕೆ ಬೇರೆಯಾದುದು, ಅಸತ್ಯವೂ, ಅನಾತ್ಮಕವೂ ಆಗಿದೆ. ಆದುದರಿಂದ, ಇದೇ ಬ್ರಹ್ಮಜ್ಞಾನವು. ಭಾವನೆ, ಅಭಾವನೆಗಳಿಂದಲೂ, ಕಳೆಗಳಿಂದಲೂ ಬಿಡಲ್ಪಟ್ಟ, ಈ ಚಿದ್ವಿದ್ಯೆಯೇ, ಅದ್ವಿತೀಯ ಬ್ರಹ್ಮಜ್ಞಾನವು. ಸಚ್ಚಿದಾನಂದ ಪ್ರವಾಹಾತ್ಮಕವಾದ ಈ ಮಹಾತ್ರಿಪುರಸುಂದರಿಯು, ಹೊರಗೂ, ಒಳಗೂ ಪ್ರವೇಶಿಸಿ, ತಾನೇತಾನಾಗಿ ಬೆಳಗುತಲಿರುವಳು. ಯಾವುದು ಆಸ್ತಿ ಎಂಬ ವ್ಯವಹಾರ ವಿಷಯವಾದ ಸತ್ತೋ, ಯಾವುದು ವಿಭಾತಿ ಎಂಬ ವ್ಯವಹಾರವಾದ ಚಿತ್ತೋ, ಯಾವುದು ಪ್ರಿಯವೆಂಬ ವ್ಯವಹಾರ ವಿಷಯವಾದ ಆನಂದವೋ, ಈ ಸರ್ವಾಕಾರವಾದುದು, ಮಹಾತ್ರಿಪುರಸುಂದರಿಯು. ನೀವೂ, ನಾನೂ, ಎಲ್ಲವೂ, ಪ್ರಪಂಚವೂ, ಎಲ್ಲಾ ದೇವತೆಗಳೂ ಮತ್ತು ಸರ್ವವೂ, ಈ ಮಹಾತ್ರಿಪುರಸುಂದರಿಯೇ. ಈ ಸತ್ವ ರೂಪವೇ, ಲಲಿತಾಖ್ಯವಾದ ಅದ್ವಿತೀಯ ವಸ್ತುವು, ಅಖಂಡಾರ್ಥವಾದ ಪರಬ್ರಹ್ಮವು. ಜೀವ ಈಶಾದಿ ಪಂಚಭೇದ ಪರಿತ್ಯಾಗದಿಂದ, ಶುದ್ಧ ಚೈತನ್ಯಾತ್ಮಕವಾದ ಸ್ವರೂಪವನ್ನು ಬಿಡದಿರುವುದರಿಂದ, ಸರ್ವಾಧಿಷ್ಠಾನವೂ, ಪರತತ್ವವೂ ಆದ ಈ ಒಂದು ವಸ್ತುವೇ ಮಹತ್ತಾಗಿ ಉಳಿಯುತ್ತದೆ.

**ಪುರತ್ರಯಂ ಶರೀರತ್ರಯಂ ವ್ಯಾಪ್ಯಾ ಬಹಿರಂತರವಭಾಸಯಂತೀ।**
**ದೇಶಕಾಲವಸ್ತ್ವಂರಾಸಂಗಾನ್ಮಹಾತ್ರಿಪುರಸುಂದರೀ ವೈಪ್ರತ್ಯಕ್ಚಿತಿಃ।**
**ಸೈವಾತ್ಮಾ ತತೋಽನ್ಯದ ಸತ್ಯಮನಾತ್ಮಾ । ಅತ ಏಷಾ ಬ್ರಹ್ಮಸಂವಿತ್ತಿಃ।**
**ಭಾವಾಭಾವ ಕಳಾವಿನಿರ್ಮುಕ್ತಾ ಚಿದ್ವಿದ್ಯಾ ದ್ವಿತೀಯ ಬ್ರಹ್ಮಸಂವಿತ್ತಿಃ।**
**ಸಚ್ಚಿದಾನಂದ ಲಹರೀ ಮಹಾತ್ರಿಪುರಸುಂದರೀ ಬಹಿರಂತರ ಮನುಪ್ರವಿಷ್ಯ ಸ್ವಯಮೇಕೈವ ವಿಭಾತಿ।**
**ಯದಸ್ತಿಸನ್ಮಾತ್ರಂ ಯದ್ವಿಭಾತಿಚಿನ್ಮಾತ್ರಂ ಯತ್ಪ್ರಿಯಮಾನಂದಂ ತದೇತತ್ಸರ್ವಾಕಾರಾ ಮಹಾತ್ರಿಪುರಸುಂದರೀ।**
**ತ್ವಂಚಾಹಂಚ ಸರ್ವಂವಿಶ್ವಂ ಸರ್ವೇದೇವತೇತರತ್ಸರ್ವಃ ಮಹಾತ್ರಿಪುರಸುಂದರೀ ಸತ್ಯಮೇತಂ ಲಲಿತಾಖ್ಯಂ ವಸ್ತುತದ ದ್ವಿತೀಯಂ।**
**ಅಖಂಡಾರ್ಥಂ ಪರಂಬ್ರಹ್ಮ ಪಂಚರೂಪ ಪರಿತ್ಯಾಗಾದಸ್ವರೂಪ ಪ್ರಹಾಣತಃ।**
**ಅಧಿಷ್ಠಾನಂ ಪರಂ ತತ್ವಮೇಕಂ ಸಚ್ಛಿಷ್ಯತೇ ಮಹದೀತಿಃ।**

ವೇದವ್ಯಾಸ ವಿರಚಿತ ಬ್ರಹ್ಮಾಂಡ ಪುರಾಣದ ಲಲಿತೋಪಾಖ್ಯಾನದ ಪ್ರಕಾರ, ರುದ್ರನ ಕೋಪಾನಲದಿಂದ ಹುಟ್ಟಿದ ಭಂಡಾಸುರನು, ಕ್ರೂರಸ್ವಭಾವ ಉಳ್ಳವನಾಗಿ, ಮಯನಿರ್ಮಿತವಾದ ಶ್ರೋಣಿದಪುರದಲ್ಲಿ, ರಾಜ್ಯವಾಳುತ್ತಾ, ದೇವತೆಗಳನ್ನೆಲ್ಲಾ ಸ್ವಾಧೀನದಲ್ಲಿಟ್ಟುಕೊಂಡು, ಹಿಂಸಿಸುತ್ತಿದ್ದನು. ನಾರದರ ಉಪದೇಶದ ಮೇರೆಗೆ, ದೇವೇಂದ್ರನು, ಸಮಸ್ತ ದೇವತೆಗಳೊಂದಿಗೆ ಹಿಮಗಿರಿಯ ತಪ್ಪಲಿಗೆ ಬಂದು, ಭಾಗೀರಥೀ ನದಿಯ ತೀರದಲ್ಲಿ, ಪರಾಶಕ್ತಿಯ ಪೂಜೆಯನ್ನು ಯಾಗ ವಿಧಾನದಿಂದ ಮಾಡಿದನು. ಆಗ, ಯಜ್ಞಕುಂಡದಿಂದ ಅಪರಿಮಿತ ತೇಜಪುಂಜವೂ, ಅನುಪಮವೂ ಆದ ಒಂದು ಚಕ್ರಾಕಾರ ಉದ್ಭವಿಸಿತು. ಆ ಚಕ್ರದ

ಮಧ್ಯದಿಂದ, ಉದಯಿಸುತ್ತಿರುವ ಸಹಸ್ರಾರು ಸೂರ್ಯರ ಸದೃಶವಾದ ಪ್ರಕಾಶ ಉಳ್ಳವಳೂ, ಮಹಾರೂಪಾತಿಶಯದ ನಿಧಿಯಂತಿರುವವಳೂ, ಬ್ರಹ್ಮ, ವಿಷ್ಣು, ಶಿವ ಸ್ವರೂಪಳೂ, ಆನಂದ ಸಾಗರಳೂ, ಜಪಾಕುಸುಮದ ಕಾಂತಿಯುಳ್ಳವಳೂ, ಸರ್ವಾಭರಣ ಭೂಷಿತಳೂ, ಬ್ರಹ್ಮಾನಂದ ಸ್ವರೂಪಿಣಿಯೂ, ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವವಳೂ, ಸರ್ವಮಂಗಳ ಪ್ರದಾಯಕಳೂ ಆದ, ಮಹಾದೇವಿಯು ಅವತರಿಸಿದಳು. ಚಿದಗ್ನಿಕುಂಡ ಸಂಭೂತಳಾದ ದೇವಿಯು, ದೇವತೆಗಳ ಪ್ರಾರ್ಥನೆಯಂತೆ, ಭಂಡಾಸುರನನ್ನು ಸಂಹರಿಸಿದಳು.

ಹೀಗೆ ಶ್ರೀಚಕ್ರದಿಂದ ಉದ್ಭವಿಸಿದ ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗಲು, ಶ್ರೀಚಕ್ರವನ್ನು ಪೂಜಿಸಬೇಕೆಂದೂ, ಪಂಚದಶಾಕ್ಷರೀ ಮಂತ್ರವನ್ನು ಜಪಿಸಬೇಕೆಂದೂ, ವಶಿನ್ಯಾದಿ ವಾಗ್ದೇವತೆಯರಿಂದ ರಚಿತವಾದ ಲಲಿತಾ ಸಹಸ್ರನಾಮವನ್ನು ಪಠಿಸಬೇಕೆಂದೂ, ಲಲಿತೋಪಾಖ್ಯಾನದ ಪೂರ್ವಪೀಠಿಕೆಯಲ್ಲಿ ಉಲ್ಲೇಖಿಸಲಾಗಿದೆ. ಈ ದೃಷ್ಟಿಯಿಂದಲೇ, ಭಗವತಿಯನ್ನು, ರೇಖಾ, ಮಂತ್ರ, ರೂಪಾಕೃತಿಗಳಲ್ಲಿ ಆರಾಧಿಸುವುದು. ರೇಖಾಕೃತಿ ಎಂದರೆ ಶ್ರೀಚಕ್ರ, ಮಂತ್ರಾಕೃತಿ ಎಂದರೆ ಪಂಚದಶಾಕ್ಷರೀ ಮಂತ್ರೋಪಾಸನೆ, ರೂಪಾಕೃತಿ ಎಂದರೆ ಸಗುಣ ಸಾಕಾರ ರೂಪವಾದ ವಿಗ್ರಹ. ಮಂತ್ರಾಕೃತಿ ಮತ್ತು ರೂಪಾಕೃತಿಗಿಂತ ರೇಖಾಕೃತಿಯ ಆರಾಧನೆ ಹೆಚ್ಚು ಪ್ರಭಾವಶಾಲಿ ಎಂದು ಹೇಳಲಾಗುತ್ತದೆ. ಈ ಚರಾಚರ ಜಗತ್ತೆಲ್ಲಾ ಶ್ರೀಚಕ್ರ ಸ್ವರೂಪ.

ಸುಮೇರುಮಧ್ಯಶೃಂಗಸ್ಥಾ ಶ್ರೀಮನ್ನಗರನಾಯಿಕಾ। ಚಿಂತಾಮಣಿಗೃಹಾಂತಸ್ಥಾ ಪಂಚಬ್ರಹ್ಮಾಸನಸ್ಥಿತಾ॥
ಮಹಾಪದ್ಮಾಟವೀಸಂಸ್ಥಾ ಕದಂಬವನವಾಸಿನೀ। ಸುಧಾಸಾಗರಮಧ್ಯಸ್ಥಾ ಕಾಮಾಕ್ಷೀ ಕಾಮದಾಯಿನೀ॥

ಈ ಒಂಬತ್ತು ನಾಮಗಳಲ್ಲಿ, ಶ್ರೀಚಕ್ರದಲ್ಲಿ ಶ್ರೀಮಾತೆಯ ಇರುವಿಕೆ ಹಾಗೂ ರಹಸ್ಯ ಸ್ಥಾನಗಳೂ ಗೋಚರಿಸಿ, ಜ್ಞಾನಜ್ಯೋತಿ ಬೆಳಗುವಂತಾಗುತ್ತದೆ. ಈ ನಾಮಗಳನ್ನು ನಿರಂತರವೂ ಮನನ ಮಾಡಿಕೊಳ್ಳುವವರಿಗೆ, ಜಗನ್ಮಾತೆಯು, "ಮಹಾಪದ್ಮಾಟವೀಸಂಸ್ಥ" ಳಾಗಿ, ಅವರ ಹೃದಯಕಮಲಗಳಲ್ಲಿ ನೆಲೆಸಿ, "ಸುಧಾಸಾಗರಮಧ್ಯಸ್ಥ" ಳಾಗಿ, ಅವರ ಸ್ಮೃತಿಯಲ್ಲಿ ನಿಂತು, ಅಮೃತಸದೃಶವಾದ ಆಲೋಚನಾ ಭಾವನಾ ಲಹರಿಗಳನ್ನು ಪ್ರೇರೇಪಿಸುವವಳಾಗಿ, ಸನ್ಮಾರ್ಗ ಪ್ರವೃತ್ತರನ್ನಾಗಿ ಮಾಡುತ್ತಾಳೆ. ಶ್ರೀಚಕ್ರದ ಹಿರಿಮೆಯ ಪೂರ್ವ ವೃತ್ತಾಂತವನ್ನು ಸೌಂದರ್ಯಲಹರಿಯಲ್ಲಿ, ಶ್ರೀ ಶಂಕರ ಭಗವತ್ಪಾದರು, ಹೀಗೆ ನಿರೂಪಿಸಿದ್ದಾರೆ.

"ಎಲೈ ಜಗನ್ಮಾತೆಯೇ! ಪಶುಪತಿಯು ಸಕಲ ಪ್ರಪಂಚವನ್ನು ಸೃಷ್ಟಿಸಿದ ನಂತರ, ಪ್ರಾಪಂಚಿಕವಾದ ಸಿದ್ಧಿಗಳನ್ನು ಮಾತ್ರ ಕೊಡತಕ್ಕ ವಾಮಕೇಶ್ವರಾದಿ ಅರವತ್ನಾಲ್ಕು ತಂತ್ರಗಳನ್ನು ಹೊರಪಡಿಸಿದನು. ಅಜ್ಞಾನಾವೃತವಾದ ಜನರು ಈ ತಂತ್ರಗಳಿಂದಾಗುವ ಪ್ರಯೋಜನಗಳೇ ಪರಮ ಪುರುಷಾರ್ಥವೆಂದು ತಿಳಿದು, ಅಜ್ಞಾನಾಂಧಕಾರವನ್ನು ದೂರಮಾಡುವ, ಅಭಯದಾಯಕವಾದ, ಆತ್ಮತತ್ವಜ್ಞಾನದಿಂದ ವಂಚಿತರಾದರು. ಈ ತಂತ್ರಮಾರ್ಗಗಳಿಂದ ಜೀವರುಗಳು ಉದ್ಧಾರವಾಗುವುದಿಲ್ಲವೆಂಬ ಕರುಣೆಯಿಂದ, ದಯಾಮಯಿಯಾದ ದೇವಿಯೇ! ನೀನು ಈಶ್ವರನನ್ನು ಪುನಃ ನಿರ್ಬಂಧಿಸಲು, ಈಶ್ವರನು ಸಕಲ ಪುರುಷಾರ್ಥಗಳನ್ನೂ ಒದಗಿಸಿಕೊಟ್ಟು, ಜೀವರನ್ನು ಅಜ್ಞಾನ ಬಂಧನದಿಂದ ಮುಕ್ತರನ್ನಾಗಿ ಮಾಡಲು ಶಕ್ತವಾದ, ಶುದ್ಧ ವೇದ ವಿದ್ಯೆಯಾದ, ಈ ನಿನ್ನ ಶ್ರೀವಿದ್ಯೆಯನ್ನು, ಭೂಮಿಗೆ ತಂದನು".

**ಚತುಃಷಷ್ಟ್ಯಾ ತಂತ್ರೈಃ ಸಕಲಮಭಿಸಂಧಾಯ ಭುವನಂ ಸ್ಥಿತಸ್ತತ್ತತ್ಸಿದ್ಧಿಪ್ರಸವಪರತಂತ್ರೈಃ ಪಶುಪತಿಃ ।**
**ಪುನಸ್ತ್ವನ್ನಿರ್ಬಂಧಾತ್ ಅಖಿಲಪುರುಷಾರ್ಥೈಕಘಟನಾಸ್ವತಂತ್ರಂ ತೇ ತಂತ್ರಂ ಕ್ಷಿತಿತಲಮವಾತೀತರದಿದಮ್ ॥**

ಸಾಧಕನು ಬೀಜಾಕ್ಷರಗಳ ಮೂಲಕ ದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳುವ ಒಂದು ಸಾಧನವೇ ಶ್ರೀಚಕ್ರೋಪಾಸನೆ. ಶ್ರೀಚಕ್ರವು ತ್ರಿಕೋನಗಳಿಂದ ಪರಸ್ಪರವಾಗಿ ಕೂಡಿಕೊಂಡಿರುವ ರೇಖಾಕೃತಿ. ಇದು ಮಧ್ಯದಲ್ಲಿ ಬಿಂದುವಿರುವ ವೃತ್ತದಿಂದ ಕೂಡಿದ್ದಾಗಿದೆ. ಈ ವೃತ್ತದಲ್ಲಿ, ಕೆಳಗಡೆ ತುದಿಯುಳ್ಳ ಐದು ತ್ರಿಕೋನಗಳು ಮತ್ತು ಮೇಲುಗಡೆ ತುದಿಯುಳ್ಳ ನಾಲ್ಕು ತ್ರಿಕೋನಗಳು ಇವೆ. ಈ ನವತ್ರಿಕೋನಗಳನ್ನು ಒಳಗೊಂಡಿರುವ ವೃತ್ತವು, ಪುನಃ, ಪದ್ಮಗಳೆಂದು ಹೇಳಲ್ಪಡುವ, ಸಮಾನ ಕೇಂದ್ರವುಳ್ಳ ಎರಡು ವೃತ್ತಗಳಿಂದ ಆವರಿಸಲ್ಪಟ್ಟಿದೆ. ಮೊದಲನೆಯ ವೃತ್ತವು ಅಷ್ಟದಳ ಪದ್ಮವನ್ನೂ, ಎರಡನೆಯ ವೃತ್ತವು ಷೋಡಶದಳ ಪದ್ಮವನ್ನೂ, ಹೊಂದಿವೆ. ಈ ಷೋಡಶದಳವುಳ್ಳ ಪದ್ಮವು, ಪುನಃ, ಮೂರು ಆವರಣ ರೇಖೆಗಳಿಂದ ಸುತ್ತಲ್ಪಟ್ಟಿದೆ. ಕೊನೆಗೆ ಈ ಆಕೃತಿಯು, ಮೂರು ರೇಖೆಗಳುಳ್ಳ ಚಚ್ಚೌಕದಿಂದ ಆವರಿಸಲ್ಪಟ್ಟಿದೆ.

**ಬಿಂದು ತ್ರಿಕೋಣ ವಸುಕೋಣ ದಶಾರಯುಗ್ಮ ಮನ್ವಶ್ರನಾಗದಳ ಸಂಯುತ ಷೋಡಶಾರಮ್ ।**
**ವೃತ್ತತ್ರಯಂ ಚ ಧರಣೀ ಸದನತ್ರಯಂ ಚ ಶ್ರೀಚಕ್ರ ಮೇತದುದಿತಂ ಪರದೇವತಾಯಾಃ ॥**

ಈ ಸ್ವರೂಪವನ್ನೇ ಹೊರಗಿನಿಂದ ಒಳ ಸ್ವರೂಪವನ್ನು ಪ್ರವೇಶಿಸುವ, ಒಂಬತ್ತು ಅಂಶಗಳುಳ್ಳ ರಚನಾಕ್ರಮದಲ್ಲಿ ವಿವರಿಸಬಹುದಾಗಿದೆ. ಮೊದಲನೆಯದು ಮೂರು ರೇಖೆಗಳುಳ್ಳ ಸಮಚತುಷ್ ಕೋನ, ನಂತರದಲ್ಲಿ, ಮೂರು ವೃತ್ತಗಳು, ತದನಂತರ ಹದಿನಾರು ದಳಗಳ ಪದ್ಮ, ನಾಲ್ಕನೆಯದಾಗಿ ಎಂಟು ದಳಗಳ ಪದ್ಮವಿದ್ದು, ಆ ನಂತರ, ಚತುರ್ದಶಾರ ತ್ರಿಕೋನಗಳಿರುವ ಚಕ್ರವೂ, ತದನಂತರದಲ್ಲಿ, ಹತ್ತು ತ್ರಿಕೋನಗಳಿರುವ ಎರಡು ಚಕ್ರ, ಅಂದರೆ ದಶಾರಯುಗ್ಮವಿರುತ್ತದೆ. ಏಳನೆಯದಾಗಿ, ಅಷ್ಟಕೋನಗಳ, ಎಂದರೆ, ಎಂಟು ತ್ರಿಕೋನಗಳಿರುವ ಚಕ್ರವು, ಎಂಟನೆಯದಾಗಿ ಒಂದು ತ್ರಿಕೋನವು, ಒಂಬತ್ತನೆಯದಾಗಿ ಒಂದು ಬಿಂದುವೂ ಇರುತ್ತದೆ.

ಇದನ್ನು ಸೌಂದರ್ಯಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು, ಹೀಗೆ ವಿವರಿಸಿದ್ದಾರೆ.

**ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ ಪಂಚಭಿರಪಿ ಪ್ರಭಿನ್ನಾಭಿಃ ಶಂಭೋಃ ನವಭಿರಪಿ ಮೂಲಪ್ರಕೃತಿಭಿಃ ।**
**ಚತುಶ್ಚತ್ವಾರಿಂಶತ್ ವಸುದಲಕಲಾಶ್ರತ್ರಿವಲಯತ್ರಿರೇಖಾಭಿಃ ಸಾರ್ಧಂ ತವ ಶರಣಕೋಣಾಃ ಪರಿಣತಾಃ ॥**

ಪಿಂಡಾಂಡ ಬ್ರಹ್ಮಾಂಡಗಳ ಸಮನ್ವಯವಾದ ಶ್ರೀಚಕ್ರೋಪಾಸನೆಯು ಶಿವ-ಶಕ್ತಿಯರ ಐಕ್ಯತೆಯನ್ನು ತಿಳಿಸುತ್ತಾ, ಜಗತ್ತಿನ ಸೃಷ್ಟಿಗೆ ಅವುಗಳ ಪರಸ್ಪರತೆಯೇ ಕಾರಣವೆಂದು ತಿಳಿಸುತ್ತಿದೆ.

**ಚತುರ್ಭಿಃ ಶಿವಚಕ್ರೈಶ್ಚ ಶಕ್ತಿಚಕ್ರೈಶ್ಚ ಪಂಚಭಿಃ ಶಿವಶಕ್ತ್ಯಾತ್ಮಕಂ ಜ್ಞೇಯಂ ಶ್ರೀಚಕ್ರಂ ಶಿವಯೋರ್ವಪುಃ ।**

ಶ್ರೀಮತ್ ಶುಭಕೃತ್ ನಾಮ ಸಂವತ್ಸರದ, ಶರದೃತುವಿನ, ಭಾದ್ರಪದ ಹುಣ್ಣಿಮೆಯಾದ ಇಂದು, ನಮ್ಮ ನಾದಾರ್ಚನೆ ತಂಡವು, ನವಾವರಣ ಪೂಜಾವಿಧಿಯನ್ನು, ಒಂದು ವಿನೂತನ ರೀತಿಯಲ್ಲಿ ಹಮ್ಮಿಕೊಂಡಿದೆ. ಪ್ರತಿಯೊಂದು ಆವರಣದಲ್ಲೂ ಶ್ರೀದೇವಿಯನ್ನು, ಮುತ್ತುಸ್ವಾಮಿ ದೀಕ್ಷಿತರ ಕೃತಿಯಿಂದ ಸಂತುಷ್ಟಗೊಳಿಸಿ, ನಂತರ, ಆ ಚಕ್ರಸ್ಥಿತರಾಗಿರುವ ಶಕ್ತಿಗಳಿಗೆ ವಂದನೆಗೈದು, ಕೊನೆಯಲ್ಲಿ ಆ ಚಕ್ರಸ್ವಾಮಿನಿಗೆ ಶರಣಾಗುವ ವಿಧಾನ.

ಶ್ರೀ ಮುತ್ತುಸ್ವಾಮಿ ದೀಕ್ಷಿತರು ಸಂಗೀತ ಪ್ರಪಂಚದ ಅನರ್ಘ್ಯರತ್ನ, ಪ್ರಕಾಂಡ ಪಂಡಿತರು, ಸರ್ವವಿದ್ಯಾ ಪಾರಂಗತರು, ಸಂಸ್ಕೃತ, ವೇದ, ಶಾಸ್ತ್ರ, ಜ್ಯೋತಿಷ್ಯ, ಯಂತ್ರ-ಮಂತ್ರ-ತಂತ್ರ, ಇನ್ನೂ ಅನೇಕ ಭಾರತೀಯ ವಿದ್ಯಾ ಪ್ರವೀಣರು. ಮೇಲಾಗಿ,

ಕರ್ನಾಟಕ ಸಂಗೀತದ ವೈಣಿಕರು ಮತ್ತು ಗಾಯಕರು. ದೀಕ್ಷಿತರಿಂದ ರಚಿತವಾದ ನವಾವರಣ ಕೃತಿಗಳು, ಕರ್ನಾಟಕ ಸಂಗೀತದ ಮೇರು ರಚನೆಗಳು. ಬೃಹದಾಕಾರದ, ಘನವಾದ ಈ ಕೃತಿಗಳನ್ನು, ರಾಗ ದೇವತೆಗಳು ಪ್ರತಿಷ್ಠಾಪಿಸಲ್ಪಟ್ಟಿರುವ ನಾದ ದೇಗುಲಗಳೆಂದು ಕರೆಯಬಹುದು. ಸಾಹಿತ್ಯವನ್ನು ಗಮನಕ್ಕೆ ತೆಗೆದುಕೊಂಡರೆ, ತಂತ್ರಗಳು ಮತ್ತು ದೇವೀ ಪೂಜೆಯ ವಿಧಿವಿಧಾನಗಳನ್ನು ವಿಸ್ತಾರವಾಗಿ ತಿಳಿಸುತ್ತದೆ.

ದೇವಿಯ ಸಾಮೀಪ್ಯವನ್ನು ಹೊಂದಬೇಕಾದರೆ, ಒಂಬತ್ತು ಆವರಣಗಳನ್ನು ಹೊಕ್ಕು, ಹೋಗಬೇಕಾಗುತ್ತದೆ. ಪ್ರತಿಯೊಂದು ಆವರಣದ ಪೂಜಾವಿಧಿಗೂ ಪ್ರತ್ಯೇಕವಾದ ಹೆಸರು ಮತ್ತು ಶಕ್ತಿಗಳು ಇವೆ. ಅವು ಕೊಡುವ ಪ್ರತಿಫಲವೂ ವಿವಿಧ ರೀತಿಯದು. ದೇವಿಯಿಂದ ಫಲ ಲಭಿಸುವುದು, ಈ ಒಂಬತ್ತು ಆವರಣಗಳಿಗೂ ಪೂಜೆ ಸಲ್ಲಿಸಿದ ನಂತರವೇ.

## ನವಾವರಣ ಧ್ಯಾನಕೃತಿ

**ಕಮಲಾಂಬಿಕೇ ಆಶ್ರಿತ ಕಲ್ಪಲತಿಕೇ ಚಂಡಿಕೇ ಕಮನೀಯಾರುಣಾಂ ಶುಕೇ ಕರವಿಧೃತ ಶುಕೇ ಮಾಮವ।**
**ಕಮಲಾಸನಾದಿ ಪೂಜಿತ ಕಮಲಾಪದೇ ಬಹುವರದೇ ಕಮಲಾಲಯ ತೀರ್ಥ ವೈಭವೇ ಶಿವೇ ಕರುಣಾರ್ಣವೇ।**
**ಸಕಲಲೋಕನಾಯಿಕೇ ಸಂಗೀತ ರಸಿಕೇ ಸುಕವಿತ್ವ ಪ್ರದಾಯಿಕೇ ಸುಂದರಿ ಗತಮಾಯಿಕೇ।**
**ವಿಕಳೇಬರ ಮುಕ್ತಿ ದಾನ ನಿಪುಣೇ ಅಘಹರಣೇ ವಿಯದಾದಿ ಭೂತಕಿರಣೇ ವಿನೋದ ಚರಣೇ ಅರುಣೇ।**
**ಸಕಲೇ ಗುರುಗುಹಕರಣೇ ಸದಾಶಿವಾಂತಃಕರಣೇ ಅಕಚಟತಪಾದಿ ವರ್ಣೇ ಅಖಂಡೈಕ ರಸಪೂರ್ಣೇ।**
**ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ತ್ರಿಪುರಸುಂದರ್ಯೈ ನಮಃ**

ತ್ರಿಪುರಗಳು ಹಾಗೂ ತ್ರಿಪುರಾಸುರರೂ ನಮ್ಮಲ್ಲೇ ನೆಲೆಸಿವೆ. ತ್ರಿಪುರಸುಂದರಿ ನಮ್ಮ ತ್ರಿಪುರಗಳಲ್ಲಿರುವ ಮಾಲಿನ್ಯಗಳನ್ನು ನಾಶಪಡಿಸಿ, ತ್ರಿಪುರಾಸುರರನ್ನು ಸಂಹರಿಸಿ, ಸೌಂದರ್ಯ ಅಂದರೇ ಚೈತನ್ಯದಿಂದ ಪೂರ್ಣಗೊಳಿಸುತ್ತಾಳೆ.

**ಈಗ ಅಂಗನ್ಯಾಸ ದೇವತೆಗಳಿಗೆ ವಂದನೆಗಳು.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ಹೃದಯದೇವ್ಯೈ** ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ಶಿರೋದೇವ್ಯೈ** ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ಶಿಖಾದೇವ್ಯೈ** ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ಕವಚದೇವ್ಯೈ** ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ನೇತ್ರದೇವ್ಯೈ** ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ **ಅಸ್ತ್ರದೇವ್ಯೈ** ನಮಃ

**ನಿತ್ಯಾಷೋಡಶಿಕಾರೂಪಾ ಶ್ರೀಕಂಠಾರ್ಧ ಶರೀರಿಣೀ।**

ಶ್ರೀಚಕ್ರದ ಮಧ್ಯದ ಬಿಂದುವಿನಲ್ಲಿರುವ ದೇವತೆಯೇ ಮಹಾಭಟ್ಟಾರಿಕಾ ತ್ರಿಪುರಸುಂದರಿ. ತ್ರಿಪುರಸುಂದರಿಯನ್ನು ನಿತ್ಯಾದೇವತೆಯರು ಆವರಿಸಿಕೊಂಡಿರುತ್ತಾರೆ. ನಿತ್ಯಾದೇವತೆಯರು ಶ್ರೀಮಾತೆಯ ಅಂಗಗಳು.

**ತಿಥಿನಿತ್ಯಾದೇವತೆಗಳಿಗೆ ಪ್ರಣಾಮಗಳು.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕಾಮೇಶ್ವರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಭಗಮಾಲಿನೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ನಿತ್ಯಕ್ಲಿನ್ನೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಭೇರುಂಡೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ವಹ್ನಿವಾಸಿನೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಹಾವಜ್ರೇಶ್ವರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶಿವದೂತೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ತ್ವರಿತೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕುಲಸುಂದರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ನಿತ್ಯೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ನೀಲಪತಾಕೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ವಿಜಯೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಮಂಗಳೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಜ್ವಾಲಾಮಾಲಿನೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಚಿತ್ರೇ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಹಾನಿತ್ಯೇ ದೇವ್ಯೈ ನಮಃ

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ।**

**ಶ್ರೀ ಗುರುಪರಂಪರೆಗೆ ವಂದನೆಗಳು.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಪರಮೇಶ್ವರಪರಮೇಶ್ವರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಿತ್ರೇಶಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಉಡ್ಡೀಶಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಚರ್ಯಾನಾಥಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಲೋಪಾಮುದ್ರಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅಗಸ್ತ್ಯಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕಾಲತಾಪಶಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಧರ್ಮಾಚಾರ್ಯಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮುಕ್ತಕೇಶೀಶ್ವರಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ದೀಪಕಲಾನಾಥಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ವಿಷ್ಣುದೇವಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಪ್ರಭಾಕರದೇವಮಯೀ ದೇವ್ಯೈ ನಮಃ

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ತೇಜೋದೇವಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಮನೋಜದೇವಮಯಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಕಳ್ಯಾಣದೇವಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ವಾಸುದೇವಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ರತ್ನದೇವಮಯೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಶ್ರೀರಾಮಾನಂದಮಯೀ ದೇವ್ಯೈ ನಮಃ

## ಪ್ರಥಮಾವರಣ

**ಕಮಲಾಂಬಾ ಸಂರಕ್ಷತು ಮಾಂ ಶ್ರೀ ಹೃತ್ ಕಮಲಾನಗರ ನಿವಾಸಿನಿ।**
**ಸುಮನ ಸಾರಾಧಿತಾಬ್ಜಮುಖೀ ಸುಂದರ ಮನಃ ಪ್ರಿಯಕರ ಸಖೀ।**
**ಕಮಲಜಾನಂದ ಭೋದಸುಖೀ ಕಾಂತಾತಾರ ಪಂಜರ ಶುಕೀ।**
**ತ್ರಿಪುರಾದಿ ಚಕ್ರೇಶ್ವರೀ ಅಣಿಮಾದಿ ಸಿದ್ಧೀಶ್ವರೀ ನಿತ್ಯಕಾಮೇಶ್ವರೀ।**
**ಕ್ಷಿತಿಪುರ ತ್ರೈಲೊಕ್ಯ ಮೋಹನ ಚಕ್ರವರ್ತಿನೀ ಪ್ರಕಟ ಯೋಗಿನೀ।**
**ಸುರರಿಪು ಮಹಿಷಾಸುರಾದಿಮರ್ದಿನೀ ನಿಗಮ ಪುರಾಣಾದಿ ಸಂವೇದಿನೀ।**
**ತ್ರಿಪುರೇಶೀ ಗುರುಗುಹ ಜನನೀ ತ್ರಿಪುರ ಭಂಜನ ರಂಜನೀ।**
**ಮಧುರಿಪು ಸಹೋದರೀ ತಲೋದರೀ ತ್ರಿಪುರಸುಂದರೀ ಮಹೇಶ್ವರೀ।**

ಭೂಪುರವೆಂಬ ಮೂರು ಲೋಕಗಳಿಗೂ ಮೋಹನ ರೂಪಳಾದ ಸಾಮ್ರಾಜ್ಞಿಯ ತ್ರೈಲೋಕ್ಯ ಮೋಹನ ಚಕ್ರ ಪ್ರಥಮಾವರಣ. ಯೋಗಿನಿ ಗಣ ಪ್ರಕಟಯೋಗಿನಿ, ಚಕ್ರೇಶ್ವರಿ, ತ್ರಿಪುರೆ. ಇದರಲ್ಲಿ ಮೂರು ಕ್ಷಿತಿಪುರಗಳು ಇವೆ.

**ಪ್ರಥಮ ಕ್ಷಿತಿಪುರದಲ್ಲಿರುವ ಸಿದ್ಧಿದೇವತೆಗಳಿಗೆ ಪ್ರಣತಿ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಅಣಿಮಾಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಲಘಿಮಾಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಗರಿಮಾಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಮಹಿಮಾಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಈಶಿತ್ವಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ವಶಿತ್ವಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಪ್ರಾಕಾಮ್ಯಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಭುಕ್ತಿಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಇಚ್ಛಾಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಪ್ರಾಪ್ತಿಸಿದ್ಧ್ಯಾಂಬಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ  ಸರ್ವಕಾಮಸಿದ್ಧ್ಯಾಂಬಾಯೈ ನಮಃ

**ದ್ವಿತೀಯ  ಕ್ಷಿತಿಪುರದಲ್ಲಿರುವ ಅಷ್ಟ ಮಾತೃಕೆಯರಿಗೆ ನಮನ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಬ್ರಾಹ್ಮೀ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಮಾಹೇಶ್ವರೀ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಕೌಮಾರಿ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀವೈಷ್ಣವೀ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀವಾರಾಹೀ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಮಾಹೇಂದ್ರೀ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಚಾಮುಂಡೇ ಮಾತೃಕಾಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀಮಹಾಲಕ್ಷ್ಮೀ ಮಾತೃಕಾಯೈ ನಮಃ

**ತೃತೀಯ ಕ್ಷಿತಿಪುರದಲ್ಲಿರುವ ಮುದ್ರಾ ದೇವತೆಯರಿಗೆ ವಂದನೆ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಂಕ್ಷೋಭಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವಿದ್ರಾವಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾಕರ್ಷಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವಶಂಕರಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವೋನ್ಮಾದಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಮಹಾಂಕುಶ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಖೇಚರಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಬೀಜ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಯೋನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವತ್ರಿಖಂಡ ದೇವ್ಯೈ ನಮಃ

**ಪ್ರಥಮಾವರಣದ ತ್ರೈಲೋಕ್ಯಮೋಹನ ಚಕ್ರವರ್ತಿನಿ, ತ್ರಿಪುರೇ, ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ದ್ವಿತೀಯಾವರಣ

**ಕಮಲಾಂಬಾಂ ಭಜರೇ ರೇ ಮಾನಸ ಕಲ್ಪಿತ ಮಾಯಾ ಕಾರ್ಯಂ ತ್ಯಜರೇ।**
**ಕಮಲಾವಾಣೀ ಸೇವಿತ ಪಾರ್ಶ್ವಾಂ ಕಂಬುಜಯ ಗ್ರೀವಾಂ ನತದೇವಾಂ।**
**ಕಮಲಾಪುರ ಸದನಾಂ ಮೃದುಗದನಾಂ ಕಮನೀಯ ರದನಾಂ ಕಮಲ ವದನಾಂ।**
**ಸರ್ವಾಶಾಪರಿಪೂರಕ ಚಕ್ರಸ್ವಾಮಿನೀಂ ಪರಮಶಿವಕಾಮಿನೀಂ।**
**ದೂರ್ವಾಸಾರ್ಚಿತ ಗುಪ್ತಯೋಗಿನೀಂ ದುಃಖಧ್ವಂಸಿನೀಂ ಹಂಸಿನೀಂ।**
**ನಿರ್ವಾಣ ನಿಜಸುಖ ಪ್ರದಾಯಿನೀಂ ನಿತ್ಯಕಲ್ಯಾಣೀಂ ಕಾತ್ಯಾಯಿನೀಂ।**
**ಶರ್ವಾಣೀಂ ಮಧುಪ ವಿಜಯ ವೇಣೀಂ ಸದ್ಗುರುಗುಹ ಜನನೀಂ ನಿರಂಜನೀಂ।**
**ಗರ್ವಿತ ಭಂಡಾಸುರ ಭಂಜನೀಂ ಕಾಮಾಕರ್ಷಿಣ್ಯಾದಿ ರಂಜನೀಂ।**

**ನಿರ್ವಿಶೇಷ ಚೈತನ್ಯ ರೂಪಿಣೀಂ ಉರ್ವೀ ತತ್ವಾದಿ ಸ್ವರೂಪಿಣೀಂ।**

ಷೋಡಶದಳದ ದ್ವಿತೀಯಾವರಣಕ್ಕೆ ಸರ್ವಶಾ ಪರಿಪೂರಕ ಚಕ್ರ ಎಂದು ಹೆಸರು. ಇದಕ್ಕೆ ತ್ರಿಪುರೇಶಿ ಎಂಬುವಳು ಚಕ್ರವರ್ತಿನಿ. ಯೋಗಿನಿ ಗುಪ್ತಯೋಗಿನಿ. ಜೀವನ ಸ್ವಪ್ನಾವಸ್ಥೆಯನ್ನೂ, ಸೂಕ್ಷ್ಮ ಶರೀರವನ್ನೂ, ಅದರಲ್ಲಿ ಹೊಂದುವ ಅನುಭವವನ್ನೂ ಈ ಆವರಣ ಸೂಚಿಸುತ್ತದೆ. ಐದು ಪ್ರಾಣ, ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ ಮತ್ತು ಮನಸ್ಸು ಎಂಬುವುಗಳೇ ಇದರಲ್ಲಿರುವ ಹದಿನಾರು ದಳಗಳು.

**ಈಗ ದ್ವಿತೀಯಾವರಣದಲ್ಲಿರುವ ಶಕ್ತಿ ದೇವತೆಯರಿಗೆ ವಂದನೆ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕಾಮಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಬುದ್ಧ್ಯಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅಹಂಕಾರಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶಬ್ದಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸ್ಪರ್ಶಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ರೂಪಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ರಸಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಗಂಧಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಚಿತ್ತಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಧೈರ್ಯಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸ್ಮೃತ್ಯಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ನಾಮಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಬೀಜಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಆತ್ಮಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅಮೃತಾಕರ್ಷಿಣಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶರೀರಾಕರ್ಷಿಣಿ ಶಕ್ತ್ಯೈ ನಮಃ

**ದ್ವಿತೀಯಾವರಣ ಸರ್ವಶಾ ಪರಿಪೂರಕ ಚಕ್ರೇಶ್ವರಿ ತ್ರಿಪುರೇಶಿ, ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ತೃತೀಯಾವರಣ

**ಶ್ರೀ ಕಮಲಾಂಬಿಕಯಾ ಕಟಾಕ್ಷಿತೋಹಂ ಸಚ್ಚಿದಾನಂದ ಪರಿಪೂರ್ಣ ಬ್ರಹ್ಮಾಸ್ಮಿ।**
**ಪಾಕಶಾಸನಾದಿ ಸಕಲ ದೇವತಾ ಸೇವಿತಯಾ ಪಂಕಜಾಸನಾದಿ ಪಂಚಕೃತ್ಯ ಕೃದ್ಭಾವಿತಯಾ।**
**ಶೋಕಹರ ಚತುರಪದಯಾ ಮೂಕಮುಖ್ಯ ವಾಕ್ಪ್ರದಯಾ ಕೋಕನದ ವಿಜಯ ಪದಯಾ ಗುರುಗುಹ ತತ್ಪೈಪದಯಾ।**
**ಅನಂಗ ಕುಸುಮಾದ್ಯಷ್ಟಶಕ್ತ್ಯಾಕಾರಯಾ ಅರುಣವರ್ಣ ಸಂಕ್ಷೋಭಣ ಚಕ್ರಾಗಾರಯಾ।**

**ಅನಂತ ಕೋಟ್ಯಂಡನಾಯಕ ಶಂಕರನಾಯಿಕಯಾ ಅಷ್ಟವರ್ಗಾತ್ಮಕ ಗುಪ್ತತರಯಾ ಪರಯಾ।**
**ಅನಂಗಾದ್ಯುಪಾಸಿತಯಾ ಅಷ್ಟದಲಾಬ್ಜಸ್ಥಿತಯಾ ಧನುರ್ಬಾಣ ಧರಕರಯಾ ದಯಾಸುಧಾ ಸಾಗರಯಾ।**

ತೃತೀಯಾವರಣ ಅಷ್ಟದಳದ ಸರ್ವಸಂಕ್ಷೋಭಣ ಚಕ್ರ. ಇದರ ಚಕ್ರೇಶ್ವರಿ ತ್ರಿಪುರಸುಂದರಿ. ಯೋಗಿನಿ, ಅನಂಗಾದಿ ಶಕ್ತಿಯೂ ಆದ ಗುಪ್ತತರ ಯೋಗಿನಿ.

**ಈಗ ತೃತೀಯಾವರಣದಲ್ಲಿರುವ ಶ್ರೀದೇವಿಯ ಪಾಶ, ಅಂಕುಶ, ಧನಸ್ಸು ಮತ್ತು ಐದು ಬಾಣಗಳು ಎಂಬ ಶಕ್ತಿ ಸಮೂಹದ ದೇವತೆಯರಿಗೆ ಪ್ರಣತಿ .**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಕುಸುಮ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಮೇಖಲ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಮದನ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಮದನಾತುರ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗರೇಖ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗವೇಗಿನಿ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಾಂಕುಶ ಶಕ್ತ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅನಂಗಮಾಲಿನಿ ಶಕ್ತ್ಯೈ ನಮಃ

**ತೃತೀಯಾವರಣದ ಅಷ್ಟದಳಾಬ್ಜ ಚಕ್ರೇಶ್ವರಿ ತ್ರಿಪುರಸುಂದರ್ಯೈ, ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ಚತುರ್ಥಾವರಣ

**ಕಮಲಾಂಬಿಕಾಯೈ ಕನಕಾಂಶುಕಾಯೈ ಕರ್ಪೂರವೀಟಿಕಾಯೈ ನಮಸ್ತೇ ನಮಸ್ತೇ।**
**ಕಮಲಾಕಾಂತಾನುಜಾಯೈ ಕಾಮೇಶ್ವರ್ಯೈ ಅಜಾಯೈ ಹಿಮಗಿರಿ ತನೂಜಾಯೈ ಹೀಂಕಾರ ಪೂಜ್ಯಾಯೈ।**
**ಕಮಲಾನಗರ ವಿಹಾರಿಣ್ಯೈ ಖಳಸಮೂಹ ಸಂಹಾರಿಣ್ಯೈ ಕಮನೀಯ ರತ್ನಹಾರಿಣ್ಯೈ ಕಲಿಕಲ್ಮಶ ಪರಿಹಾರಿಣ್ಯೈ।**
**ಸಕಲ ಸೌಭಾಗ್ಯದಾಯ ಕಾಂಭೋಜ ಚರಣಾಯೈ ಸಂಕ್ಷೋಭಿನ್ಯಾದಿ ಶಕ್ತಿಯುತ ಚತುರ್ಥಾವರಣಾಯೈ।**
**ಪ್ರಕಟ ಚತುರ್ದಶ ಭುವನಭರಣಾಯೈ ಪ್ರಬಲ ಗುರುಗುಹ ಸಂಪ್ರದಾಯಾಂತಃಕರಣಾಯೈ।**
**ಅಕಳಂಕರೂಪವರ್ಣಾಯೈ ಅಪರ್ಣಾಯೈ ಸುಪರ್ಣಾಯೈ ಸುಕರಧೃತಚಾಪಬಾಣಾಯೈ।**
**ಶೋಭನಕರಮನುಕೋಣಾಯೈ ಸಕುಂಕುಮಾದಿಲೇಪನಾಯೈ ಚರಾಚರಾದಿಕಲ್ಪನಾಯೈ।**
**ಚಿಕುರ ವಿಜಿತ ನೀಲ ಘನಾಯೈ ಚಿದಾನಂದ ಪೂರ್ಣ ಘನಾಯೈ।**

ಚತುರ್ಥಾವರಣದಲ್ಲಿ ಹದಿನಾಲ್ಕು ತ್ರಿಕೋನಗಳಿವೆ. ಇದಕ್ಕೆ ಸರ್ವಸೌಭಾಗ್ಯದಾಯಕ ಚಕ್ರ ಎಂದು ಹೆಸರು. ಚಕ್ರೇಶ್ವರಿ ತ್ರಿಪುರವಾಸಿನಿ. ಈ ಆವರಣಕ್ಕೆ ಸಂಪ್ರದಾಯ ಯೋಗಿನಿಯು ಚಿಚ್ಚಕ್ತಿ. ಪರಮೇಶ್ವರನು ಅರ್ಚಿಸುವವರಿಗೆ ತಾನಾಗಿಯೋ, ಗುರುಮುಖೇನವೋ, ಜ್ಞಾನಪ್ರದಾನ ಮಾಡುವುದರಿಂದ ಸಂಪ್ರದಾಯ ಎಂದು ಹೆಸರು ಬಂದಿದೆ.

ಆದಿಗುರುವೂ, ಜಗತ್ಕಾರಣನೂ ಆದ ಪರಮೇಶ್ವರನು ಹದಿನಾಲ್ಕು ಲೋಕಗಳನ್ನೂ ವ್ಯಾಪಿಸಿಕೊಂಡಿದ್ದಾನೆಂಬುದನ್ನು ಈ ಆವರಣವು ತಿಳಿಸುತ್ತದೆ. ಹೀಗೆ ತಿಳಿಯುವುದೇ ಸೌಭಾಗ್ಯವಾದುದರಿಂದ, ಈ ಚಕ್ರಕ್ಕೆ ಸರ್ವಸೌಭಾಗ್ಯದಾಯಕ ಚಕ್ರ ಎಂಬ ಹೆಸರು ಬಂದಿದೆ.

**<u>ಹದಿನಾಲ್ಕು ಲೋಕಗಳನ್ನು ಪೋಷಿಸುವ ಚತುರ್ಥಾವರ್ಣದಲ್ಲಿರುವ ದಿವ್ಯ ಶಕ್ತಿ ದೇವತೆಯರಿಗೆ ನಮಸ್ಕಾರ.</u>**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಂಕ್ಷೋಭಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವಿದ್ರಾವಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾಕರ್ಷಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಹ್ಲಾದಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಮ್ಮೋಹಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸ್ತಂಭಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವ ಜೃಂಭಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವಶಂಕರಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವರಂಜನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವೋನ್ಮಾದಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾರ್ಥಸಾಧಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಂಪತ್ತಿಪೂರಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಮಂತ್ರಮಯಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವದ್ವಂದ್ವಕ್ಷಯಂಕರಿ ದೇವ್ಯೈ ನಮಃ

**ಚತುರ್ಥಾವರಣದ ಮಂಗಳವನ್ನುಂಟುಮಾಡುವ ಚಕ್ರೇಶ್ವರಿ ತ್ರಿಪುರವಾಸಿನ್ಯೈ ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ಪಂಚಮಾವರಣ

**ಶ್ರೀ ಕಮಲಾಂಬಾಯಾಃ ಪರಂ ನಹಿರೇ ರೇ ಚಿತ್ತಾ ಕ್ಷಿತ್ಯಾದಿ ಶಿವಾಂತ ತತ್ವ ಸ್ವರೂಪಿಣ್ಯಾಃ।**
**ಶ್ರೀಕಂಠ ವಿಷ್ಣು ವಿರಿಂಚ್ಯಾದಿ ಜನಯಿತ್ರ್ಯಾಃ ಶಿವಾತ್ಮಕ ವಿಶ್ವಕತ್ರ್ಯಾಃ ಕಾರಯಿತ್ರ್ಯಾಃ ।**
**ಶ್ರೀಕರ ಬಹಿರ್ದಶಾರಚಕ್ರಸ್ಥಿತ್ಯಾ ಸ್ಸೇವಿತ ಭೈರವೀ ಭಾರ್ಗವೀ ಭಾರತ್ಯಾಃ।**
**ನಾದಮಯ ಸೂಕ್ಷ್ಮರೂಪ ಸರ್ವಸಿದ್ಧಿಪ್ರದಾದಿ ದಶಶಕ್ತ್ಯಾರಾಧಿತ ಮೂರ್ತೇಃ।**
**ಶ್ರೋತ್ರಾದಿ ದಶಕರಣಾತ್ಮಕ ಕುಳಕೌಳಿಕಾದಿ ಬಹುವಿಧೋಪಾಸಿತ ಕೀರ್ತೇಃ।**
**ಅಭೇದ ನಿತ್ಯ ಶುದ್ಧ ಬುದ್ಧ ಮುಕ್ತ ಸಚ್ಚಿದಾನಂದಮಯ ಪರಮಾದ್ವೈತ ಸ್ಫೂರ್ತೇಃ।**
**ಆದಿಮಧ್ಯಾಂತರಹಿತಾ ಪ್ರಮೇಯ ಗುರುಗುಹ ಮೋದಿತ ಸರ್ವಾರ್ಥಸಾಧಕಪೂರ್ತೇಃ।**
**ಮೂಲಾದಿ ನವಾಧಾರವ್ಯಾವೃತ್ತ ದಶಧ್ವನಿ ಭೇದಜ್ಞ ಯೋಗಿಬೃಂದ ಸಂರಕ್ಷಣ್ಯಾಃ।**

**ಅನಾದಿ ಮಾಯಾವಿದ್ಯಾ ಕಾರ್ಯಕಾರಣ ವಿನೋದಕರಣ ಪಟುತರ ಕಟಾಕ್ಷ ವೀಕ್ಷಣ್ಯಾಃ।**

ಪಂಚಮಾವರಣಕ್ಕೆ ಹತ್ತು ತ್ರಿಕೋನಗಳಿವೆ. ಸರ್ವಾರ್ಥಸಾಧಕ ಚಕ್ರ ಎಂದು ಹೆಸರು. ಈ ಬಹಿರ್ದಶಾರ ಚಕ್ರೇಶ್ವರಿ, ತ್ರಿಪುರಾಶ್ರೀ. ಇದರಲ್ಲಿರುವ ಶಕ್ತಿಗೆ ಕುಲೋತ್ತೀರ್ಣ ಯೋಗಿನಿ ಎಂದು ಹೆಸರು. ಕುಲ ಎಂದರೆ ಜ್ಞಾನ ಪರಂಪರೆ. ಉತ್ತೀರ್ಣ ಎಂದರೆ ವೃದ್ಧಿಪಡಿಸುವುದು ಎಂದರ್ಥ. ಅಂದರೆ, ಸದ್ಗುರು ಲಾಭವೂ, ಗುರುಶಿಷ್ಯ ಪರಂಪರೆಯ ಅಭಿವೃದ್ಧಿಯೂ, ಈ ಚಕ್ರದ ಉಪಾಸನೆಯ ಶ್ರೇಷ್ಠಫಲ. ಇದೇ ಪರಮ ಪುರುಷಾರ್ಥವನ್ನು ಕರುಣಿಸುವುದರಿಂದ ಸರ್ವಾರ್ಥಸಾಧಕ ಚಕ್ರ ಎಂದು ಹೆಸರು.

**ಪಂಚಮಾವರಣದಲ್ಲಿ ನೆಲೆಸಿರುವ ದಶಶಕ್ತ್ಯಾ ದೇವತೆಗಳಿಗೆ ನಮನ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಿದ್ಧಿಪ್ರದ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸಂಪತ್ಪ್ರದ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಪ್ರಿಯಂಕರಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಮಂಗಳಕಾರಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಕಾಮಪ್ರದ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವದುಃಖವಿಮೋಚನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಮೃತ್ಯುಪ್ರಶಮನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವಿಘ್ನನಿವಾರಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾಂಗಸುಂದರಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಸೌಭಾಗ್ಯದಾಯಿನಿ ದೇವ್ಯೈ ನಮಃ

**ಬಹಿರ್ದಶಾರ ಪಂಚಮಾವರಣ ಚಕ್ರಸ್ಥಿತ್ಯಾ ತ್ರಿಪುರಾಶ್ರೀಯೈ ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ಷಷ್ಠ್ಯಾವರಣ

**ಕಮಲಾಂಬಿಕಾಯಾಸ್ತವ ಭಕ್ತೋಹಂ ಶಂಕರ್ಯಾಃ ಶ್ರೀಕರ್ಯಾಃ ಸಂಗೀತರಸಿಕಾಯಾಃ।**
**ಸುಮಶರೇಕ್ಷುಕೋದಂಡ ಪಾಶಾಂಕುಶಪಾಣ್ಯಾಃ ಅತಿಮಧುರತರವಾಣ್ಯಾಃ ಶರ್ವಾಣ್ಯಾಃ ಕಲ್ಯಾಣ್ಯಾಃ।**
**ರಮಣೀಯ ಪುನ್ನಾಗವರಾಳಿ ವಿಜಿತ ವೇಣ್ಯಾಃ ಶ್ರೀ।**
**ದಶಕಲಾತ್ಮಕ ವಹ್ನಿಸ್ವರೂಪ ಪ್ರಕಾಶಾಂತರ್ದಶಾರ ಸರ್ವರಕ್ಷಾಕರ ಚಕ್ರೇಶ್ವರ್ಯಾಃ।**
**ತ್ರಿದಶಾದಿನುತ ಕಚವರ್ಗದ್ವಯಮಯ ಸರ್ವಜ್ಞಾದಿ ದಶಶಕ್ತಿಸಮೇತ ಮಾಲಿನೀ ಚಕ್ರೇಶ್ವರ್ಯಾಃ।**
**ತ್ರಿದಶವಿಂಶದ್ವರ್ಣಗರ್ಭಿಣೀ ಕುಂಡಲಿನ್ಯಾಃ ದಶಮುದ್ರ ಸಮಾರಾಧಿತ ಕೌಳಿನ್ಯಾಃ।**
**ದಶರಥಾದಿನುತ ಗುರುಗುಹ ಜನಕ ಶಿವಭೋದಿನ್ಯಾಃ ದಶಕರಣವೃತ್ತಿ ಮರೀಚಿ ನಿಗರ್ಭ ಯೋಗಿನ್ಯಾಃ ಶ್ರೀ।**

ಷಷ್ಠ್ಯಾವರಣದಲ್ಲೂ ಹತ್ತು ತ್ರಿಕೋನಗಳಿವೆ. ಇದು ಅಂತರ್ದಶಾರ ಚಕ್ರ. ಇದಕ್ಕೆ ಸರ್ವರಕ್ಷಾಕರ ಚಕ್ರವೆಂದು ಹೆಸರು. ಇದರ ಚಕ್ರೇಶ್ವರಿ, ತ್ರಿಪುರಮಾಲಿನಿ. ಈ ಚಕ್ರದ ಚಿಚ್ಚಕ್ತಿಗೆ ನಿಗರ್ಭಯೋಗಿನಿ ಎಂದು ಹೆಸರು. ಹೃದಯ ಗುಹೆಯಲ್ಲಿ

ರಹಸ್ಯವಾಗಿ ವಾಸವಾಗಿರುವುದರಿಂದ ಈ ಹೆಸರು ಬಂದಿದೆ. ಪಂಚ ಜ್ಞಾನೇಂದ್ರಿಯಗಳನ್ನೂ, ಪಂಚ ಕರ್ಮೇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟು, ಜೀವವನ್ನು ನಿರ್ಜರ ಸ್ವರೂಪದಲ್ಲಿರಿಸಿ, ಪುನಃ ದ್ವೈತ ಭಾವನೆ ಬರದಂತೆ ಕಾಪಾಡುವುದರಿಂದ "ಸರ್ವರಕ್ಷಾಕರ" ಚಕ್ರವೆಂಬ ಹೆಸರು ಬಂದಿದೆ.

**ಷಷ್ಠ್ಯಾವರಣದಲ್ಲಿ ವಿರಾಜಿಸುತ್ತಿರುವ ದಶ ದೈವೀ ಶಕ್ತಿಗಳಿಗೆ ಪ್ರಣತಿ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಜ್ಞ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಶಕ್ತ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವೈಶ್ವರ್ಯಪ್ರದಾಯಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಜ್ಞಾನಮಯಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವವ್ಯಾಧಿವಿನಾಶಿನಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾಧಾರಸ್ವರೂಪ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಪಾಪಹರ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವಾನಂದಮಯಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವರಕ್ಷಾಸ್ವರೂಪಿಣಿ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವೇಪ್ಸಿತಫಲಪ್ರದ ದೇವ್ಯೈ ನಮಃ

ಷಷ್ಠ್ಯಾವರಣದ ಅಂತರ್ದಶಾರ ಸರ್ವರಕ್ಷಾಕರ ಚಕ್ರೇಶ್ವರಿ ತ್ರಿಪುರಮಾಲಿನ್ಯೈ ನಮಸ್ತೇ ನಮಸ್ತೇ ನಮಸ್ತೇ ನಮಃ.
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ಸಪ್ತಮಾವರಣ

**ಶ್ರೀ ಕಮಲಾಂಬಿಕಾಯಾಂ ಭಕ್ತಿಂಕರೋಮಿ ಶೃತಕಲ್ಪವಾಟಿಕಾಯಾಂ ಚಂಡಿಕಾಯಾಂ ಜಗದಾಂಬಿಕಾಯಾಂ।**
**ರಾಕಾಚಂದ್ರವದನಾಯಾಂ ರಾಜೀವನಯನಾಯಾಂ ಪಾಕಾರಿನುತಚರಣಾಯಾಂ ಆಕಾಶಾದಿ ಕಿರಣಾಯಾಂ।**
**ಹೀಂಕಾರ ವಿಪಿನಹರಿಣ್ಯಾಂ ಹೀಂಕಾರ ಸುಶರೀರಿಣ್ಯಾಂ ಹೀಂಕಾರ ತರುಮಂಜರ್ಯಾಂ ಹೀಂಕಾರೀಶ್ವರ್ಯಾಂ ಗೌರ್ಯಾಂ।**
**ಶರೀರತ್ರಯವಿಲಕ್ಷಣ ಸುಖತರ ಸ್ವಾತ್ಮಾನುಭೋಗಿನ್ಯಾಂ ವಿರಿಂಚಿಹರೀಶಾನ ಹರಿಹಯವೇದಿತ ರಹಸ್ಯಯೋಗಿನ್ಯಾಂ।**
**ಪರಾದಿವಾಗ್ದೇವತಾ ರೂಪವಶಿನ್ಯಾದಿ ವಿಭಾಗಿನ್ಯಾಂ ಚರಾತ್ಮಕ ಸರ್ವರೋಗಹರ ನಿರಾಮಯ ರಾಜಯೋಗಿನ್ಯಾಂ।**
**ಕರಧೃತ ವೀಣಾವಾದಿನ್ಯಾಂ ಕಮಲಾನಗರ ವಿನೋದಿನ್ಯಾಂ ಸುರನರಮುನಿಜನ ಮೋದಿನ್ಯಾಂ ಗುರುಗುಹವರಪ್ರಸಾದಿನ್ಯಾಂ।**

ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ವಿಧವಾದ ಶರೀರಗಳಿಗಿಂತಲೂ ಬೇರೆಯಾದ, ಸುಖ ಸ್ವರೂಪದ ಆಹ್ಲಾದವನ್ನು ಅನುಭವಿಸುವ, ಬ್ರಹ್ಮ, ವಿಷ್ಣು, ಶಿವ ಮತ್ತು ಇಂದ್ರಾದಿಗಳಿಂದ ತಿಳಿಯಲ್ಪಟ್ಟ "ರಹಸ್ಯ ಯೋಗಿನಿ" ಶಕ್ತಿಯಾದ, ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ವಾಗ್ದೇವತಾ ಸ್ವರೂಪರಾದ, ವಶಿನಿ, ಕಾಮೇಶ್ವರಿ, ಮೋದಿನಿ, ವಿಮಲ, ಅರುಣ, ಜಯಿನಿ, ಸರ್ವೇಶಿ, ಕೌಲಿನಿ ಎಂಬ ಶಕ್ತಿಗಳಿಂದ ಸುತ್ತುವರೆಯಲ್ಪಟ್ಟ, ಸ್ಥಾವರ ಜಂಗಮ ರೂಪವಾದ, ಈ ಪ್ರಪಂಚವನ್ನು ಪೀಡಿಸುವ ಸಂಸಾರವೆಂಬ ರೋಗವನ್ನು ಕಳೆಯುವ ಸರ್ವರೋಗಹರ ಅಷ್ಟಕೋಣ ಚಕ್ರ ಸಪ್ತಮಾವರಣ. ಇದರ ಚಕ್ರೇಶ್ವರಿ ತ್ರಿಪುರಸಿದ್ಧಾ.

**ಸಪ್ತಮಾವರಣದಲ್ಲಿ ನೆಲೆಸಿರುವ ವಶಿನ್ಯಾದಿ ವಾಗ್ದೇವತಾ ದೇವಿಯರಿಗೆ ನಮನ.**

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ವಶಿನಿ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕಾಮೇಶ್ವರಿ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮೋದಿನಿ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ವಿಮಲ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಅರುಣ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಜಯಿನಿ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಸರ್ವೇಶ್ವರಿ ವಾಗ್ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಕೌಳಿನಿ ವಾಗ್ದೇವ್ಯೈ ನಮಃ

ಸಪ್ತಮಾವರಣ ಸರ್ವರೋಗಹರ ಚಕ್ರೇಶ್ವರಿ ತ್ರಿಪುರಸಿದ್ಧಾಯೈ ನಮಸ್ತೇ ನಮಸ್ತೇ ನಮಸ್ತೇ ನಮಃ.

**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ಅಷ್ಟಮಾವರಣ

**ಶ್ರೀ ಕಮಲಾಂಬಿಕೇಅವಾವ ಶಿವೇ ಕರದೃತ ಶುಕಶಾರಿಕೇ।**
**ಲೋಕಪಾಲಿನಿ ಕಪಾಲಿನಿ ಶೂಲಿನಿ ಲೋಕಜನನಿ ಭಗಮಾಲಿನಿ ಸಕೃದಾಲೋಕಯ ಮಾಂ।**
**ಸರ್ವಸಿದ್ಧಿಪ್ರದಾಯಿಕೇ ತ್ರಿಪುರಾಂಬಿಕೇ ಬಾಲಾಂಬಿಕೇ।**
**ಸಂತಪ್ತ ಹೇಮಸನ್ನಿಭದೇಹೇ ಸದಾ ಖಂಡೈಕ ರಸಪ್ರವಾಹೇ।**
**ಸಂತಾಪಹರ ತ್ರಿಕೋಣಗೇಹೇ ಸಕಾಮೇಶ್ವರೀ ಶಕ್ತಿಸಮೂಹೇ।**
**ಸಂತತಂ ಮುಕ್ತಿ ಘಂಟಾಮಣಿ ಘೋಷಾಯಮಾನ ಕವಾಟ ದ್ವಾರೇ।**
**ಅನಂತ ಗುರುಗುಹವಿದಿತೇ ಕರಾಂಗುಲಿ ನಖೋದಯ ವಿಷ್ಣು ದಶಾವತಾರೇ।**
**ಅಂತಃಕರಣೇಕ್ಷು ಕಾರ್ಮುಕ ಶಬ್ದಾದಿ ಪಂಚತನ್ಮಾತ್ರ ವಿಶಿಖಾದ್ಯಂತ।**
**ರಾಗಪಾಶದ್ವೇಷಾಂಕುಶ ಧರಕರೇತಿ ರಹಸ್ಯ ಯೋಗಿನೀಪರೇ।**

ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕವೆಂಬ ತ್ರಿತಾಪಗಳನ್ನೂ ಹೋಗಲಾಡಿಸುವ ತ್ರಿಕೋಣಾಕಾರದ ಎಲ್ಲ ಸಿದ್ಧಿಗಳನ್ನು ಕೊಡುವ ಸರ್ವಸಿದ್ಧಿಪ್ರದ ಚಕ್ರ ಅಷ್ಟಮಾವರಣ. ಅತಿರಹಸ್ಯ ಯೋಗಿನಿ ಚಿಚ್ಛಕ್ತಿ. ಚಕ್ರೇಶ್ವರಿ ತ್ರಿಪುರಾಂಬಿಕೆ.

**ಅಷ್ಟಮಾವರಣದ ಶಕ್ತಿದೇವಿಯರಿಗೆ ನಮನ.**

ಬಾಣಿನಿ, ಚಾಪಿನಿ, ಪಾಶಿನಿ, ಅಂಕುಶಿನಿ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಹಾಕಾಮೇಶ್ವರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಹಾವಜ್ರೇಶ್ವರೀ ದೇವ್ಯೈ ನಮಃ
ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಮಹಾಭಗಮಾಲಿನೀ ದೇವ್ಯೈ ನಮಃ

**ಅಷ್ಟಮಾವರಣದ ಚಕ್ರಸ್ವಾಮಿನಿ ತ್ರಿಕೋನಗೇಹೇ ತ್ರಿಪುರಾಂಬಿಕಾಯೈ ನಮಸ್ತೇ ನಮಸ್ತೇ ನಮಸ್ತೇ ನಮಃ.**
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

## ನವಮಾವರಣ

**ಶ್ರೀ ಕಮಲಾಂಬಾ ಜಯತಿ ಅಂಬ ಶ್ರೀ ಕಮಲಾಂಬಾ ಜಯತಿ ಜಗದಾಂಬಾ।**
**ಶ್ರೀ ಕಮಲಾಂಬಾ ಜಯತಿ ಶೃಂಗಾರ ರಸ ಕದಂಬಾ ಮದಾಂಬಾ।**
**ಶ್ರೀ ಕಮಲಾಂಬಾ ಜಯತಿ ಚಿದ್ಬಿಂಬ ಪ್ರತಿಬಿಂಬೇಂದು ಬಿಂಬಾ।**
**ಶ್ರೀ ಕಮಲಾಂಬಾ ಜಯತಿ ಶ್ರೀಪುರ ಬಿಂದುಮಧ್ಯಸ್ಥ ಚಿಂತಾಮಣಿ ಮಂದಿರಸ್ಥ ಶಿವಾಕಾರ ಮಂಚಸ್ಥಿತ ಶಿವಕಾಮೇಶಂಕಸ್ಥಾ।**
**ಸುಕರಾನನಾದ್ಯರ್ಚಿತ ಮಹಾತ್ರಿಪುರಸುಂದರೀಂ ರಾಜರಾಜೇಶ್ವರೀಂ।**
**ಶ್ರೀಕರ ಸರ್ವಾನಂದಮಯ ಚಕ್ರವಾಸಿನೀಂ ಸುವಾಸಿನೀಂ ಚಿಂತಯೇಹಂ।**
**ದಿವಾಕರ ಶೀತಕಿರಣ ಪಾವಕಾದಿ ವಿಕಾಸಕರಯಾ ಭೀಕರ ತಾಪತ್ರಯಾದಿ ಭೇದನ ಧುರೀಣ ತರಯಾ।**
**ಪಾಕರಿಪು ಪ್ರಮುಖಾದಿ ಪ್ರಾರ್ಥಿತ ಸುಕಳೇಬರಯಾ ಪ್ರಾಕಟ್ಯ ಪರಾಪರಯಾ ಪಾಲಿತೋದಯಾಕರಯಾ।**
**ಶ್ರೀಮಾತ್ರೇ ನಮಸ್ತೇ ಚಿನ್ಮಾತ್ರೇ ಸೇವಿತರಮಾ ಹರೀಶ ವಿಧಾತ್ರೇ ।**
**ವಾಮಾದಿ ಶಕ್ತಿಪೂಜಿತ ಪರದೇವತಯಾ ಸಕಲಂ ಜಾತಂ ।**
**ಕಾಮಾದಿ ದ್ವಾದಶಭಿರುಪಾಸಿತ ಕಾದಿ ಹಾದಿ ಸಾದಿ ಮಂತ್ರರೂಪಿಣ್ಯಾಃ।**
**ಪ್ರೇಮಾಸ್ಪದ ಶಿವ ಗುರುಗುಹ ಜನನ್ಯಾಃ ಪ್ರೀತಿಯುಕ್ತ ಮಚ್ಚಿತ್ತಂ ವಿಲಯತು।**
**ಬ್ರಹ್ಮಮಾಯಾ ಪ್ರಕಾಶಿನೀ ನಾಮರೂಪ ವಿಮರ್ಶಿನೀ ಕಾಮಕಲಾ ಪ್ರದರ್ಶಿನೀ ಸಾಮರಸ್ಯ ನಿದರ್ಶಿನೀ।**

ಬ್ರಹ್ಮಮಯವಾದ ಜಗತ್ತನ್ನು ಪ್ರಕಾಶಪಡಿಸುವ, ನಾಮರೂಪಕವಾದ ಜಗತ್ತನ್ನು ಉಂಟುಮಾಡುವ, ಶಿವಶಕ್ತಿಗಳ ಏಕರೂಪತೆಯನ್ನು ತೋರುವ, ಒಂಬತ್ತನೆಯ ಆವರಣ, ಸರ್ವಾನಂದಮಯ ಚಕ್ರ. ಇದರ ಚಕ್ರೇಶ್ವರಿ, ಮಹಾತ್ರಿಪುರಸುಂದರೀ. ಸುಷುಪ್ತಿ ರೂಪವಾದ ಮೂರನೇ ಚಕ್ರದ ಅಧೀಶ್ವರೀ ತ್ರಿಪುರಸುಂದರೀ. ಸಮಾಧಿರೂಪವಾದ ಒಂಬತ್ತನೇ ಆವರಣದ ಚಕ್ರೇಶ್ವರಿಯು ಮಹಾತ್ರಿಪುರಸುಂದರೀ ಎಂಬುದೂ ವಿಶೇಷ. ಇದು ಎಲ್ಲಾ ಆನಂದಗಳಿಗೂ ಗಡಿಯಾಗಿರುವುದರಿಂದ ಸರ್ವಾನಂದಮಯ ಚಕ್ರ ಎಂದು ಹೆಸರು. ಇದು ವಾಕ್ಕಿಗೂ, ಮನಸ್ಸಿಗೂ ಎಟುಕದ ಸ್ವರೂಪವಾದ್ದರಿಂದ, ಇದರಲ್ಲಿನ ಚಿಚ್ಛಕ್ತಿಗೆ, ಪರಾಪರ ಯೋಗಿನಿ ಎಂದು ಹೆಸರು. ಶ್ರೀಚಕ್ರದ ಬಿಂದು ಮಧ್ಯದಲ್ಲಿರುವ ಚಿಂತಾಮಣಿ ಗೃಹದಲ್ಲಿ ವಾಸಿಸುವ, ಶಿವರೂಪದ ಮಂಚದಲ್ಲಿರುವ, ಶಿವಕಾಮೇಶ್ವರನ ತೊಡೆಯ ಮೇಲೆ ಕುಳಿತಿರುವ ದೇವಿಯನ್ನು ಶ್ರೀ ಶಂಕರ ಭಗವತ್ಪಾದರು ಸೌಂದರ್ಯಲಹರಿಯಲ್ಲಿ, ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

**ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀಪರಿವೃತೇ ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ।**
**ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಮ್॥**

ಅಮೃತ ಸಮುದ್ರದ ಮಧ್ಯದಲ್ಲಿರುವ ಬಿಂದುಸ್ಥಾನವು, ಕಲ್ಪವೃಕ್ಷಗಳಿಂದ ಆವರಿಸಿರುವ ಮಧ್ಯದಲ್ಲಿನ, ರತ್ನಮಂಟಪದಲ್ಲಿನ, ಚಿಂತಾಮಣಿ ಗೃಹದಲ್ಲಿ, ಶಿವನ ತೊಡೆಯ ಮೇಲೆ ಕುಳಿತಿರುವ ತ್ರಿಪುರಸುಂದರೀ ದೇವಿಯನ್ನು ಆರಾಧಿಸಬೇಕೆಂದು ಹೇಳುತ್ತಾ, ಶಿವ-ಶಕ್ತಿಗಳ ಸಂಯೋಗ ಸ್ಥಾನವಾದ ಶ್ರೀಚಕ್ರದ ಬಿಂದುಸ್ಥಾನವನ್ನು ಧ್ಯಾನಿಸಬೇಕೆನ್ನುತ್ತಾರೆ.

ಓಂ ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಶ್ರೀ ಶ್ರೀ ಮಹಾಭಟ್ಟಾರಿಕಾಯೈ ನಮಃ.

ಆಗ ದೇವಿಯ ದರ್ಶನ ಪಡೆದ ಭಕ್ತರೇ ಧನ್ಯರೆಂದೂ, ಕೃತಪುಣ್ಯರಿಗೆ ಮಾತ್ರ ಅದು ಸಾಧ್ಯವಾಗುತ್ತದೆಂದೂ, ತಿಳಿಸುತ್ತಾರೆ. ಈ ಸ್ಥಿತಿಯು ಪರಮಾನಂದಕರವಾದುದೂ, ಮೋಕ್ಷಪ್ರದವಾದುದೂ ಆಗಿದ್ದು, ದೇವಿಯ ಧ್ಯಾನದಿಂದ ಭಕ್ತನು ಜ್ಞಾನಾನಂದ ಲಹರಿಯಲ್ಲಿ ತೇಲಾಡಬಲ್ಲವನಾಗುತ್ತಾನೆಂದು ತಿಳಿಸುತ್ತಾ, ತ್ರಿಪುರಸುಂದರಿ ನೆಲೆಯನ್ನೂ, ಅದರ ಆರಾಧನಾ ಮಹಿಮೆಯನ್ನೂ ಬಣ್ಣಿಸುತ್ತಾರೆ.

ನಾಮರೂಪ ವಿಮರ್ಶಿನೀ, ಕಾಮಕಲಾ ಪ್ರದರ್ಶಿನೀ, ಸಾಮರಸ್ಯ ನಿದರ್ಶಿನೀ ನವಮಾವರಣದ ಚಕ್ರೇಶ್ವರಿ,
ಮಹಾತ್ರಿಪುರಸುಂದರೀ ನಮಸ್ತೇ ನಮಸ್ತೇ ನಮಸ್ತೇ ನಮಃ
**ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ದೇವೀ, ತುಭ್ಯಂ ನಮೋ ನಮಃ.**

ಕ್ಷಿತಿಪುರ ತ್ರೈಲೋಕ್ಯ ಮೋಹನ ಚಕ್ರವರ್ತಿನೀ, ಸರ್ವಶಾಪರಿಪೂರಕ ಚಕ್ರಸ್ವಾಮಿನೀ, ಅರುಣವರ್ಣ ಸಂಕ್ಷೋಭಣ ಚಕ್ರಗಾರಾ, ಸಕಲ ಸೌಭಾಗ್ಯದಾಯಕ ಅಂಬೋಜಚರಣಾ, ಸರ್ವಸಿದ್ಧಿಪ್ರದಾದಿ ದಶಶಕ್ತ್ಯಾರಾಧಿತ ಮೂರ್ತೇ, ಸರ್ವರಕ್ಷಾಕರ ಚಕ್ರೇಶ್ವರೀ, ಚರಾತ್ಮಕ ಸರ್ವರೋಗಹರ ನಿರಾಮಯ ರಾಜಯೋಗಿನೀ, ಸರ್ವಸಿದ್ಧಿ ಪ್ರದಾಯಿನೀ, ಸರ್ವಾನಂದಮಯ ಚಕ್ರವಾಸಿನಿಯಾದ ಭಗವತಿಯನ್ನು ಯಾರು ಅನನ್ಯ ಪ್ರೀತಿ ಮತ್ತು ಭಕ್ತಿಗಳಿಂದ ಪೂಜಿಸುವರೋ, ಅವರಿಗೆ, ತನ್ನ ತೇಜೋರೂಪವಾದ ಅಮೃತಮಯ ಕಿರಣಗಳಿಂದ, ಅವರೆಲ್ಲರ ಇಷ್ಟಾರ್ಥಗಳನ್ನು ನೆರವೇರಿಸುತ್ತಾ, ಅವರನ್ನು ವಿಜಯಶಾಲಿಗಳನ್ನಾಗಿಸುತ್ತಾ, ಪಾರಲೌಕಿಕವಾದ ಪರಮಾನಂದವನ್ನು ನೀಡುತ್ತಾಳೆಂಬುದು ಶತಃಸಿದ್ಧವಾದುದು. ಆ ಭಗವತಿಯು, ನಮ್ಮೆಲ್ಲರನ್ನೂ ಕಾಪಾಡಲಿ ಎಂಬ ಪ್ರಾರ್ಥನೆಯೊಂದಿಗೆ, ನವಾವರಣ ಮಂಗಳ.

## ನವಾವರಣ ಮಂಗಳ

**ಶ್ರೀ ಕಮಲಾಂಬಿಕೇ ಶಿವೇ ಪಾಹಿಮಾಂ ಲಲಿತೇ ಶ್ರೀಪತಿ ವಿನುತೇ ಸಿತಾಸಿತೇ ಶಿವಸಹಿತೇ।**
**ರಾಕಾಚಂದ್ರಮುಖೀ ರಕ್ಷಿತಾ ಕೋಲಮುಖೀ ರಮಾವಾಣೀ ಸಖೀ ರಾಜಯೋಗಸುಖೀ।**
**ಶಾಕಂಬರಿ ಶಾತೋದರಿ ಚಂದ್ರಕಲಾಧರಿ ಶಂಕರಿ ಶಂಕರ ಗುರುಗುಹ ಭಕ್ತವಶಂಕರಿ।**
**ಏಕಾಕ್ಷರಿ ಭುವನೇಶ್ವರಿ ಈಶಪ್ರಿಯಕರಿ ಶ್ರೀಕರಿ ಸುಖಕರಿ ಶ್ರೀ ಮಹಾತ್ರಿಪುರಸುಂದರಿ।**

ತ್ರಿಪುರೇ, ತ್ರಿಪುರೇಶಿ, ತ್ರಿಪುರಸುಂದರಿ, ತ್ರಿಪುರವಾಸಿನಿ, ತ್ರಿಪುರಾ ಶ್ರೀಃ, ತ್ರಿಪುರಮಾಲಿನಿ, ತ್ರಿಪುರಾಸಿದ್ಧೇ, ತ್ರಿಪುರಾಂಬಾ,
ಮಹಾತ್ರಿಪುರಸುಂದರಿ, ಮಹಾಮಹೇಶ್ವರೀ, ಮಹಾಮಹಾರಾಜ್ಞೆ, ಮಹಾಮಹಾಶಕ್ತೇ, ಮಹಾಮಹಾಗುಪ್ತೇ,
ಮಹಾಮಹಾಜ್ಞಪ್ತೇ, ಮಹಾಮಹಾನಂದೇ, ಮಹಾಮಹಾಸ್ಕಂದೇ, ಮಹಾಮಹಾಶಯೇ,
ಮಹಾಮಹಾ ಶ್ರೀಚಕ್ರನಗರಸಾಮ್ರಾಜ್ಞೆ ನಮಸ್ತೇ ನಮಸ್ತೇ ನಮಸ್ತೇ ನಮಃ.

**॥ಜಗದಂಬಾರ್ಪಣಮಸ್ತು॥**

ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಸಪ್ತಮಾತೃಕಾ ತತ್ತ್ವ

**ಗೌರೀಪುತ್ರ ನಮಸ್ತೇಸ್ತು ಶಂಕರ ಪ್ರಿಯಪುತ್ರಕ। ನಮಸ್ತೇ ದೇವದೇವೇಶ ನಮಸ್ತೇ ಗಣನಾಯಕ॥**

**ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ। ಸರ್ವವಿದ್ಯಾಧಿದೇವೀ ಯಾ ತಸ್ಯೈ ವಾಣ್ಯೈ ನಮೋ ನಮಃ॥**

**ಸದಾಹಂ ಸಂಪ್ರದಾಯಜ್ಞಂ ಸಂಯಮೀಂದ್ರಂ ಸದಾಶ್ರಯಂ। ಸದ್ಗುರುಂ ಸಚ್ಚಿದಾನಂದಂ ಸದಾಚಾರ್ಯಂ ಸಮಾಶ್ರಯೇ॥**

**ಮಂತ್ರಾಣಾಂ ಮಾತೃಕಾ ದೇವೀ ಶಬ್ದಾನಾಂ ಜ್ಞಾನರೂಪಿಣೀ। ಜ್ಞಾನಾನಾಂ ಚಿನ್ಮಯಾನಂದಾ ಶೂನ್ಯಾನಾಂ ಶೂನ್ಯಸಾಕ್ಷಿಣೀ॥**

**ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ। ವಾರಾಹೀ ಚೈವ ಚೇಂದ್ರಾಣೀ ಚಾಮುಂಡಾ ಸಪ್ತಮಾತರಃ॥**

**ಯಾ ತ್ರಯೀ ಮಧ್ಯಗಾದೇವೀ ಯಾ ತ್ರಯಂತೇ ಪ್ರತಿಷ್ಠಿತಾ। ಯಾ ಬ್ರಾಹ್ಮೀ ಪರಮಾಶಕ್ತಿಃ ತಾಂ ವಂದೇ ಸಪ್ತಮಾತೃಕಾಂ॥**

**ಯಾ ವಿಶ್ವಜನನೀ ದೇವೀ ಯಾ ತ್ರಿಮೂರ್ತಿ ಸ್ವರೂಪಿಣೀ। ಯಾ ವರ್ಣರೂಪಾ ಕಲ್ಯಾಣೀ ಯಾಚ ವ್ಯಾಹೃತಿ ರೂಪಿಣೀ।**

**ಗಾಯತ್ರೀ ರೂಪಿಣೀ ಯಾಹಿ ತಾಂ ವಂದೇ ಸಪ್ತಮಾತೃಕಾಂ॥**

**ಓಂಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ। ಕಾಮದಂ ಮೋಕ್ಷದಂ ತಸ್ಮಾದೋಂಕಾರಾಯ ನಮೋ ನಮಃ॥**

ಪರಾಶಕ್ತಿಯಾದ ಓಂಕಾರವು **"ಅ,ಉ,ಮ"** ಎಂಬ ಮೂರು ಮಾತ್ರೆಗಳೆಂದರೆ, ತ್ರಿಮೂರ್ತಿ ಶಕ್ತಿಗಳಾಗಿ ತದನಂತರ ಸಪ್ತಮಾತೃಕಾ ಶಕ್ತಿಗಳಾಗುವುದು. ಆದುದರಿಂದ ಪರಾತ್ಪರ ವಸ್ತುವಾದ ಓಂಕಾರವೇ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ ಎಂಬ ಶಕ್ತಿಯಾಗಿರುವುದು. ಆದುದರಿಂದ ಸಪ್ತಮಾತೃಕಾ ದೇವಿಯರೆಂದರೆ ಈ ಏಳು ಶಕ್ತಿಯೂ ಸೇರಿದ ಬ್ರಾಹ್ಮೀಶಕ್ತಿ, ಎಂದರೇ ಪರಾತ್ಪರ ವಸ್ತುವು. ಈ ಸಪ್ತಮಾತೃಕಾ ಶಕ್ತಿಯೇ ಸಪ್ತವ್ಯಾಹೃತಿ, ಸಪ್ತಸ್ವರ, ಸಪ್ತಲೋಕಗಳ ಮೂಲಕಾರಣವಾದ ಶಕ್ತಿಯಾಗಿಯೂ, ಗಾಯತ್ರೀ ವಿರಾಟ್ ಸ್ವರೂಪದ ಶಕ್ತಿಯಾಗಿಯೂ, ಅಕಾರಾದಿ



ಕ್ಷಕಾರಾಂತವಾಗಿರುವ ವರ್ಣಮಾಲಿಕಾ ರೂಪವಾಗಿಯೂ, ವರ್ಣಗಳಿಗೆಲ್ಲಾ ಮಾತೃರೂಪವಾದ ಶ್ವೇತವರ್ಣದ ರೂಪಿಣಿಯೂ, ಆಗಿರುವುದು. ಈ ಸಪ್ತಮಾತೃಕಾ ಶಕ್ತಿಯು ಜಗತ್ತಿಗೆ ತಾಯಿಯಾಗಿ, ಓಂಕಾರದ ವಿವರಣೆಯಾದ ವೇದವೆನಿಸುವ ನಾದಬ್ರಹ್ಮ ರೂಪವಾಗಿ, ಚರಾಚರ ರೂಪವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನುಂಟು ಮಾಡುವುದು. ಈ ಏಳು ಮಾತೃಕಾ ಶಕ್ತಿಗಳೇ ನಾದಬ್ರಹ್ಮದ ಶಕ್ತಿಗಳಾಗಿ, "ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಂ" ಎಂಬ ಸಪ್ತವ್ಯಾಹೃತಿಗಳೆನಿಸಿಕೊಂಡು, ಲೋಕಗಳ ತತ್ತ್ವವಾಗಿಯೂ, ಭೂತಗಳ ತನ್ಮಾತ್ರಾ

ರೂಪವಾಗಿಯೂ, ಮೂಲಾಧಾರಾದಿ ಚಕ್ರಗಳ ರೂಪವಾಗಿಯೂ, "ಸ,ರಿ,ಗ,ಮ,ಪ,ದ,ನಿ" ಎಂಬ ಸಪ್ತಸ್ವರಗಳ ಸ್ವರೂಪವಾಗಿಯೂ ಇವೆ. ಹೇಗೆಂದರೆ,

| ಸಪ್ತವ್ಯಾಹೃತಿ | ಲೋಕ | ತತ್ತ್ವ | ಚಕ್ರ | ಸಪ್ತಸ್ವರ |
|---|---|---|---|---|
| ಭೂಃ | ಭೂ ಲೋಕ | ಭೂ ತತ್ತ್ವ | ಮೂಲಾಧಾರ ಚಕ್ರ | ನಿ |
| ಭುವಃ | ಭುವ ಲೋಕ | ಜಲ ತತ್ತ್ವ | ಸ್ವಾಧಿಷ್ಠಾನ ಚಕ್ರ | ದ |
| ಸುವಃ | ಸುವರ್ಲೋಕ | ಅಗ್ನಿ ತತ್ತ್ವ | ಮಣಿಪೂರ ಚಕ್ರ | ಪ |
| ಮಹಃ | ಮಹರ್ಲೋಕ | ವಾಯು ತತ್ತ್ವ | ಅನಾಹತ ಚಕ್ರ | ಮ |
| ಜನಃ | ಜನೋಲೋಕ | ಆಕಾಶ ತತ್ತ್ವ | ವಿಶುದ್ಧ ಚಕ್ರ | ಗ |
| ತಪಃ | ತಪೋಲೋಕ | ಅಂತಃಕರಣ ತತ್ತ್ವ | ಆಜ್ಞಾ ಚಕ್ರ | ರಿ |
| ಸತ್ಯಂ | ಸತ್ಯ ಲೋಕ | ಪರಬ್ರಹ್ಮ ತತ್ತ್ವ | ಸಹಸ್ರಾರ ಕಮಲ | ಸ |

ಸೃಷ್ಟಿಕ್ರಮದ ತತ್ವಗಳು "ಸತ್ಯಂ" ಎಂಬುದರಿಂದ ಪ್ರಾರಂಭವಾಗಿ "ಭೂಃ" ಎಂಬುದರವರೆಗೆ ಇಳಿದು ಬಂದಿದೆ. ಮೋಕ್ಷ ಕ್ರಮದಲ್ಲಿ "ಭೂಃ" ತತ್ವದಿಂದ ಪ್ರಾರಂಭವಾಗಿ "ಸತ್ಯಂ" ಎಂಬ ತತ್ವಕ್ಕೆ ಹತ್ತಬೇಕು. ಅಂದರೆ ಧ್ಯಾನ ಮಾಡುವಾಗ ಮನಸ್ಸಿನ ಪ್ರವಾಹವು "ಭೂ" ತತ್ವದಿಂದ ಭುವಃ ಮುಂತಾದ ತತ್ತ್ವಗಳನ್ನು ಒಂದೊಂದಾಗಿ ದಾಟಿ, "ಸತ್ಯಂ" ತತ್ವವಾದ ಪರಬ್ರಹ್ಮನಲ್ಲಿ ಲೀನವಾಗಬೇಕು. ಪರಬ್ರಹ್ಮನಲ್ಲಿ ಮನಸ್ಸು ಲೀನವಾಗಬೇಕಾದರೆ  ಪಂಚಭೂತಗಳಲ್ಲಿನ ಭೂಮಿ, ಜಲ, ತೇಜಸ್ಸು, ವಾಯು, ಆಕಾಶ, ಶಕ್ತಿ ತತ್ತ್ವಗಳನ್ನು ನಮ್ಮಲ್ಲಿಯೇ ನಾವು ದಾಟಿ, ಅನಂತರ ಪರಬ್ರಹ್ಮನಲ್ಲಿ ಲೀನವಾಗಬೇಕು. ಆದುದರಿಂದ ಮನಸ್ಸು, ಇಂದ್ರಿಯಗಳು, ಪಂಚಪ್ರಾಣಗಳು ಪರಬ್ರಹ್ಮನಲ್ಲಿ ಏಕಾಕಾರವಾಗಿ ಲೀನವಾಗುವುದೇ ಪ್ರಾಣಾಯಾಮದ ಅತ್ಯುತ್ತಮವಾದ ಅರ್ಥವಾಗಿಯೂ, ಗಾಯತ್ರೀ ಮಂತ್ರದ ಪ್ರಥಮ ಪಾದದ ತತ್ತ್ವಾರ್ಥವಾಗಿಯೂ ಇರುವುದು. ಪರಮಾತ್ಮನಲ್ಲಿ ಪ್ರಾಣವು ಏಕಾಕಾರವಾಗಿ ಲೀನವಾಗುವುದಕ್ಕೆ ಪ್ರಣವವೆಂದು ಹೆಸರು. ಪ್ರಣವವೆಂದರೂ ಓಂಕಾರವೆಂದರೂ ಒಂದೇ.

**ತತೋ ದೇವೀ ಶರೀರಾತ್ತು ವಿನಿಷ್ಕ್ರಾಂತಾಭೀಷಣಾ। ಚಂಡಿಕಾಶಕ್ತಿರತ್ಯುಗ್ರಾ ಶಿವಾಶತನಿನಾದಿನೀ॥**

ಸ್ವಸ್ತಿಶ್ರೀ ಶುಭಕೃತ್ ನಾಮ ಸಂವತ್ಸರದ ಆಶ್ವಯುಜ ಶುದ್ಧ ಪಾಡ್ಯಮಿಯಂದು ನಮ್ಮ ನಾದಾರ್ಚನೆ ತಂಡ, ವಶಿನ್ಯಾದಿ ವಾಗ್ದೇವತಾ ವಿರಚಿತ ಮಹಾದ್ಭುತ ಲಲಿತಾನಾಮ ಸ್ತೋತ್ರದಲ್ಲಿರುವ ಯೋಗಿನೀ ನ್ಯಾಸ ಮತ್ತು ಶ್ರೀ ಶಂಕರ ಭಗವತ್ಪಾದರ ಸೌಂದರ್ಯಲಹರಿಯ ಸಪ್ತಚಕ್ರವರ್ಣನೆಗಳ ಮೂಲಕ ಸಪ್ತಮಾತೃಕಾ ಶಕ್ತಿ, ಸಪ್ತವ್ಯಾಹೃತಿ, ಸಪ್ತಸ್ವರ, ಸಪ್ತಲೋಕ, ಗಾಯತ್ರೀ ಮಂತ್ರ ಇವುಗಳ ರಹಸ್ಯಾರ್ಥಗಳನ್ನು ಅರಿಯುವ ಒಂದು ಕಿರು ಪ್ರಯತ್ನವನ್ನು ಮಾಡುತ್ತಿದೆ. ಇದು ನಮ್ಮ ದೇಹವೆನ್ನುವ ದೇವಾಲಯದಲ್ಲಿಯೇ ಆ ಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ಒಂದು ಸಾಧನೆಯ ತೊದಲು ಹೆಜ್ಜೆ. ಇದಕ್ಕೆ ಬೇಕಾದುದುದು, "ಭಕ್ತಿ" ಎನ್ನುವ ಠೇವಣಿ, "ಸಾಧನೆ" ಎನ್ನುವ ಯಜ್ಞ, "ಚಿತ್ತಶುದ್ಧಿ" ಎನ್ನುವ ಹೋಮ. ಈ ಹೋಮದ ಸಮಿತ್ತುಗಳಾಗಿ, ಆಜ್ಯವಾಗಿ ನಮ್ಮಲ್ಲಿನ ಅಂತರ್ಗತ ಕೋರಿಕೆಗಳು, ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಸಮರ್ಪಿಸಿದರೆ ಸಾಕು, ಆ ಜಗನ್ಮಾತೆಯು "ರಹೋಯಾಗ ಕ್ರಮಾರಾಧ್ಯ ರಹಸ್ತರ್ಪಣ ತರ್ಪಿತ" ಳಾಗಿ ದರ್ಶನವೀಯುತ್ತಾಳೆ.

## ಈಗ ಸಪ್ತಮಾತೃಕಾ ದರ್ಶನ:





ತತೋ ದೇವೀ ಶರೀರಾತ್ತು ವಿನಿಷ್ಕ್ರಾಂತಾಭೀಷಣಾ।
ಚಂಡಿಕಾಶಕ್ತಿರತ್ಯುಗ್ರಾ ಶಿವಾಶತನಿನಾದಿನೀ॥

ಓಂ ಶ್ರೀ ಚಾಮುಂಡಾ ದೇವತಾಯೈ ನಮಃ॥

ರುದ್ರಭೂತಾಯೈ ವಿದ್ಮಹೇ ಖಡ್ಗಹಸ್ತಾಯೈ ಧೀಮಹೀ
ತನ್ನೋ ಚಾಮುಂಡೀ ಪ್ರಚೋದಯಾತ್॥

ರುದ್ರಭೂತಾಯೈ ವಿದ್ಮಹೇ ಖಡ್ಗಹಸ್ತಾಯೈ ಧೀಮಹೀ
ತನ್ನೋ ಚಾಮುಂಡೀ ಪ್ರಚೋದಯಾತ್॥

ರುದ್ರಭೂತಾಯೈ ವಿದ್ಮಹೇ ಖಡ್ಗಹಸ್ತಾಯೈ ಧೀಮಹೀ
ತನ್ನೋ ಚಾಮುಂಡೀ ಪ್ರಚೋದಯಾತ್॥

ಚಂಡಿಕಾ ಶ್ವೇತವರ್ಣಾ ಸಾ ಶಿವರೂಪಾ ಚ ಸಿಂಹಗಾ। ಜಟಿಲಾ ವರ್ತುಲತ್ರ್ಯಕ್ಷಾ ವರದಾ ಶೂಲಧಾರಿಣೀ।
ಕರ್ತ್ರಿಕಾಂ ಬಿಭ್ರತೀ ದಕ್ಷೇ ಪಾಶಪಾತ್ರ ಭಯಾನ್ವಿತಾ॥

"ಮೂಲಾಧಾರೈಕನಿಲಯಾ ಬ್ರಹ್ಮಗ್ರಂಥಿವಿಭೇದಿನೀ ವಹ್ನಿಮಂಡಲ ವಾಸಿನೀ" , ಮೂಲಾಧಾರ ಚಕ್ರಕ್ಕೆ ಸಪ್ತಮಾತೃಕೆಯರಲ್ಲಿ ಶ್ರೀ ಚಾಮುಂಡೇಶ್ವರಿಯು ಅಧಿದೇವತೆಯು.

**ಮೂಲಾಧಾರಾಂಬುಜಾರೂಢಾ ಪಂಚವಕ್ತ್ರಾಸ್ತಿ ಸಂಸ್ಥಿತಾ। ಅಂಕುಶಾದಿ ಪ್ರಹರಣಾ ವರದಾದಿ ನಿಷೇವಿತಾ॥**

**ಮುದ್ಗೌದನಾಸಕ್ತಚಿತ್ತಾ ಸಾಕಿನ್ಯಂಬಾ ಸ್ವರೂಪಿಣೀ॥**

ಮೂಲಾಧಾರ ಚಕ್ರವು ನಾಲ್ಕು ದಳಗಳುಳ್ಳದ್ದು. ಈ ನಾಲ್ಕು ದಳಗಳು ವ,ಶ,ಷ,ಸ ಎಂಬ ನಾಲ್ಕು ಅಕ್ಷರ ಶಕ್ತಿಗಳಾಗಿವೆ. ಈ ನಾಲ್ಕು ಅಕ್ಷರಗಳಿಗೂ ವರದಾ, ಶ್ರೀ, ಷಂಡಾ, ಸರಸ್ವತಿ ಅಭಿಮಾನ ದೇವತಾ ಶಕ್ತಿಗಳು. ಮೂಲಾಧಾರ ಚಕ್ರವು "ಭೂಃ" ಎಂದರೆ ಪೃಥ್ವೀ ತತ್ವದ್ದು. ಪೃಥ್ವಿಯಲ್ಲಿ ಆಕಾಶದಿಂದ ಉತ್ಪತ್ತಿಯಾಗುವ ಕ್ರಮವನ್ನು ಅನುಸರಿಸಿ, ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಈ ಐದು ತತ್ತ್ವಗಳು ಇರುವುದನ್ನು ಸೂಚಿಸುತ್ತಾ, ಮೂಲಾಧಾರದಲ್ಲಿ ನೆಲೆಸಿರುವ ಶ್ರೀದೇವಿಯು "**ಪಂಚವಕ್ತ್ರಾ**". ದೇಹದಲ್ಲಿರುವ ಮೂಳೆಯೂ ಪೃಥ್ವೀ ತತ್ವ. ಆದುದರಿಂದ **"ಅಸ್ಥಿ ಸಂಸ್ಥಿತಾ".** ಸಪ್ತಸ್ವರಗಳಲ್ಲಿ ನಿಷಾದ ಸ್ವರಕ್ಕೆ ಪ್ರಧಾನ ಸ್ಥಳ. ಮೂಲಾಧಾರ ಚಕ್ರದ ತುದಿಯಲ್ಲಿ ನೆಲೆಸಿರುವವಳಾದುದರಿಂದ ಶ್ರೀದೇವಿಯು ಕುಂಡಲಿನೀ ಶಕ್ತಿಯಾಗಿರುತ್ತಾಳೆ. ಮೋಕ್ಷ ಕ್ರಮದಲ್ಲಿ ಅವಿದ್ಯಾ ಶಕ್ತಿಗಳನ್ನೆಲ್ಲಾ ನಿಗ್ರಹಿಸಿ, ಮೋಕ್ಷ ಸಾಮ್ರಾಜ್ಯವನ್ನು ಅನುಗ್ರಹಿಸುವ **"ಸಾಕಿನೀ"** ಎಂಬ ಮಾತೆಯ ಸ್ವರೂಪದಲ್ಲಿರುವವಳು. ನಮ್ಮಲ್ಲಿರುವ ಸೂರ್ಯನಾಡಿ (ಗಂಗೆ), ಚಂದ್ರನಾಡಿ (ಯಮುನೆ), ಸುಷುಮ್ನಾನಾಡಿ (ಸರಸ್ವತಿ) ಗಳಾದ ಈ ಮೂರೂ ಸಂಗಮಿಸುವ ಸ್ಥಳಕ್ಕೆ ತ್ರಿಕೂಟವೆಂದು, ಶ್ರೀ ಶಂಕರ ಭಗವತ್ಪಾದರು ಹೇಳಿರುತ್ತಾರೆ. ಈ ಮೂರೂ ಮೂಲಾಧಾರ ಚಕ್ರದಲ್ಲಿ ಸೇರುತ್ತವೆ ಮತ್ತು ಭ್ರೂಮಧ್ಯದಲ್ಲಿ ಸೇರುತ್ತವೆ. ಈ ಮೂರುನಾಡಿಗಳೂ ದೇಹದಲ್ಲಿ ಮೂರು ಶಿಖರಗಳಂತಿವೆ. ಶ್ರೀಮಾತೆಯು ಇಂತಹಾ ಕೂಟ ಸ್ವರೂಪಳಾದ "**ತ್ರಿಕೂಟಾ**". ದೇವಿಯು ಅಂಕುಶ-ಕಮಲ-ಪುಸ್ತಕ-ಜ್ಞಾನ ಮುದ್ರೆಗಳನ್ನು ಕೈಯ್ಯಲ್ಲಿ ಧರಿಸಿರುವವಳೂ ಮತ್ತು ಮುದ್ಗಾನ್ನದಲ್ಲಿ ಆಸಕ್ತಳೂ ಆಗಿರುತ್ತಾಳೆಂದು ಲಲಿತಾ ಸಹಸ್ರನಾಮದಲ್ಲಿ ವಶಿನ್ಯಾದಿ ವಾಗ್ದೇವತೆಯರು ವಿವರಿಸಿದ್ದಾರೆ.

ಜನನಿಯ ಪೃಥ್ವಿತತ್ವಯುಕ್ತವಾದ ಮೂಲಾಧಾರ ಚಕ್ರದ ತ್ರಿಕೋನದಲ್ಲಿ ಸಮಯವೆಂಬ ಶಕ್ತಿರೂಪದೊಡನೆ ತಾಂಡವ ನೃತ್ಯಗೈವ ಆನಂದಭೈರವ - ಮಹಾಭೈರವಿಯರ ಸಹಯೋಗದಿಂದ ಈ ಚರಾಚರ ಜಗತ್ತು ಜನ್ಮಿಸಿದೆ ಎಂದು ಸೌಂದರ್ಯಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು ವರ್ಣಿಸಿದ್ದಾರೆ.

**ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್ ।**

**ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ॥**



**ವಜ್ರಹಸ್ತಾ ತದ್ವೈವೈಂದ್ರೀ ಗಜರಾಜೋಪರಿ ಸ್ಥಿತಾ।**

**ಪ್ರಾಪ್ತಾ ಸಹಸ್ರನಯನಾ ಯಥಾ ಶಕ್ರಸ್ತಥೈವ ಸಾ॥**

**ಓಂ ಶ್ರೀ ಇಂದ್ರಾಣೀ ದೇವತಾಯೈ ನಮಃ॥**

**ಇಂದ್ರಭೂತಾಯೈ ವಿದ್ಮಹೇ ವಜ್ರಹಸ್ತಾಯೈ ಧೀಮಹೀ**

**ತನ್ನೋ ಇಂದ್ರಾಣೀ ಪ್ರಚೋದಯಾತ್॥**

**ಇಂದ್ರಭೂತಾಯೈ ವಿದ್ಮಹೇ ವಜ್ರಹಸ್ತಾಯೈ ಧೀಮಹೀ**

**ತನ್ನೋ ಇಂದ್ರಾಣೀ ಪ್ರಚೋದಯಾತ್॥**

**ಇಂದ್ರಭೂತಾಯೈ ವಿದ್ಮಹೇ ವಜ್ರಹಸ್ತಾಯೈ ಧೀಮಹೀ**

**ತನ್ನೋ ಇಂದ್ರಾಣೀ ಪ್ರಚೋದಯಾತ್॥**


**ಐಂದ್ರೀ ಸಹಸ್ರದೃಕ್ ಸೌಮ್ಯಾ ಹೇಮಾಭಾ ಗಜಸಂಸ್ಥಿತಾ। ವರದಾ ಸೂತ್ರಿಣೀ ವಜ್ರಂ ಬಿಭ್ರತ್ಯೋರ್ಧ್ವಂ ತು ದಕ್ಷಿಣೇ।**
**ವಾಮೇ ತು ಕಮಲಂ ಪಾತ್ರಂ ಹೃಭಯಂ ತದಧಃ ಕರೇ॥**

**ಸ್ವಾಧಿಷ್ಠಾನಾಂಬುಜಗತಾ ಚತುರ್ವಕ್ತ್ರ ಮನೋಹರಾ। ಶೂಲಾದ್ಯಾಯುಧಸಂಪನ್ನಾ ಪೀತವರ್ಣಾತಿಗರ್ವಿತಾ॥**
**ಮೇಧೋನಿಷ್ಠಾ ಮಧುಪ್ರೀತಾ ಬಂದಿನ್ಯಾದಿ ಸಮನ್ವಿತಾ। ದಧ್ಯನ್ನಾಸಕ್ತ ಹೃದಯಾ ಕಾಕಿನೀರೂಪಧಾರಿಣೀ॥**

ಸ್ವಾಧಿಷ್ಠಾನ ಚಕ್ರಕ್ಕೆ ಸಪ್ತಮಾತೃಕೆಯರಲ್ಲಿ ಶ್ರೀ ಇಂದ್ರಾಣೀ ದೇವಿಯು ಅಧಿದೇವತೆಯು. ಸ್ವಾಧಿಷ್ಠಾನ ಚಕ್ರವು ಆರು ದಳಗಳುಳ್ಳದ್ದಾಗಿ, ಈ ಆರು ದಳಗಳೂ ಬ,ಭ,ಮ,ಯ,ರ,ಲ ಎಂಬ ಅಕ್ಷರ ಶಕ್ತಿಗಳಾಗಿವೆ. ಈ ಆರು ಅಕ್ಷರಗಳಿಗೂ ಬಂದಿನೀ, ಭದ್ರಕಾಳೀ, ಮಹಾಮಾಯಾ, ಯಶಸ್ವಿನೀ, ರಮ, ಲಂಬೋಷ್ಠಿಯರು ಅಭಿಮಾನ ದೇವತಾ ಶಕ್ತಿಗಳು. ಸ್ವಾಧಿಷ್ಠಾನ ಚಕ್ರವು "ಭುವಃ" (ಜಲ) ತತ್ತ್ವದ್ದಾಗಿದೆ. ಆಕಾಶದಿಂದ ವಾಯುವು ಉತ್ಪನ್ನವಾಗಿ, ವಾಯುವಿನಿಂದ ಅಗ್ನಿಯು ಉತ್ಪನ್ನವಾಗಿ, ಅಗ್ನಿಯಿಂದ ಜಲವು ಉತ್ಪನ್ನವಾಗಿರುವುದರಿಂದ, ಆಕಾಶ, ವಾಯು, ಅಗ್ನಿ, ಜಲ ಈ ನಾಲ್ಕೂ ಸೇರಿರುವುದೆಂಬ ಸೂಚನೆಯನ್ನು ಅನುಸರಿಸಿ, ಸ್ವಾಧಿಷ್ಠಾನದಲ್ಲಿರುವ ಶ್ರೀದೇವಿಯು **"ಚತುರ್ವಕ್ತ್ರ ಮನೋಹರಾ".** ಸಪ್ತಸ್ವರಗಳಲ್ಲಿ ಧೈವತ ಸ್ವರ ಪ್ರಧಾನವಾಗಿದೆ. ಶೂಲವೇ ಮೊದಲಾದ ಆಯುಧಗಳನ್ನು ಧರಿಸಿರುವಳೆಂದೂ, ಹಳದೀ ವರ್ಣದವಳೆಂದೂ, ಈ ಚಕ್ರದ ಕೆಳಭಾಗದಲ್ಲಿ ಅಧಿಷ್ಠಾನವಾಗಿ ಶ್ರೀ ಕುಂಡಲಿನೀ ಶಕ್ತಿಯು ಇರುವುದರಿಂದಲೂ ಮತ್ತು ಸಕಲ ನಾಡೀ ಚೈತನ್ಯಗಳು ಸ್ವಾಧಿಷ್ಠಾನದಲ್ಲಿ ಸೇರುವುದರಿಂದ ಅತಿ ಗರ್ವಿತಳೆಂದೂ, ಮೇಧಸ್ಸಿಗೆ ಅಧಿದೇವತೆಯೆಂದೂ, ದಧ್ಯನ್ನದಲ್ಲಿ ಆಸಕ್ತಳೆಂದೂ, ಕಾಕಿನೀ ರೂಪಧಾರಿಣಿಯೆಂದೂ ಸಹಾ ಲಲಿತಾ ಸಹಸ್ರನಾಮ ಸ್ತೋತ್ರದಲ್ಲಿ ವಶಿನ್ಯಾದಿ ವಾಗ್ದೇವತೆಗಳಿಂದ ವರ್ಣಿತವಾಗಿದೆ.

ಸ್ವಾಧಿಷ್ಠಾನ ಚಕ್ರದಲ್ಲಿ ಪ್ರಳಯ ಕಾಲಾಗ್ನಿಯಾದ ಈಶ್ವರನು ಸಕಲ ಲೋಕಗಳನ್ನು ಸುಡುತ್ತಿದ್ದರೆ, ಚಂದ್ರಧಾರಿಣಿಯಾದ ದೇವಿಯು ತನ್ನ ದಯಾರ್ದ್ರ ದೃಷ್ಟಿಯಿಂದ ದಗ್ಧಲೋಕಗಳನ್ನು ಶೈತ್ಯೋಪಚಾರ ಮಾಡುತ್ತಾ ಜಗತ್ತನ್ನು ಉದ್ಧರಿಸುತ್ತಾಳೆಂದು ಸೌಂದರ್ಯಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು ವರ್ಣಿಸಿದ್ದಾರೆ.

**ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ ನಿರತಂ ತಮೀಡೇ ಸಂವರ್ತಂ ಜನನಿ ಮಹತೀಂ ತಾಂ ಚ ಸಮಯಾಮ್ ।**
**ಯದಾಲೋಕೇ ಲೋಕಾನ್ ದಹತಿ ಮಹತಿ ಕ್ರೋಧಕಲಿತೇ ದಯಾರ್ದ್ರಾ ಯಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ ॥**



**ಯಜ್ಞವಾರಾಹಮತುಲಂ ರೂಪಂ ಯಾ ಬಿಭ್ರತೋ ಹರೇಃ।**
**ಶಕ್ತಿಸ್ಸಾಪ್ಯಾಯಯೌ ತತ್ರ ವಾರಾಹೀ ಬಿಭ್ರತೀ ತಮಂ॥**

**ಓಂ ಶ್ರೀ ವಾರಾಹೀ ದೇವತಾಯೈ ನಮಃ॥**
**ಪ್ರಜಾಪತಿಭೂತಾಯೈ ವಿದ್ಮಹೇ ಗದಾಹಸ್ತಾಯೈ ಧೀಮಹೀ**
**ತನ್ನೋ ವಾರಾಹೀ ಪ್ರಚೋದಯಾತ್॥**
**ಪ್ರಜಾಪತಿಭೂತಾಯೈ ವಿದ್ಮಹೇ ಗದಾಹಸ್ತಾಯೈ ಧೀಮಹೀ**
**ತನ್ನೋ ವಾರಾಹೀ ಪ್ರಚೋದಯಾತ್॥**
**ಪ್ರಜಾಪತಿಭೂತಾಯೈ ವಿದ್ಮಹೇ ಗದಾಹಸ್ತಾಯೈ ಧೀಮಹೀ**
**ತನ್ನೋ ವಾರಾಹೀ ಪ್ರಚೋದಯಾತ್॥**

**ಕೃಷ್ಣವರ್ಣಾತುವಾರಾಹೀ ಮಹಿಷಸ್ಥಾ ಮಹೋದರೀ। ವರದಾ ದಂಡಿನೀ ಖಡ್ಗಂ ಬಿಭ್ರತಿ ದಕ್ಷಿಣೇ ಕರೇ।**

**ಖೇಟಪಾತ್ರಾ ಭಯಾನ್ವಾಮೇ ಸೂಕರಸ್ಯಾಲಸದ್ಭುಜಾ॥**

**ಮಣಿಪೂರಾಂತರುದಿತಾ ವಿಷ್ಣುಗ್ರಂಥಿವಿಭೇದಿನೀ। ಮಣಿಪೂರಾಬ್ಜನಿಲಯಾ ವದನತ್ರಯ ಸಂಯುತಾ।**

**ವಜ್ರಾಧಿಕಾಯುಧೋಪೇತಾ ಡಾಮರ್ಯಾದಿಭಿರಾವೃತಾ। ರಕ್ತವರ್ಣಾ ಮಾಂಸನಿಷ್ಠಾ ಗುಡಾನ್ನಪ್ರೀತ ಮಾನಸಾ।**

**ಸಮಸ್ತ ಭಕ್ತ ಸುಖದಾ ಲಾಕಿಣ್ಯಂಬಾ ಸ್ವರೂಪಿಣೀ॥**

ಮಣಿಪೂರಚಕ್ರಕ್ಕೆ ಸಪ್ತಮಾತೃಕೆಯರಲ್ಲಿ ಶ್ರೀ ವಾರಾಹೀ ದೇವಿಯು ಅಧಿದೇವತೆಯು. ಮಣಿಪೂರಚಕ್ರವು ಹತ್ತು ದಳಗಳುಳ್ಳದ್ದಾಗಿ, ಈ ಹತ್ತು ದಳಗಳೂ ಡ,ಢ,ಣ,ತ,ಥ,ದ,ಧ,ನ,ಪ,ಫ ಎಂಬ ಹತ್ತು ಅಕ್ಷರ ಶಕ್ತಿಗಳಾಗಿವೆ. ಈ ಹತ್ತು ಅಕ್ಷರಗಳಿಗೂ ಡಾಮರೀ, ಢಂಕಾರಿಣೀ, ಣಾಮಿನಿ, ತಾಮಸಿ, ಸ್ಥಾಣ್ವೀ, ದಾಕ್ಷಾಯಣೀ, ಧಾತ್ರೀ, ನಂದಾ, ಪಾರ್ವತೀ, ಫಟ್ಕಾರಿಣಿಯರು ಅಭಿಮಾನ ದೇವತಾ ಶಕ್ತಿಗಳು. ಮಣಿಪೂರ ಚಕ್ರವು ಅಗ್ನಿ ತತ್ತ್ವಕ್ಕೆ ಪ್ರಧಾನವಾಗಿಯೂ, ಸಪ್ತವ್ಯಾಹೃತಿಗಳಲ್ಲಿ ಸುವಃ ತತ್ತ್ವದ್ದಾಗಿಯೂ, ಸಪ್ತಸ್ವರಗಳಲ್ಲಿ ಪಂಚಮ ಸ್ವರಕ್ಕೆ ಪ್ರಧಾನ ಸ್ಥಳವಾಗಿಯೂ ಇರುತ್ತದೆ. ಮಣಿಪೂರ ಚಕ್ರವು ಅಗ್ನಿ ತತ್ತ್ವಕ್ಕೆ ಪ್ರಧಾನವಾದುದರಿಂದಲೂ, ಅಗ್ನಿಯು ಆಕಾಶದಿಂದ ಉತ್ಪನ್ನವಾದ ವಾಯುವಿನಿಂದ ಉತ್ಪನ್ನವಾದುದರಿಂದ, ಆಕಾಶ, ವಾಯು, ಅಗ್ನಿ ಈ ಮೂರೂ ತತ್ತ್ವಗಳು ಸೇರಿರುವುದೆಂಬ ಸೂಚನೆಯನ್ನು ಅನುಸರಿಸಿ, ಮಣಿಪೂರ ಚಕ್ರದಲ್ಲಿರುವ ಶ್ರೀದೇವಿಯು **"ವದನತ್ರಯ ಸಂಯುತಾ".** ಮಣಿಪೂರ ಚಕ್ರದಲ್ಲಿರುವ ದೇವಿಯು ಹತ್ತು ದಳಗಳಿರುವ ನಾಭೀ ಪದ್ಮದಲ್ಲಿ ರಕ್ತವರ್ಣದವಳಾಗಿದ್ದು, ಶಕ್ತಿ-ವಜ್ರ-ದಂಡ-ಅಭಯಗಳನ್ನು ಕೈಯ್ಯಲ್ಲಿ ಧರಿಸಿದ್ದು, ಅತ್ಯಂತ ಉಗ್ರ ಸ್ವರೂಪಿಯಾಗಿದ್ದು, "ಡಾಮರಿ" ಮೊದಲಾದ ಶಕ್ತಿಗಳಿಂದ ಪರಿವೃತಳಾಗಿದ್ದು, ಅಜ್ಞಾನಿಗಳಿಗೆ ಭಯವನ್ನೂ, ಭಕ್ತರಿಗೆ ಅಭಯವನ್ನೂ, ಸುಖವನ್ನೂ ನೀಡುವವಳಾಗಿದ್ದು, ಸಿಹಿ ಪದಾರ್ಥದಲ್ಲಿ ಅಭಿರುಚಿ ಹೊಂದಿದ್ದು, "ಲಾಕಿನೀ" ಎಂಬ ಹೆಸರಿನಿಂದ ಪ್ರಖ್ಯಾತಳಾಗಿರುತ್ತಾಳೆಂದು ಲಲಿತಾ ಸಹಸ್ರನಾಮದಲ್ಲಿ ವಶಿನ್ಯಾದಿ ವಾಗ್ದೇವತೆಯರು ವಿವರಿಸಿದ್ದಾರೆ.

ಬಾಹ್ಯ ಪ್ರಪಂಚದ ತಪನವನ್ನು ಈಶ್ವರನು ಆರ್ದ್ರಗೊಳಿಸಿದರೆ, ಸಾಧಕನ ಅಜ್ಞಾನಾಂಧಕಾರವನ್ನೂ, ತಮಸ್ಸನ್ನೂ ನಾಶಮಾಡಿ ಜ್ಞಾನಸಂಪತ್ತನ್ನು ದೇವಿಯು ಅನುಗ್ರಹಿಸುತ್ತಾಳಾದ್ದರಿಂದ ಶಿವ-ಶಕ್ತಿಯರನ್ನು ಧ್ಯಾನಿಸುವುದು ಅವಶ್ಯಕವೆಂದು ಸೌಂದರ್ಯಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು ನಿರೂಪಿಸಿದ್ದಾರೆ.

**ತಟಿತ್ತ್ವಂತಂ ಶಕ್ತ್ಯಾ ತಿಮಿರಪರಿಪಂಥಿ ಸ್ಫುರಣಯಾ ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರಧನುಷಮ್ ।**

**ತವ ಶ್ಯಾಮಂ ಮೇಘಂ ಕಮಪಿ ಮಣಿಪೂರೈಕಶರಣಂ ನಿಷೇವೇ ವರ್ಷಂತಂ ಹರಮಿಹಿರತಪ್ತಂ ತ್ರಿಭುವನಮ್ ॥**



**ತಥೈವ ವೈಷ್ಣವೀ ಶಕ್ತಿರ್ಗರುಡೋಪರಿ ಸಂಸ್ಥಿತಾ। ಶಂಖಚಕ್ರಗದಾಶಾರ್ಙಗ ಖಡ್ಗ ಹಸ್ತಾಭ್ಯುಪಾಯಯೌ॥**

**ಓಂ ಶ್ರೀ ವೈಷ್ಣವೀ ದೇವತಾಯೈ ನಮಃ॥**

**ವಿಷ್ಣುಭೂತಾಯೈ ವಿದ್ಮಹೇ ಚಕ್ರಹಸ್ತಾಯೈ ಧೀಮಹೀ ತನ್ನೋ ವೈಷ್ಣವೀ ಪ್ರಚೋದಯಾತ್॥**

**ವಿಷ್ಣುಭೂತಾಯೈ ವಿದ್ಮಹೇ ಚಕ್ರಹಸ್ತಾಯೈ ಧೀಮಹೀ ತನ್ನೋ ವೈಷ್ಣವೀ ಪ್ರಚೋದಯಾತ್॥**

**ವಿಷ್ಣುಭೂತಾಯೈ ವಿದ್ಮಹೇ ಚಕ್ರಹಸ್ತಾಯೈ ಧೀಮಹೀ ತನ್ನೋ ವೈಷ್ಣವೀ ಪ್ರಚೋದಯಾತ್॥**

**ವೈಷ್ಣವೀ ತಾರ್ಕ್ಷ್ಯಗಾ ಶ್ಯಾಮಾ ಷಡ್ಭುಜಾ ವನಮಾಲಿನೀ। ವರದಾ ಗದಿನೀ ದಕ್ಷೇ ಬಿಭ್ರತೀ ಚ ಕರೇಂಬುಜಮ್।**
**ಶಂಖಚಕ್ರಭಯಾನ್ ವಾಮೇ ಸಾಚೇಯಂ ವಿಲಸದ್ಭುಜಾ॥**

**ಅನಾಹತಾಬ್ಜನಿಲಯಾ ಶ್ಯಾಮಾಭಾ ವದನದ್ವಯಾ। ದಂಷ್ಟ್ರೋಜ್ಜ್ವಲಾಕ್ಷಮಾಲಾಧಿದರಾ ರುಧಿರ ಸಂಸ್ಥಿತಾ।**
**ಕಾಲರಾತ್ರ್ಯಾದಿಶಕ್ತ್ಯೌಘಾ ವೃತಾಸ್ನಿಗ್ಧೌದನಪ್ರಿಯಾ। ಮಹಾವೀರೇಂದ್ರ ವರದಾ ರಾಕಿಣ್ಯಂಬಾ ಸ್ವರೂಪಿಣೀ॥**

ಅನಾಹತಚಕ್ರಕ್ಕೆ ಸಪ್ತಮಾತೃಕೆಯರಲ್ಲಿ ಶ್ರೀ ವೈಷ್ಣವೀ ದೇವಿಯು ಅಧಿದೇವತೆಯು. ಅನಾಹತಚಕ್ರವು ಹನ್ನೆರಡು ದಳಗಳುಳ್ಳದ್ದಾಗಿ, ಈ ಹನ್ನೆರಡು ದಳಗಳೂ ಕ,ಖ,ಗ,ಘ,ಙ,ಚ,ಛ,ಜ,ಝ,ಞ,ಟ,ಠ ಎಂಬ ಅಕ್ಷರ ಶಕ್ತಿಗಳಾಗಿವೆ. ಈ ಹನ್ನೆರಡು ಅಕ್ಷರಗಳಿಗೂ ಕಾಳರಾತ್ರಿ, ಖಾತೀತ, ಗಾಯತ್ರೀ, ಘಂಟಾಧಾರಿಣೀ, ಙಾಮಿನಿ, ಚಂದ್ರಾ, ಛಾಯಾ, ಜಯ, ಝುಂಕಾರಿ, ಜ್ಞಾನರೂಪ, ಟಂಕಹಸ್ತಾ, ಠಂಕಾರಿಣೀ ಅಭಿಮಾನ ದೇವತಾ ಶಕ್ತಿಗಳು. ಅನಾಹತ ಚಕ್ರದಲ್ಲಿ ನೆಲೆಸಿರುವ ಶ್ರೀದೇವಿಯು ಹನ್ನೆರಡು ಅಕ್ಷರಗಳ ಅಭಿಮಾನ ದೇವತಾ ಶಕ್ತಿಗಳಿಂದ ಪರಿವೃತಳಾಗಿರುವಳು. ಅನಾಹತ ಚಕ್ರವು ನಮ್ಮ ಎದೆಯ ಸ್ಥಳದಲ್ಲಿ ವಾಯುತತ್ತ್ವಕ್ಕೆ ಪ್ರಧಾನವಾಗಿಯೂ, ಸಪ್ತವ್ಯಾಹೃತಿಗಳಲ್ಲಿ ಮಹಸ್ತತ್ತ್ವವಾಗಿಯೂ, ಸಪ್ತಸ್ವರಗಳಲ್ಲಿ ಮಧ್ಯಮ ಸ್ವರಕ್ಕೆ ಪ್ರಧಾನ ಸ್ಥಳವಾಗಿಯೂ ಇರುತ್ತದೆ. ಅನಾಹತಾಬ್ಜನಿಲಯೆಯಾದ ಪರಮೇಶ್ವರಿಯು ಹನ್ನೆರಡು ದಳಗಳುಳ್ಳ ಹೃತ್ಕಮಲದಲ್ಲಿ, ಆಕಾಶ ಮತ್ತು ವಾಯು ತತ್ತ್ವಗಳನ್ನು ಸೂಚಿಸುವ ಎರಡು ಮುಖಗಳನ್ನೂ, ಪ್ರಕಾಶಿಸುವ ಕೋರೆಗಳನ್ನೂ ಹೊಂದಿದ್ದು, ನೀಲವರ್ಣದವಳಾಗಿ, ಚಕ್ರ-ಶೂಲ-ಕಪಾಲ-ಢಮರುಗಳನ್ನು ಕೈಯ್ಯಲ್ಲಿ ಧರಿಸಿದ್ದು, ರಕ್ತಕ್ಕೆ ಅಭಿಮಾನ ದೇವತೆಯಾದವಳೂ, ಸ್ನಿಗ್ಧಾಹಾರದಲ್ಲಿ ಅಭಿರುಚಿಯುಳ್ಳವಳೂ, ವೀರೇಂದ್ರ ವಂದ್ಯಳೂ, ಇಷ್ಟಫಲದಾಯಿನಿಯೂ ಆಗಿದ್ದು, ದೇಹವ್ಯಾಪಾರ ರೂಪವಾದ ಪಾಲನಾ ಸುಖವನ್ನೂ, ಪಾರಮಾರ್ಥಿಕ ಸುಖವನ್ನೂ, ಅನುಗ್ರಹಿಸುವವಳಾಗಿ **"ರಾಕಿಣೀ"** ಎಂಬ ಹೆಸರು ಪಡೆದಿರುವವಳಾಗಿರುತ್ತಾಳೆಂದು ಲಲಿತಾ ಸಹಸ್ರನಾಮದಲ್ಲಿ ವಶಿನ್ಯಾದಿ ವಾಗ್ದೇವತೆಗಳು ಚಿತ್ರಿಸಿದ್ದಾರೆ.

ವಾಯುತತ್ತ್ವಕ್ಕೆ ಪ್ರಧಾನವಾದ ಅನಾಹತ ಚಕ್ರದಲ್ಲಿರುವ ಶಿವ-ಶಕ್ತಿಯರು ಮಹಾತ್ಮರ ಮಾನಸ ಸರೋವರದಲ್ಲಿ ವಿಹರಿಸುವ ಜೋಡಿಗಳಾಗಿದ್ದು, ಅವರ ಮಧುರ ಮಾತುಗಳೇ ಅಷ್ಟಾದಶ ವಿದ್ಯೆಗಳಾಗಿ ಪರಿಣಮಿಸಿತು ಎನ್ನಲಾಗಿದೆ. ಜ್ಞಾನದ ಮೂಲವೇ ಈ ಜೋಡಿ ಹಂಸಗಳೆಂಬ ಭಾವನೆಯನ್ನು ಪ್ರತಿಪಾದಿಸುವ ಶ್ರೀ ಶಂಕರ ಭಗವತ್ಪಾದರ ಸೌಂದರ್ಯಲಹರಿಯ ಅನಾಹತಾಬ್ಜ ನಿಲಯಾ ದೇವಿಯ ಶ್ಲೋಕ.

**ಸಮುನ್ಮೀಲತ್ ಸಂವಿತ್ ಕಮಲಮಕರಂದೈಕರಸಿಕಂ**
**ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್ ।**
**ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿ-**
**ರ್ಯದಾದತ್ತೇ ದೋಷಾತ್ ಗುಣಮಖಿಲಮದ್ಭ್ಯಃ ಪಯ ಇವ ॥**



ಕೌಮಾರೀ ಶಕ್ತಿಹಸ್ತಾ ಚ ಮಯೂರ ವರವಾಹನಾ।
ಯೋದ್ಧುಮಭ್ಯಾಯಯೌ ದೈತ್ಯಾನಂಬಿಕಾ ಗುಹರೂಪಿಣಿ॥
ಓಂ ಶ್ರೀ ಕೌಮಾರೀ ದೇವತಾಯೈ ನಮಃ॥

ಸ್ಕಂದಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ
ತನ್ನೋ ಕೌಮಾರೀ ಪ್ರಚೋದಯಾತ್॥
ಸ್ಕಂದಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ
ತನ್ನೋ ಕೌಮಾರೀ ಪ್ರಚೋದಯಾತ್॥
ಸ್ಕಂದಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ
ತನ್ನೋ ಕೌಮಾರೀ ಪ್ರಚೋದಯಾತ್॥

ಷಡಾನನಾ ತು ಕೌಮಾರೀ ಪಾಟಲಾಭಾ ಸುಶೀಲಕಾ। ರವಿಬಾಹುರ್ಮಯೂರಸ್ಥಾ ವರದಾ ಶಕ್ತಿಧಾರಿಣೀ।
ಪತಾಕಂ ಬಿಭ್ರತೀ ದಂಡಂ ಪಾತ್ರಂ ಬಾಣಂ ಚ ದಕ್ಷಿಣೇ। ವಾಮೇ ಚಾಪಮಧೋ ಘಂಟಾಂ ಕಮಲಂ ಕುಕ್ಕುಟಂ ತಥಾ।
ಪರಶುಂ ಬಿಭ್ರತೀ ಚೈವ ತದಧಸ್ತ್ವ ಭಯಾನ್ವಿತಾ॥
ವಿಷುದ್ಧ ಚಕ್ರನಿಲಯಾ ಆರಕ್ತವರ್ಣಾ ತ್ರಿಲೋಚನಾ। ಖಟ್ವಾಂಗಾದಿ ಪ್ರಹರಣಾ ವದನೈಕ ಸಮನ್ವಿತಾ॥
ಪಾಯಸಾನ್ನಪ್ರಿಯಾತ್ವಕ್ಸ್ಥಾ ಪಶುಲೋಕ ಭಯಂಕರೀ। ಅಮೃತಾದಿ ಮಹಾಶಕ್ತಿ ಸಂವೃತಾ ಡಾಕಿನೀಶ್ವರೀ॥

ಶ್ರೀ ಕೌಮಾರೀ ದೇವತೆಯು ವಿಶುದ್ಧ ಚಕ್ರದ ಅಧಿದೇವತೆಯು. ಹದಿನಾರು ದಳಗಳುಳ್ಳ ವಿಶುದ್ಧ ಚಕ್ರವು ಅ,ಆ,ಇ,ಈ, ಉ,ಊ,ಋ,ೠ,ಲು,ಲೂ,ಏ,ಐ,ಓ,ಔ,ಅಂ,ಅಃ ಎಂಬ ಸ್ವರಾಕ್ಷರಗಳ ತತ್ತ್ವದ್ದಾಗಿದೆ. ಅದ್ಭುತ, ಆಕರ್ಷಿಣಿ, ಇಂದ್ರಾಣಿ, ಈಶಾನಿ, ಉಷಃಕೇಶಿ, ಊರ್ಧ್ವಾ, ಋದ್ಧಿದಾ, ಋಕಾರಾ, ಲುಕಾರ, ಲೂಪ, ಏಕದದ, ಐಶ್ವರ್ಯ, ಓಂಕಾರೀ, ಔಷದೀ, ಅಂಬಿಕಾ, ಅಕ್ಷರ ಎಂಬ ಹದಿನಾರು ಅಕ್ಷರಗಳ ಅಭಿಮಾನ ದೇವತಾಶಕ್ತಿಯಿಂದ ಪರಿವೃತಳಾಗಿರುವಳು. ವಿಶುದ್ಧ ಚಕ್ರವು ನಮ್ಮ ಕಂಠದಲ್ಲಿ ಆಕಾಶ ತತ್ತ್ವಕ್ಕೆ ಪ್ರಧಾನವಾಗಿಯೂ, ಸಪ್ತವ್ಯಾಹೃತಿಗಳಲ್ಲಿ ಜನಃ ತತ್ತ್ವದ್ದಾಗಿಯೂ, ಸ್ವರಗಳಲ್ಲಿ ಗಾಂಧಾರ ಸ್ವರಕ್ಕೆ ಪ್ರಧಾನ ಸ್ಥಳವಾಗಿಯೂ ಇರುತ್ತದೆ. ವಿಶುದ್ಧ ಚಕ್ರದಲ್ಲಿ ನೆಲೆಸಿರುವ ದೇವಿಯನ್ನು ವಶಿನ್ಯಾದಿ ವಾಗ್ದೇವತೆಗಳು ಲಲಿತಾ ಸಹಸ್ರನಾಮದಲ್ಲಿ ನಸುಗೆಂಪಾಗಿರುವವಳೂ, ಸೂರ್ಯ, ಚಂದ್ರ, ನಕ್ಷತ್ರಗಳೆಂಬ ಮೂರು ಕಣ್ಣುಗಳುಳ್ಳವಳೂ, ಆಕಾಶ ತತ್ತ್ವವಾದ ಏಕಮುಖವುಳ್ಳವಳೂ, ತ್ವಗೀಂದ್ರಿಯದ ಅಧಿಷ್ಠಾತೃ ದೇವತೆಯೂ, ಇಂದ್ರಿಯ ಮತ್ತು ಪ್ರಾಣ ಚೇಷ್ಟೆಗಳಾದ ಅವಿದ್ಯಾ ಕಾರ್ಯಕ್ಕೆ ಭಯವನ್ನುಂಟುಮಾಡುವವಳೂ, ಮಧುರವಾದ ಪಾಯಸಾನ್ನದಲ್ಲಿ ಅಭಿರುಚಿಯುಳ್ಳವಳೂ, ಶತ್ರುಗಳನ್ನು ನಿಗ್ರಹ ಮಾಡುವವಳೂ, ಡಾಕಿನೀ ಸ್ವರೂಪವಾದ ಶಕ್ತಿಗಳಿಗೆಲ್ಲಾ ನಾಥಳಾಗಿರುವವಳು ಎಂದು ವಿವರಿಸಿದ್ದಾರೆ.

ಶ್ರೀ ಶಂಕರ ಭಗವತ್ಪಾದರ ವಿಶುದ್ಧ ಚಕ್ರದ ವಿವರಣೆ ಸೌಂದರ್ಯಲಹರಿಯಲ್ಲಿ ಹೀಗಿದೆ. ಶುದ್ಧ ಸ್ಫಟಿಕದ ಕಾಂತಿ ಹೊಂದಿರುವ ಶಿವ-ಶಿವೆಯರನ್ನು ಉಪಾಸಿಸುವುದರಿಂದ ಸಾಧಕನು ವೈಯಕ್ತಿಕ ದೃಷ್ಟಿಯಲ್ಲಿ ತನ್ನ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸಿಕೊಂಡು ಸಂತುಷ್ಟನಾಗಿದ್ದರೆ, ಸಮಿಷ್ಟಿ ದೃಷ್ಟಿಯಲ್ಲಿ ತ್ರಿಲೋಕದ ಅಂಧಕಾರವೇ ಕಳೆದುಹೋಗುತ್ತದೆ.

**ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ ವ್ಯೋಮಜನಕಂಶಿವಂ ಸೇವೇ ದೇವೀಮಪಿ ಶಿವಸಮಾನವ್ಯವಸಿತಾಮ್ ।**
**ಯಯೋಃ ಕಾಂತ್ಯಾ ಯಾಂತ್ಯಾಃ ಶಶಿಕಿರಣಸಾರೂಪ್ಯಸರಣೇವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತೀ ॥**



**ಮಹೇಶ್ವರೀ ವೃಷಾರೂಢಾ ತ್ರಿಶೂಲ ವರಧಾರಿಣೀ। ಮಹಾಹಿಮವಲಯಾ ಪ್ರಾಪ್ತಾ ಚಂದ್ರರೇಖಾ ವಿಭೂಷಣಾ॥**

**ಓಂ ಶ್ರೀ ಮಾಹೇಶ್ವರೀ ದೇವತಾಯೈ ನಮಃ॥**

**ಮಹೇಶ್ವರಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ**
**ತನ್ನೋ ಮಹೇಶ್ವರೀ ಪ್ರಚೋದಯಾತ್॥**
**ಮಹೇಶ್ವರಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ**
**ತನ್ನೋ ಮಹೇಶ್ವರೀ ಪ್ರಚೋದಯಾತ್॥**
**ಮಹೇಶ್ವರಭೂತಾಯೈ ವಿದ್ಮಹೇ ಶೂಲಹಸ್ತಾಯೈ ಧೀಮಹೀ**
**ತನ್ನೋ ಮಹೇಶ್ವರೀ ಪ್ರಚೋದಯಾತ್॥**

**ಮಹೇಶ್ವರೀ ವೃಷಾರೂಢಾ ಪಂಚವಕ್ತ್ರಾ ತ್ರಿಲೋಚನಾ। ಶ್ವೇತವರ್ಣಾ ದಶಭುಜಾ ಚಂದ್ರರೇಖಾ ವಿಭೂಷಿತಾ।।**
**ಖಡ್ಗಂ ವಜ್ರಂ ತ್ರಿಶೂಲಂ ಚ ಪರಶುಂ ಚಾಭಯಂ ವರಂ। ಪಾಶಂ ಘಂಟಾಂ ತಥಾ ನಾಗಮಂಕುಶಂ ಬಿಭ್ರತೀ ಕರೈಃ॥**

**ಆಜ್ಞಾಚಕ್ರಾಂತರಾಲಸ್ಥಾ ರುದ್ರಗ್ರಂಥಿವಿಭೇದಿನೀ। ಆಜ್ಞಾಚಕ್ರಾಬ್ಜನಿಲಯಾ ಶುಕ್ಲವರ್ಣಾ ಷಡಾನನಾ॥**
**ಮಜ್ಜಾಸಂಸ್ಥಾ ಹಂಸವತೀ ಮುಖ್ಯಶಕ್ತಿ ಸಮನ್ವಿತಾ। ಹರಿದ್ರಾನ್ನೈಕರಸಿಕಾ ಹಾಕಿನೀರೂಪಧಾರಿಣೀ॥**

ಶ್ರೀ ಮಾಹೇಶ್ವರೀ ದೇವತೆಯು ಭ್ರೂ ಮಧ್ಯಕ್ಕೆ ಸರಿಯಾಗಿರುವ ಆಜ್ಞಾಚಕ್ರದ ಅಧಿದೇವತೆ. ಆಜ್ಞಾಚಕ್ರದಲ್ಲಿ ಎರಡು ದಳಗಳಿದ್ದು, ಈ ಎರಡು ದಳಗಳೂ ಹ,ಕ್ಷ ಎಂಬ ಎರಡಕ್ಷರದ ಶಕ್ತಿಗಳಾಗಿವೆ. ಈ ಎರಡು, ಅಕ್ಷರಗಳಿಗೆ ಹಂಸವತಿ ಮತ್ತು ಕ್ಷಮಾವತಿಯರು ಅಭಿಮಾನ ದೇವತೆಗಳು. ಈ ಆಜ್ಞಾಚಕ್ರವು ಆಕಾಶಾಂತರ್ಗತವಾಗಿರುವ ಸಮಸ್ತ ತತ್ತ್ವಗಳೂ ಏಕೀಭವಿಸಿರುವ ಶುದ್ಧ ಶಕ್ತಿ ತತ್ತ್ವ ಪ್ರಧಾನವಾಗಿಯೂ, ಸಪ್ತವ್ಯಾಹೃತಿಗಳಲ್ಲಿ ತಪಃ ತತ್ತ್ವದ್ದಾಗಿಯೂ, ಸಪ್ತಸ್ವರಗಳಲ್ಲಿ ಋಷಭ ಸ್ವರಕ್ಕೆ ಪ್ರಧಾನ ಸ್ಥಳವಾಗಿಯೂ ಇರುತ್ತದೆ. ವಶಿನ್ಯಾದಿ ವಾಗ್ದೇವತೆಯರು ಲಲಿತಾ ಸಹಸ್ರನಾಮದಲ್ಲಿ ಆಜ್ಞಾಚಕ್ರದಲ್ಲಿ ನೆಲೆಸಿರುವ ದೇವತೆಯ ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ. ಭ್ರೂಮಧ್ಯದಲ್ಲಿರುವ ಎರಡು ದಳಗಳ ಬಿಂದು ಪದ್ಮದಲ್ಲಿ, ಎಲ್ಲಾ ವರ್ಣಗಳಿಗೂ ಮೂಲವಾದ ಮತ್ತು ಶ್ರೇಷ್ಠವಾದ ಶ್ವೇತವರ್ಣವುಳ್ಳವಳೂ, ಆರು ಮುಖಗಳುಳ್ಳವಳೂ, ದೇಹದಲ್ಲಿರುವ ಮಜ್ಜಾ ಧಾತುವಿಗೆ ಅಧಿದೇವತೆಯೂ, ಹಾಕಿನೀ ರೂಪವನ್ನು ಧರಿಸಿರುವವಳೂ, ಕಾಮನ ಬಿಲ್ಲಿನ ಬಣ್ಣದ ಸ್ವರೂಪಳೂ, ಆಕಾಶಾಂತರ್ಗತವಾಗಿ ವ್ಯಾಪಿಸಿರುವ ನಾದ, ಬಿಂದುಗಳಿಗೂ ಅತೀತವಾಗಿರುವ, ಆನಂದಮಯವಾಗಿರುವ ಶುದ್ಧ ಸತ್ತ್ವ ಗುಣವೆನಿಸುವ ಕಳಾಸ್ವರೂಪವೂ, ಜೀವನ್ಮುಕ್ತ ಸ್ಥಿತಿಯನ್ನು ಹೊಂದುವ ಮೋಕ್ಷ ಮಾರ್ಗದ ಸೋಪಾನಗಳ ತತ್ತ್ವವಾಗಿರುವ ಶುಕ್ಲಪಕ್ಷದ ಕಳಾಭಿವೃದ್ಧಿ ತತ್ತ್ವ ಹೊಂದಿರುವವಳೂ, ಕೇಸರಿಯ ಪರಿಮಳದಿಂದ ಕೂಡಿದ ಅನ್ನದಲ್ಲಿ ಆಸಕ್ತಳಾದವಳೂ, ಸಕಲರಿಗೂ ಸುಖವನ್ನುಂಟುಮಾಡುವವಳೂ ಆದ ಭಗವತಿಯನ್ನು ಧ್ಯಾನಿಸಬೇಕೆಂದು ಹೇಳಲಾಗಿದೆ.

ಸೌಂದರ್ಯಲಹರಿಯಲ್ಲಿ ಶ್ರೀ ಶಂಕರ ಭಗವತ್ಪಾದರು, ಹುಬ್ಬುಗಳ ಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ನೆಲೆಸಿ, ಕೋಟಿ ಕೋಟಿ ಸೂರ್ಯಚಂದ್ರರ ಕಾಂತಿಯನ್ನು ಹೊಂದಿರುವ ಶಿವ-ಪಾರ್ವತಿಯರನ್ನು ನಮಿಸಿದ ಭಕ್ತನು ಈ ಎಲ್ಲಾ ಪ್ರಕಾಶಗಳನ್ನು ಮೀರಿದ ಸಹಸ್ರಕಮಲವೆಂಬ ಲೋಕದಲ್ಲಿ ನೆಲೆಸಿ ಸಾಯುಜ್ಯಮುಕ್ತಿ ಹೊಂದುತ್ತಾನೆಂದು ತಿಳಿಸುತ್ತಿರುವ ಶ್ಲೋಕ.

**ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ ಪರಂ ಶಂಭುಂ ವಂದೇ ಪರಿಮಿಲಿತಪಾರ್ಶ್ವಂ ಪರಚಿತಾ ।**
**ಯಮಾರಾಧ್ಯನ್ ಭಕ್ತ್ಯಾ ರವಿಶಶಿಶುಚೀನಾಮವಿಷಯೇ ನಿರಾಲೋಕೇಽಲೋಕೇ ನಿವಸತಿ ಹಿ ಭಾಲೋಕಭುವನೇ ॥**



**ಹಂಸಯುಕ್ತವಿಮಾನಾಗ್ರೇ ಸಾಕ್ಷಸೂತ್ರಕಮಂಡಲುಃ। ಆಯಾತಾ**
**ಬ್ರಹ್ಮಣಶ್ಶಕ್ತಿರ್ಬ್ರಹ್ಮಾಣೀ ಸಾಭಿಧೀಯತೇ॥**

**ಓಂ ಶ್ರೀ ಬ್ರಾಹ್ಮೀ ದೇವತಾಯೈ ನಮಃ॥**

**ಬ್ರಹ್ಮಭೂತಾಯೈ ವಿದ್ಮಹೇ ಕುಶಹಸ್ತಾಯೈ ಧೀಮಹೀ**
**ತನ್ನೋ ಬ್ರಾಹ್ಮೀ ಪ್ರಚೋದಯಾತ್॥**

**ಬ್ರಹ್ಮಭೂತಾಯೈ ವಿದ್ಮಹೇ ಕುಶಹಸ್ತಾಯೈ ಧೀಮಹೀ ತನ್ನೋ**
**ಬ್ರಾಹ್ಮೀ ಪ್ರಚೋದಯಾತ್॥**

**ಬ್ರಹ್ಮಭೂತಾಯೈ ವಿದ್ಮಹೇ ಕುಶಹಸ್ತಾಯೈ ಧೀಮಹೀ ತನ್ನೋ**
**ಬ್ರಾಹ್ಮೀ ಪ್ರಚೋದಯಾತ್॥**

**ತತ್ರ ಬ್ರಾಹ್ಮೀ ಚತುರ್ವಕ್ತ್ರಾ ಷಡ್ಭುಜಾ ಹಂಸಸಂಸ್ಥಿತಾ। ಪಿಂಗಾಭಾ ಭೂಷಣೋಪೇತಾ ಮೃಗಚರ್ಮೋತ್ತರೀಯಕಾ॥**
**ವರಂ ಸೂತ್ರಂ ಸ್ರುವಂ ಧತ್ತೇ ದಕ್ಷಬಾಹುತ್ರಯೇಕ್ರಮಾತ್। ವಾಮೇ ತು ಪುಸ್ತಕಂ ಕುಂಡೀಂ ಬಿಭ್ರತೀ ಚಾಭಯಪ್ರದಂ॥**

**ಸುಮೇರುಮಧ್ಯಶೃಂಗಸ್ಥಾ ಶ್ರೀಮನ್ನಗರನಾಯಿಕಾ। ಚಿಂತಾಮಣಿಗೃಹಾಂತಸ್ಥಾ ಪಂಚಬ್ರಹ್ಮಾಸನಸ್ಥಿತಾ।**
**ಮಹಾಪದ್ಮಾಟವೀಸಂಸ್ಥಾ ಕದಂಬವನವಾಸಿನೀ। ಸುಧಾಸಾಗರಮಧ್ಯಸ್ಥಾ ಕಾಮಾಕ್ಷೀ ಕಾಮದಾಯಿನೀ।**

**ಸಹಸ್ರಾರಾಂಬುಜಾರೂಡಾ ಸುಧಾಸಾರಾಭಿವರ್ಷಿಣೀ। ತಟಿಲ್ಲತಾಸಮರುಚಿಃ ಷಟ್ಚಕ್ರೋಪರಿಸಂಸ್ಥಿತಾ।**
**ಸಹಸ್ರದಲಪದ್ಮಸ್ಥಾ ಸರ್ವವರ್ಣೋಪಶೋಭಿತಾ। ಸರ್ವಾಯುಧಧರಾ ಶುಕ್ಲಸಂಸ್ಥಿತಾ ಸರ್ವತೋಮುಖೀ।**
**ಸರ್ವೌದನಪ್ರೀತಚಿತ್ತಾ ಯಾಕಿನ್ಯಂಬಾ ಸ್ವರೂಪಿಣೀ॥**

ಬ್ರಾಹ್ಮಿಯು ಸಹಸ್ರಾರ ಕಮಲದಲ್ಲಿ ನೆಲೆಸಿರುವವಳು. ಸಹಸ್ರಾರ ಕಮಲವು ಮಹಾ ಕೈಲಾಸವು. ನಮ್ಮ ಶಿರಸ್ಸಿನಲ್ಲಿರುವ ಸಹಸ್ರಾರ ಕಮಲದಲ್ಲಿ ಪರಬ್ರಹ್ಮ ತತ್ತ್ವವೇ ಇರುವುದು. ಪರಬ್ರಹ್ಮವೇ ಆಗಿರುವ ಸಪ್ತವ್ಯಾಹೃತಿಗಳಲ್ಲಿನ ಸತ್ಯಂ ಎಂಬುದೂ,

ಸಪ್ತಮಾತೃಕೆಯರಲ್ಲಿ ಬ್ರಾಹ್ಮಿಯೂ, ಸಪ್ತಸ್ವರಗಳಲ್ಲಿನ ಷಡ್ಜಸ್ವರದ ತತ್ತ್ವಗಳೂ ಈ ಸ್ಥಾನದಲ್ಲಿರುತ್ತವೆ. ಎಲ್ಲ ಅಕ್ಷರ ಶಕ್ತಿಗಳಿಂದಲೂ, ಎಲ್ಲ ಬಣ್ಣಗಳಿಂದ ಶೋಭಿಸಲ್ಪಡುವವಳು, ಅಂದರೇ ಪರಬ್ರಹ್ಮವು ಸರ್ವಾಕ್ಷರ ಮತ್ತು ಸರ್ವವರ್ಣಗಳಿಗೂ ಮೂಲವಾದುದೆಂಬ ತತ್ತ್ವ. ಸಕರ ವಿಧವಾದ ಆಯುಧಗಳನ್ನು ಧರಿಸಿರುವವಳು ಎಂದರೆ ಪರಬ್ರಹ್ಮವೇ ಸಕಲವಿಧವಾದ ಸೃಷ್ಟಿ ರಕ್ಷಣೆ ಮತ್ತು ಲಯಗಳ ನಿಯಾಮಕಕ್ಕೂ ಕಾರಣವಾದುದು. ದೇಹಕ್ಕೆ ಮೂಲವಾದ ವೀರ್ಯಕ್ಕೆ ಅಧಿದೇವತೆಯಾಗಿರುವವಳು. ಪರಬ್ರಹ್ಮವೇ ಜಗತ್ತು. ಜಗತ್ತೇ ಪರಬ್ರಹ್ಮ. ಶ್ರೀದೇವಿಯೇ ಪರಬ್ರಹ್ಮ ಸ್ವರೂಪಿಣಿಯು, ಅಂದರೇ ಬೀಜಸ್ವರೂಪಿಣಿಯು. ಪರಬ್ರಹ್ಮವು ಸರ್ವತ್ರ ವ್ಯಾಪಿಸಿರುವುದರಿಂದ ಎಲ್ಲಾ ಕಡೆಯಲ್ಲೂ ಮುಖವುಳ್ಳವಳು. ಎಲ್ಲ ವಿಧವಾದ ಆಹಾರದಲ್ಲಿಯೂ ಪ್ರೀತಿಯುಳ್ಳವಳು. ವಾಣಿ ಎಂದರೆ ಪರಬ್ರಹ್ಮ ಸ್ವರೂಪಿಣಿಯಾದ ಸರಸ್ವತಿ ಅಥವಾ ಬ್ರಾಹ್ಮಿಯೇ ಆಗಿರುತ್ತಾಳೆ. ಸಹಸ್ರಾರ ಕಮಲಕ್ಕೆ ಸಪ್ತಮಾತೃಕೆಯರಲ್ಲಿ ಬ್ರಾಹ್ಮಿಯೇ ಅಧಿದೇವತೆಯಾಗಿರುತ್ತಾಳೆ. ಆದುದರಿಂದ "ಯಾಕಿನ್ಯಂಬಾ ಸ್ವರೂಪಿಣೀ", ಎಂದರೆ ಪರಬ್ರಹ್ಮ ಸ್ವರೂಪಿಣಿಯಾದ ಮಾತೆಯೇ ಆಗಿರುವಳು. ಆಕಾಶ ತತ್ತ್ವದಿಂದ ಭೂತತತ್ತ್ವದವರೆಗೂ ಆಗುವ ಸೃಷ್ಟಿ ಕ್ರಮವನ್ನು ಸೂಚಿಸುವ ತತ್ತ್ವವೇ ವಿಶುದ್ಧ ಚಕ್ರದಿಂದ ಮೂಲಾಧಾರದವರೆಗೂ ಇರುವ ಚಕ್ರಗಳ ತತ್ತ್ವವನ್ನು ತಿಳಿಸಿರುವುದಾಗಿದೆ. ಇದೇ ಸೃಷ್ಟಿಕ್ರಮದ ಶ್ರೀಚಕ್ರ. ನಮ್ಮ ದೇಹದಲ್ಲಿ ಮೂಲಾಧಾರಾದಿ ಷಟ್ಚಕ್ರಗಳೂ ಶ್ರೀಚಕ್ರಗಳಾಗಿರುವುವು. ಇವುಗಳಿಗೆಲ್ಲಾ ರಾಜನಂತಿರುವುದು ಸಹಸ್ರಾರ ಕಮಲ. ನಮ್ಮಲ್ಲಿ ಚಕ್ರಗಳಿರುವಂತೆ ಬ್ರಹ್ಮಾಂಡದಲ್ಲಿ ಲೋಕಗಳಿವೆ. ಇವುಗಳಿಗೆಲ್ಲಾ ರಾಜನಂತಿರುವುದೇ ಸರ್ವವ್ಯಾಪಕವಾದ ಪರಬ್ರಹ್ಮ ಸ್ಥಾನವು. ಆದುದರಿಂದ ಸಹಸ್ರಾರ ಕಮಲದಲ್ಲಿ ಸರ್ವವ್ಯಾಪಿಯಾಗಿ ನೆಲೆಸಿರುವ "ಶ್ರೀಚಕ್ರರಾಜನಿಲಯಾ" ಎಂದು ವಶಿನ್ಯಾದಿ ವಾಗ್ದೇವತೆಗಳು ಲಲಿತಾ ಸಹಸ್ರನಾಮದಲ್ಲಿ, ಮೋಕ್ಷಸಾಮ್ರಾಜ್ಯವನ್ನು ಹೊಂದುವ ಸಕಲ ಕಲ್ಯಾಣಗುಣಗಳಿಗೂ ಕುಂಡಲಿನಿಯ ಸ್ವರೂಪದಲ್ಲಿರುವ ಶ್ರೀದೇವಿಯು ಗಣಿಯಂತಿರುವಳೆಂದು ವರ್ಣಿಸಿದ್ದಾರೆ.

ಆಜ್ಞಾ ಚಕ್ರದಲ್ಲಿರುವ ಮನಸ್ ತತ್ತ್ವವೂ
ವಿಶುದ್ಧ ಚಕ್ರದಲ್ಲಿರುವ ಆಕಾಶ ತತ್ತ್ವವೂ,
ಅನಾಹತ ಚಕ್ರದಲ್ಲಿರುವ ವಾಯು ತತ್ತ್ವವೂ,
ಸ್ವಾಧಿಷ್ಠಾನ ಚಕ್ರದಲ್ಲಿರುವ ಅಗ್ನಿ ತತ್ತ್ವವೂ,
ಮಣಿಪೂರ ಚಕ್ರದಲ್ಲಿರುವ ಜಲ ತತ್ತ್ವವೂ,
ಮೂಲಾಧಾರ ಚಕ್ರದಲ್ಲಿರುವ ಪೃಥ್ವಿ ತತ್ತ್ವವೂ,

ಭಗವತಿಯಾದ ನೀನೇ ಆಗಿದ್ದೀಯಾ ಎನ್ನುವುದರ ಮೂಲಕ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಅವಳೇ ಕಾರಣಳೆಂದು ಜಗತ್ಕಾರಣಳೆಂದೂ ವರ್ಣಿಸುತ್ತಾ ಶ್ರೀದೇವಿಯ ಸರ್ವಾಂತರ್ಯಾಮಿತ್ವವನ್ನೂ, ಸರ್ವಶಕ್ತಿತ್ವವನ್ನೂ, ಸರ್ವರೂಪತ್ವವನ್ನೂ ಪ್ರತಿಪಾದಿಸಿರುವ ಶ್ರೀ ಶಂಕರ ಭಗವತ್ಪಾದರ ಸ್ತುತಿ ಸೌಂದರ್ಯಲಹರಿಯಲ್ಲಿ.

**ಮನಸ್ತ್ವಂ ವ್ಯೋಮತ್ವಂ ಮರುದಸಿ ಮರುತ್ಸಾರಥಿರಸಿ ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನ ಹಿ ಪರಮ್ ।**
**ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ ಚಿದಾನಂದಾಕಾರಂ ಶಿವಯುವತಿ ಭಾವೇನ ಬಿಭೃಷೇ ॥**

**ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್ ।**
**ಮಹಾಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ ॥**

ದೇವಿಯ ಆರಾಧನೆಯಿಂದ ಕವಿತ್ವ ಶಕ್ತಿ, ವಕ್ತೃತ್ವ ಕಲೆ, ಕಾವ್ಯ ಕರ್ತೃತ್ವ ಮುಂತಾದ ಶಕ್ತಿಗಳು ದೊರಕುವುದಷ್ಟೇ ಅಲ್ಲದೇ ಜೀವನ್ಮುಕ್ತಿಯನ್ನು ಪಡೆಯಲು ಅವಶ್ಯಕವಾದ ಭಾವನಾ ವಿಶೇಷವೂ ದೊರೆಯುತ್ತದೆಂಬುದನ್ನು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ. ಯಾರು ಆಜ್ಞಾ, ವಿಶುದ್ಧ, ಅನಾಹತ, ಸ್ವಾಧಿಷ್ಠಾನ, ಮಣಿಪೂರ, ಮೂಲಾಧಾರಗಳೆಂಬ ಷಟ್ಚಕ್ರ ಕಮಲಗಳ ಮೇಲೆ; ರುದ್ರ, ವಿಷ್ಣು, ಬ್ರಹ್ಮ ಗ್ರಂಥಿತ್ರಯಗಳಾದ ಮೇಲೆ; ಸಹಸ್ರಾರ ಕಮಲದಲ್ಲಿ ಚಂದ್ರನಿಭಳಾಗಿರುವ ಪರಬ್ರಹ್ಮನನ್ನು ಅರಿಯುತ್ತಾರೋ, ಆರಾಧಿಸುತ್ತಾರೋ ಅವರು ಪರಮಾನಂದವಾದ ಬ್ರಹ್ಮಾನಂದವನ್ನು ಹೊಂದುತ್ತಾರೆಂದು ತಿಳಿಸುತ್ತಾ ಸಾಧಕನ ಚರಮಗುರಿಯನ್ನು ವಿವರಿಸುತ್ತದೆ.

ಸಂಶಯಗ್ರಸ್ತ ವರ್ತನೆಗಳನ್ನು ತೊಲಗಿಸಿ, ಸರ್ವತ್ರ ಶ್ರೇಯಸ್ಸನ್ನೀಯಲೆಂದು ಪರಬ್ರಹ್ಮ ಸ್ವರೂಪವಾದ ಸಪ್ತಮಾತೃಕಾ ಶಕ್ತಿಗೆ ಪ್ರಣಾಮ ಮಾಡುತ್ತಾ, ಪರಾತ್ಪರ ವಸ್ತುವೇ ಈ ಶಕ್ತಿಯೆಂದು ಮಾತೃಕಾಶಕ್ತಿಯ ಮಹಿಮೆಯನ್ನು ಪ್ರತಿಪಾದಿಸುವ ಮಾರ್ಕಂಡೇಯ ಪುರಾಣದಲ್ಲಿ ಸಪ್ತವ್ಯಾಖ್ಯಾನಗಳುಳ್ಳ ದೇವೀ ಸಪ್ತಶತಿಯಲ್ಲಿರುವ ಸ್ತೋತ್ರದ ಮೂಲಕ ಶ್ರೀಮಾತೆಗೆ ವಂದನೆ.

**ಹಂಸಯುಕ್ತ ವಿಮಾನಸ್ಥೇ ಬ್ರಹ್ಮಾಣೀ ರೂಪಧಾರಿಣೀ। ಕೌಶಾಂಭಃಕ್ಷರಿಕೇ ದೇವಿ ನಾರಾಯಣಿ ನಮೋಸ್ತು ತೇ॥**
**ತ್ರಿಶೂಲ ಚಂದ್ರಾಹಿಧರೇ ಮಹಾವೃಷಭವಾಹಿನಿ। ಮಾಹೇಶ್ವರೀ ಸ್ವರೂಪೇಣ ನಾರಾಯಣಿ ನಮೋಸ್ತು ತೇ॥**
**ಮಯೂರಕುಕ್ಕುಟವೃತೇ ಮಹಾಶಕ್ತಿಧರೇನಘೇ। ಕೌಮಾರೀ ರೂಪಸಂಸ್ಥಾನೇ ನಾರಾಯಣಿ ನಮೋಸ್ತು ತೇ॥**
**ಶಂಖಚಕ್ರಗದಾಶಾಙ್ಗ ಗೃಹೀತ ಪರಮಾಯುಧೇ। ಪ್ರಸೀದ ವೈಷ್ಣವೀ ರೂಪೇ ನಾರಾಯಣಿ ನಮೋಸ್ತು ತೇ॥**
**ಗೃಹೀತೋಗ್ರ ಮಹಾಚಕ್ರೇ ದಂಷ್ಟ್ರೋದ್ಧೃತ ವಸುಂಧರೇ। ವರಾಹರೂಪಿಣಿ ಶಿವೇ ನಾರಾಯಣಿ ನಮೋಸ್ತು ತೇ॥**
**ಕಿರೀಟಿನಿ ಮಹಾವಜ್ರೇ ಸಹಸ್ರನಯನೋಜ್ಜ್ವಲೇ। ವೃತ್ರಪ್ರಾಣಹರೇ ಚೈಂದ್ರಿ ನಾರಾಯಣಿ ನಮೋಸ್ತು ತೇ॥**
**ದಂಷ್ಟ್ರಾಕರಾಲವದನೇ ಶಿರೋಮಾಲಾ ವಿಭೂಷಣೇ। ಚಾಮುಂಡೇ ಮುಂಡಮಥನೇ ನಾರಾಯಣಿ ನಮೋಸ್ತು ತೇ॥**

## ॥ ಶ್ರೀಜಗದಂಬಾರ್ಪಣಮಸ್ತು ॥







